ಸಂಪುಟ: 05 ಸಂಚಿಕೆ: 129 ಪುಟಗಳು: 08 ಮಂಗಳವಾರ 22 ಜುಲೈ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**


ಸರಳ ಜೀವನ ಮತ್ತು ಮೇಲ್ಮಟ್ಟದ ವಿಚಾರ ಮನುಷ್ಯನನ್ನು ಮಹಾನ್ ವ್ಯಕ್ತಿಯನ್ನಾಗಿ ಮಾಡುತ್ತದೆ.

# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಧರ್ಮಸ್ಥಳ ಪ್ರಕರಣ ಎಸ್‌ಐಟಿಗೆ ನೀಡಿದ ಕಾರಣ ಡಿಸಿಎಂ ಬಹಿರಂಗ

• ಉದಯವಾಹಿನಿ, ಬೆಂಗಳೂರು



ಸಣ್ಣ ವ್ಯಾಪಾರಿಗಳಿಗೆ ಜಿಎಸ್ ಟಿ ನೋಟೀಸ್ ಜಾರಿ ಮಾಡುವ ಮೂಲಕ ಬಿಜೆಪಿಯವರು ತಾವು ಬಾಳೆಹಣ್ಣು ತಿಂದು ನಮ್ಮ ಮೂತಿಗೆ ಒರೆಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಡಿಸಿಎಂ ಡಿಕೆ. ಶಿವಕುಮಾರ್ ತಿರುಗೇಟು ನೀಡಿದರು. ಸದಾಶಿವನಗರ ನಿವಾಸದ ಬಳಿ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದರು.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚನೆ ಬಗ್ಗೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿ, ಈ ವಿಚಾರವಾಗಿ ಪರ ವಿರೋಧ ಚರ್ಚೆ ಆಗುತ್ತಿದೆ. ಇದನ್ನು ಗೃಹ ಸಚಿವರು ನಿಭಾಯಿಸುತ್ತಿದ್ದು, ಬಹಳ ಹಿರಿಯ ಅಧಿಕಾರಿಗಳನ್ನು ಎಸ್‌ಐಟಿ ತಂಡದಲ್ಲಿ ನಿಯೋಜಿಸಿದ್ದಾರೆ. ತನಿಖೆ ನಂತರ ಸತ್ಯಾಸತ್ಯತೆ ತಿಳಿಯುತ್ತದೆ ಎಂದು ಡಿಕೆ ಶಿವಕುಮಾರ್ ಹೇಳಿದರು.

ಧರ್ಮಸ್ಥಳ ಪ್ರಕರಣವನ್ನು ವಿಷಯಾಂತರ ಮಾಡಲು ಎಸ್‌ಐಟಿ ರಚಿಸಿದ್ದಾರೆ ಎಂದು ಬಿಜೆಪಿಯವರು ಆರೋಪಿಸಿದ್ದಾರೆ. ನಾವು ಏನು ಮಾಡಿದರೂ ಬಿಜೆಪಿ ವಿರೋಧ ಮಾಡುತ್ತದೆ ಎಂದು ಡಿಕೆ ಶಿವಕುಮಾರ್ ಹೇಳಿದರು. ಸ್ಥಳೀಯ ಪೊಲೀಸ್ ತನಿಖೆ ನಂತರ ಎಸ್‌ಐಟಿ ರಚನೆ ಬಗ್ಗೆ ತೀರ್ಮಾನ ಎಂದು ಸಿಎಂ ಹೇಳಿದ ಬೆನ್ನಲ್ಲೇ ದಿಢೀರನೆ ಎಸ್‌ಐಟಿ ರಚನೆಯಾಗಿತ್ತು. ಮಾಧ್ಯಮಗಳು ಧರ್ಮಸ್ಥಳ ವಿಚಾರವನ್ನು ದೊಡ್ಡದಾಗಿ ಬಿಂಬಿಸಿದಾಗ ನಾವು ಮಾಧ್ಯಮಗಳಿಗೆ ಗೌರವ ನೀಡಬೇಕಲ್ಲವೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜಕ್ಕೆ ನ್ಯಾಯ ಒದಗಿಸುವಲ್ಲಿ ನಿಮಗೂ ನಮ್ಮಷ್ಟೇ ಜವಾಬ್ದಾರಿ ಇದೆ. ನಿಮ್ಮ ಹಾಗೂ ವಿರೋಧ ಪಕ್ಷಗಳ ಹಿತವಚನ, ನುಡಿಮುತ್ತುಗಳನ್ನು ನಾವು ಕೇಳಬೇಕು ಎಂದು ಡಿಕೆ ಶಿವಕುಮಾರ್ ವ್ಯಂಗ್ಯವಾಗಿ ಪ್ರತಿಕ್ರಿಯೆ ನೀಡಿದರು.

ಈ ನಡುವೆ, ವಿಶೇಷ ತನಿಖಾ ತಂಡದಲ್ಲಿರುವ ನಾಲ್ವರು ಅಧಿಕಾರಿಗಳ ಪೈಕಿ, ಈ ಇಬ್ಬರು ಅಧಿಕಾರಿಗಳು ಈ ತಂಡದಿಂದ ಹೊರಬರಲು ನಿರ್ಧರಿಸಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿತ್ತು.

**ವಿಶೇಷ ತನಿಖಾ ದಳದ ಸುಪರ್ದಿಗೆ**

ಇದಕ್ಕೆ, ಕೇಂದ್ರ ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆಯನ್ನು ನೀಡಿ, ಯಾರೂ ತಂಡದಿಂದ ಹೊರಗೆ ಹೋಗುತ್ತಿಲ್ಲ ಎಂದು ಹೇಳಿದ್ದಾರೆ. ವಿಶೇಷ ತನಿಖಾ ತಂಡವು ಬರೀ ಧರ್ಮಸ್ಥಳದ ಹೆಣ ಹೂತಿಟ್ಟ ಪ್ರಕರಣವನ್ನು ಮಾತ್ರ ವಿಚಾರಣೆ ಮಾಡುತ್ತಿಲ್ಲ. ಬದಲಿಗೆ, ರಾಜ್ಯದ ಇತರ ಠಾಣಾ ವ್ಯಾಪ್ತಿಯ ಕ್ರಿಮಿನಲ್ ಪ್ರಕರಣವನ್ನೂ ತನಿಖೆ ನಡೆಸಲಿದೆ. ಮತ್ತು, ಸೌಜನ್ಯ ಕೇಸಿಗೂ ಸಂಬಂಧವಿಲ್ಲ ಎಂದು ಡಾ.ಪರಮೇಶ್ವರ್ ಹೇಳಿದ್ದಾರೆ.

ಕೇಂದ್ರ, ಬಿಜೆಪಿ ಸರ್ಕಾರ 2019ರಲ್ಲೇ ವಾರ್ಷಿಕ 40 ಲಕ್ಷಕ್ಕೂ ವಹಿವಾಟು ಮಿತಿ ನಿಗದಿಗೊಳಿಸಿ ಎಲ್ಲಾ ರಾಜ್ಯ ಸರ್ಕಾರಗಳಿಗೂ ಇದನ್ನು ಪಾಲಿಸುವಂತೆ ಆದೇಶ ನೀಡಿತ್ತು. ಬಡವರಿಗೆ ಕಿರುಕುಳ ನೀಡುವುದನ್ನು ಬಿಜೆಪಿ ಸರ್ಕಾರ ಹಿಂಪಡೆಯಬೇಕು. ತರಕಾರಿ, ಹಣ್ಣು, ಎಳನೀರು, ಹೂವಿನ ವ್ಯಾಪಾರಿ ಸೇರಿದಂತೆ ಸಣ್ಣಪುಟ್ಟ ವ್ಯಾಪಾರ ಮಾಡುವ ಲಕ್ಷಾಂತರ ಮಂದಿ ಇದ್ದಾರೆ. ಎಂದು ಉಪ ಮುಖ್ಯಮಂತ್ರಿಗಳು ಹೇಳಿದರು.

ಈಗಾಗಲೇ 14 ಸಾವಿರ ವ್ಯಾಪಾರಿಗಳಿಗೆ ನೋಟಿಸ್ ನೀಡಲಾಗಿದೆ. ಈ ಹಿಂದೆಯೇ ನಮ್ಮ ನಾಯಕರಾದ ರಾಹುಲ್ ಗಾಂಧಿ ಅವರು ಜಿಎಸ್ ಟಿ ವಿಚಾರವಾಗಿ ವಿರೋಧ ವ್ಯಕ್ತಪಡಿಸಿದ್ದರು. ಈ ವಿಚಾರದಲ್ಲಿ ಜನರಿಗೆ ಹೇಗೆ ನೆರವಾಗಬಹುದು ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ ಎಂದು ಡಿಸಿಎಂ ತಿಳಿಸಿದರು.

## ಗಣ್ಯರ ವಾಹನಗಳು ಸಂಚರಿಸುವಾಗ ಇನ್ನು ಮುಂದೆ ಸೈರನ್ ನಿರ್ಬಂಧ

• ಉದಯವಾಹಿನಿ, ಬೆಂಗಳೂರು

ಗಣ್ಯ ವ್ಯಕ್ತಿಗಳ(ವಿಐಪಿ) ಸಂಚಾರದ ವೇಳೆ ಸೈರನ್ ಮೊಳಗುವುದನ್ನು ನಿರ್ಬಂಧಿಸಿ ರಾಜ್ಯ ಪೊಲೀಸ್ ಆಯುಕ್ತ ಡಾ.ಎಂ.ಎ. ಸಲೀಂ ಆದೇಶ ಹೊರಡಿಸಿದ್ದಾರೆ. ಈ ಮೂಲಕ ವಿಐಪಿ ಸಂಸ್ಕೃತಿಗೆ ಇತಿಶ್ರೀ ಹಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಮುಂದಿಟ್ಟಿದ್ದಾರೆ. ವಿಐಪಿ ಸಂಚಾರದ ವೇಳೆ ಸೈರನ್ ಬಳಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಿಗೆ ಸುತ್ತೋಲೆ ಹೊರಡಿಸಿ ಡಿಜಿಪಿ ಆದೇಶ ಹೊರಡಿಸಿದ್ದಾರೆ. ಗಣ್ಯ ವ್ಯಕ್ತಿಗಳ ಸಂಚಾರದ ವೇಳೆ ಸೈರನ್ ಮೊಳಗಿಸುವುದರಿಂದ ಗಣ್ಯರು ಯಾವ ರಸ್ತೆಯಲ್ಲಿ ಚಲಿಸುತ್ತಿದ್ದಾರೆ ಎಂಬ ಬಗ್ಗೆ ಅನಧಿಕೃತ ವ್ಯಕ್ತಿಗಳಿಗೆ ಮಾಹಿತಿ ರವಾನೆಯಾಗಲಿದೆ. ಗಣ್ಯರಿಗೆ ಅಪಾಯ ಉಂಟಾಗುವ ಸಾಧ್ಯತೆಯಿದೆ. ಅನಗತ್ಯ ಸೈರನ್ ಬಳಕೆಯಿಂದ ಸಾರ್ವಜನಿಕರಿಗೆ ತೊಂದರೆಯಾಗಲಿದೆ ಹಾಗೂ ಶಬ್ದ ಮಾಲಿನ್ಯವೂ ಉಂಟಾಗಲಿದೆ. ಹಠಾತ್ ಸೈರನ್ ಮೊಳಗುವುದರಿಂದ ಇತರೆ ವಾಹನ ಸವಾರರು ಹಾಗೂ ಬೆಂಗಾವಲು ವಾಹನಗಳಿಗೆ ಗೊಂದಲವುಂಟಾಗಿ ಅಡ್ಡಾದಿಡ್ಡಿ ಚಾಲನೆಯಾಗುವ ಸಾಧ್ಯತೆಯೂ ಇದೆ. ವಿಐಪಿ ವಾಹನಗಳ ಸಂಚಾರದ ಸಂದರ್ಭದಲ್ಲಿ ಸೈರನ್ ಬಳಕೆ ಬದಲಿಗೆ ತುರ್ತು ಸಂಚಾರದ ಬಗ್ಗೆ ವೈರ್‌ಲೆಸ್ ಮುಖಾಂತರ ಮಾಹಿತಿ ರವಾನಿಸಿಕೊಳ್ಳಬಹುದು.ಈ ಮುಖೇನ ಹೆಚ್ಚು ಶಿಸ್ತಿನ ಹಾಗೂ ಸುರಕ್ಷಿತ ಮಾರ್ಗ ಅನುಸರಿಸಿದಂತಾಗುತ್ತದೆ.

## ಬೇಲೆಕೇರಿ ಬಂದರು ಅದಿರು ವಶ ಹೈ ಆದೇಶಕ್ಕೆ ಸುಪ್ರೀಂ ತಡೆ

• ಉದಯವಾಹಿನಿ, ಬೆಂಗಳೂರು

ಎರಡು ಕಂಪನಿಗಳಿಂದ ವಶಪಡಿಸಿಕೊಂಡಿದ್ದ 5663 ಟನ್ ಹಾಗೂ 4864 ಟನ್ ಕಬ್ಬಿಣದ ಅದಿರನ್ನು ಬಿಡುಗಡೆ ಮಾಡುವಂತೆ ಕರ್ನಾಟಕ ಹೈಕೋರ್ಟ್ 2024ರ ಜೂನ್ 11ರಂದು ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿದೆ. 2012ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ನಂತರ ಬೇಲೆಕೇರಿ ಬಂದರಿನಲ್ಲಿ ಅದಿರುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಬೇಲೆಕೇರಿಯ ವಲಯ ಅರಣ್ಯಾಧಿಕಾರಿ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ರಾಜಮಹಲ್ ಸಿಲ್ಕ್ ಮತ್ತು ಗಿಂಪೆಕ್ಸ್ ಲಿಮಿಟೆಡ್‌ಗೆ ನೋಟಿಸ್ ಜಾರಿ ಮಾಡಿದೆ. ರಾಜ್ಯದಲ್ಲಿ ಅಕ್ರಮ ಕಬ್ಬಿಣದ ಅದಿರು ಗಣಿಗಾರಿಕೆಗೆ ಸಂಬಂಧಿಸಿದಂತೆ 2012ರ ಸೆಪ್ಟೆಂಬರ್ 7ರಂದು ಸುಪ್ರೀಂ ಕೋರ್ಟ್ ನೀಡಿದ ಆದೇಶಕ್ಕೆ ಹೈಕೋರ್ಟ್‌ನ ಆದೇಶವು ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ಹಿರಿಯ ವಕೀಲ ದೇವದತ್ತ ಕಾಮತ್ ಮತ್ತು ಹೆಚ್ಚುವರಿ ಅಡ್ವಕೇಟ್ ಜನರಲ್ ನಿಶಾಂತ್ ಪಾಟೀಲ ವಾದಿಸಿದರು.

## ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ ರಚನೆ ಪ್ರಶ್ನಿಸಿ ಅರ್ಜಿ

• ಉದಯವಾಹಿನಿ, ಬೆಂಗಳೂರು


ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯನ್ನು ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರ(ಜಿಬಿಎ) ವನ್ನಾಗಿ ಮಾಡುವ ಸಂಬಂಧ ಹೊರಡಿಸಿರುವ ಕಾಯಿದೆ ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕುರಿತು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ. ಸರ್ಕಾರ 2025 ರ ಮೇ 15 ರಂದು ಜಾರಿಗೊಳಿಸಿರುವ ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ ಸಿಂಧುತ್ವ ಪ್ರಶ್ನಿಸಿ ಚಲನಚಿತ್ರ ನಿರ್ದೇಶಕ ಟಿಎಸ್ ನಾಗಾಭರಣ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿಎಂ ಜೋಶಿ ಅವರಿದ್ದ ವಿಭಾಗೀಯ ಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಿತು. ಕೆಲ ಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯ, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಿ ನಾಲ್ಕು ವಾರಗಳಲ್ಲಿ ಆಕ್ಷೇಪಣೆಯನ್ನು ಸಲ್ಲಿಸುವಂತೆ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿದೆ.

## ಸುಪ್ರೀಂ ತೀರ್ಪು ಕೇಂದ್ರ ಸರ್ಕಾರಕ್ಕೆ ಕಪಾಳಮೋಕ್ಷ ಎಂದ ಸಿಎಂ

# ಮುಡಾ ರಾಜಕೀಯ ಬೇಡ

## ಸಿಎಂ ಸಿದ್ದರಾಮಯ್ಯ ಸಚಿವ ಬೈರತಿ ಸುರೇಶ್ ಪ್ರತಿಕ್ರಿಯೆ

**ಮುಡಾ ಪ್ರಕರಣ ಸಂಬಂಧ ಇಡಿ ಮೇಲ್ಮನವಿಯನ್ನು ಸುಪ್ರೀಂ ವಜಾ**




1. ಮುಡಾ ಕೇಸ್‌ನಲ್ಲಿ ಸಿಎಂ ಪತ್ನಿ ಪಾರ್ವತಿಯವರಿಗೆ ಇಡಿ ನೋಟಿಸ್
2. ಸುಪ್ರೀಂ ಕೋರ್ಟ್‌ನಲ್ಲಿ ಸಿಎಂ ಪತ್ನಿಗೆ ಬಿಗ್ ರಿಲೀಫ್ ವಿಚಾರ
3. ಬಿಜೆಪಿ ಮತ್ತು ಜೆಡಿಎಸ್ ನಾಯಕರ ವಿರುದ್ಧ ಕಪೋಲಕಲ್ಪಿತ ಆರೋಪಕ್ಕೆ ತಕ್ಕ ಉತ್ತರ ಎಂದ ಸಿಎಂ

• ಉದಯವಾಹಿನಿ, ಬೆಂಗಳೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಕ್ರಮ ನಿವೇಶನ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಸುಪ್ರೀಂ ಕೋರ್ಟ್‌ನ ಈ ಐತಿಹಾಸಿಕ ಆದೇಶವು ಕೇಂದ್ರ ಸರ್ಕಾರದ ಕಪಾಳಕ್ಕೆ ನ್ಯಾಯದಂಡ ಬಾರಿಸಿರುವ ತಪರಾಕಿಯಾಗಿದೆ ಎಂದು ಬರೆದುಕೊಂಡಿದ್ದಾರೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಕೆ.ವಿನೋದಚಂದ್ರ ಅವರ ಆದೇಶ ನಾನು ವಿನೀತನಾಗಿ ಸ್ವಾಗತಿಸುತ್ತೇನೆ. ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ನಾನು ಸದಾ ಸಂವಿಧಾನ ಮತ್ತು ನೆಲದ ಕಾನೂನಿಗೆ ತಲೆಬಾಗುತ್ತಾ ಬಂದವನು. ಈ ನಂಬಿಕೆಯನ್ನು ಸುಪ್ರೀಂಕೋರ್ಟ್ ಆದೇಶ ಉಳಿಸಿಕೊಂಡು ಕಾಪಾಡಿದೆ ಎಂದಿದ್ದಾರೆ. ರಾಜಕೀಯವಾಗಿ ನನ್ನನ್ನು ಎದುರಿಸಲಾಗದ ಬಿಜೆಪಿ ಮತ್ತು ಅದರ ಸಂಗಾತಿಗಳು ಸಾಂವಿಧಾನಿಕ ತನಿಖಾ ಸಂಸ್ಥೆಗಳಾದ ಸಿಬಿಐ ಮತ್ತು ಇಡಿಯನ್ನು ದುರ್ಬಳಕೆ ಮಾಡಿಕೊಂಡು ನನ್ನ ಪತ್ನಿಯ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿಸಿ, ನೀಡಿರುವ ಕಿರುಕುಳ ಅತ್ಯಂತ ಹೇಯವಾದುದು. ಇದರಿಂದ ನಾನು ಮತ್ತು ನನ್ನ ಕುಟುಂಬ ಅನುಭವಿಸಿದ ಮಾನಸಿಕವಾದ ಕಿರುಕುಳವನ್ನು ನಾನೆಂದೂ ಮರೆಯಲಾರೆ. ನನ್ನ ಮನದಾಳದ ಮಾತನ್ನೇ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಗೌರವಾನ್ವಿತ ಗವಾಯಿ ಅವರು ಹೇಳಿದ್ದಾರೆ. 'ರಾಜಕೀಯ ಸಮರಕ್ಕೆ ಮತದಾರರನ್ನು ಬಳಸಕೊಳ್ಳಬೇಕೇ ಹೊರತು, ಇದಕ್ಕಾಗಿ ಜಾರಿ ನಿರ್ದೇಶನಾಲಯದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಬಾರದು' ಎಂಬ ಅವರ ಮಾತುಗಳು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಅಭಿಪ್ರಾಯವಾಗಿದೆ ಎಂದು ಸಿಎಂ ತಿಳಿಸಿದ್ದಾರೆ.

**ತಪ್ಪಿಗಾಗಿ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು:** ಕಳೆದ 10-11 ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ಬಿಜೆಪಿಯು ಐಟಿ, ಸಿಬಿಐ ಮತ್ತು ಇಡಿಯ ದುರ್ಬಳಕೆ ಮೂಲಕ ಸಾಧಿಸುತ್ತಿರುವ ರಾಜಕೀಯ ದ್ವೇಷಕ್ಕೆ ಬಲಿಯಾದವರೆಲ್ಲರಲ್ಲಿಯೂ ಈ ತೀರ್ಪು ಸಮಾಧಾನ ಉಂಟು ಮಾಡಿದೆ ಮತ್ತು ನ್ಯಾಯ ವ್ಯವಸ್ಥೆಯ ಮೇಲೆ ಭರವಸೆ ಮೂಡಿಸಿದೆ. ಸುಪ್ರೀಂಕೋರ್ಟ್‌ನ ಈ ಕಣ್ಣುತೆರೆಸುವ ಆದೇಶದ ನಂತರವಾದರೂ ಪ್ರಧಾನಿ ಮೋದಿ ಮತ್ತು ಗೃಹಸಚಿವ ಅವರು ಎಚ್ಚೆತ್ತುಕೊಂಡು ಐಟಿ, ಸಿಬಿಐ ಮತ್ತು ಇ.ಡಿಯಂತಹ ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆಯನ್ನು ಸದ್ಯಕ್ಕೆ ನಿಲ್ಲಿಸಿ ಅವುಗಳಿಗೆ ಇರಬೇಕಾಗಿರುವ ಸ್ವಾಯತ್ತತೆಯನ್ನು ಕೊಟ್ಟು ತಮ್ಮ ಪಾಪ ತೊಳೆದುಕೊಳ್ಳಬೇಕು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಕಪೋಲಕಲ್ಪಿತ ಆರೋಪಗಳನ್ನು ಮಾಡುತ್ತಾ ಬಂದಿರುವ ರಾಜ್ಯದ ಬಿಜೆಪಿ ಮತ್ತು ಜೆಡಿಎಸ್ ನಾಯಕರಲ್ಲಿ ಕಿಂಚಿತ್ತಾದರೂ ಮಾನ-ಮರ್ಯಾದೆ ಎನ್ನುವುದು ಉಳಿದುಕೊಂಡಿದ್ದರೆ ಅವರೆಲ್ಲರೂ ತಕ್ಷಣ ತಮ್ಮ ತಪ್ಪಿಗಾಗಿ ಸಾರ್ವಜನಿಕವಾಗಿಯೇ ಕ್ಷಮೆಯಾಚಿಸಬೇಕು. ಆಗಮಾತ್ರವೇ ಅವರ ತಪ್ಪಿಗೆ ಪ್ರಾಯಶ್ಚಿತ್ತವಾದಂತೆಯೇ ಹೊರತು ಅನ್ಯಮಾರ್ಗವಿಲ್ಲ ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.



### ಸಿದ್ದರಾಮಯ್ಯಗೆ ಬಿಗ್ ರಿಲೀಫ್ ನೀಡಿದ ಸುಪ್ರೀಂ

ಮತ್ತೊಂದು ಪ್ರಕರಣ ಕರ್ನಾಟಕಕ್ಕೆ ಸಂಬಂಧಿಸಿದ್ದಾಗಿದ್ದು, ಇಲ್ಲಿಯೂ ಕೂಡ ರಾಜಕೀಯದ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹಾಗೂ ಸಚಿವ ಬೈರತಿ ಸುರೇಶ್ ವಿರುದ್ಧ ವಿಚಾರಣೆಗೆ ಅನುಮತಿ ಕೋರಿ ಇಡಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಎತ್ತಿಹಿಡಿದಿದೆ. ಅದಲ್ಲದೇ ಸಿಜೆಐ ಬಿಆರ್ ಗವಾಯಿ ಅವರ ಪೀಠ, ರಾಜಕೀಯ ಸಮರಕ್ಕೆ ಮತದಾರರನ್ನು ಬಳಸಕೊಳ್ಳಬೇಕೇ ಹೊರತು, ಇದಕ್ಕಾಗಿ ಜಾರಿ ನಿರ್ದೇಶನಾಲಯದಂತಹ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಬಾರದು ಎಂಬ ಅಭಿಪ್ರಾಯವನ್ನು ನೀಡಿದೆ. ಈ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಪರೋಕ್ಷ ಅಸಮಾಧಾನವನ್ನು ವ್ಯಕ್ತಪಡಿಸಿದೆ.

### ನನ್ನ ಹೋರಾಟ ನಿಲ್ಲಲ್ಲ



ಮುಡಾ ಹಗರಣದ ವಿಚಾರದಲ್ಲಿ ಏನು ಮಾಡಿದರೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತದೆ. ತನಿಖಾ ಸಂಸ್ಥೆಗಳ ಮುಂದೆ ಹಾಜರಾಗಲು ಸಿಎಂ ಪತ್ನಿಗೆ ಭಯವೇ ಎಂದು ಪ್ರಶ್ನಿಸಿದ್ದಾರೆ. ಇಡೀ ಪ್ರಕರಣವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿಲ್ಲ. ಇಡಿ ನೋಟಿಸ್ ಕೊಟ್ಟಿರುವುದು ತಪ್ಪು ಅನ್ನುವುದಾದರೆ, ತನಿಖಾ ಸಂಸ್ಥೆಗಳು ವಿಚಾರಣೆ ಮಾಡುವುದೇ ತಪ್ಪಾ. ಆರೋಪಿಗಳ ಮನಸ್ಥಿತಿ ಹೇಗಿದೆ ಎಂಬುದು ಇಲ್ಲೇ ಗೊತ್ತಾಗಲಿದೆ. ನನ್ನ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ದೂರುದಾರ ಸ್ನೇಹಮಯಿ ಕೃಷ್ಣ ಮೈಸೂರಿನಲ್ಲಿ ಮಾತನಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಇಡಿ ನೋಟಿಸ್ ನೀಡಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಅವರು ಪ್ರತಿಕ್ರಿಯಿಸಿದ್ದಾರೆ. ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳನ್ನು ವಿಚಾರಣೆಗೆ ಎತ್ತಿಕೊಂಡಿದೆ.

### ಸುಪ್ರೀಂ ಕೋರ್ಟ್ ತಕ್ಕ ಪಾಠ

ಬಿಜೆಪಿ, ಜೆಡಿಎಸ್ ನಾಟಕ ಮಾಡಿದ್ದು ಸುಳ್ಳು ಎಂದು ಗೊತ್ತಾಗಿದೆ. ಸುಪ್ರೀಂ ಕೋರ್ಟ್ ತಕ್ಕ ಪಾಠ ಕಲಿಸಿದೆ ಎಂದು ಸಚಿವ ಬೈರತಿ ಸುರೇಶ್ ಟೀಕಿಸಿದ್ದಾರೆ. ಮುಡಾ ವಿಚಾರವಾಗಿ ಇ.ಡಿ. ಸಮನ್ಸ್ ರದ್ದು ಪಡಿಸಿದ ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಸಚಿವರು, ಹೈಕೋರ್ಟ್ ಇ.ಡಿ. ಸಮನ್ಸ್ ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಇ.ಡಿ ಅರ್ಜಿ ಸಲ್ಲಿಸಿತ್ತು. ನಮಗೆ ಮೇಲ್ಮನವಿ ಸಲ್ಲಿಸಿರೋದು ಗೊತ್ತಿರಲಿಲ್ಲ. ತ್ರಿ ಸದಸ್ಯ ಪೀಠದಲ್ಲಿ ವಿಚಾರಣೆ ಇದೆ ಎಂದು ಪೊನ್ನಣ್ಣ ಹೇಳಿದ್ರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಪೀಠವು ಹೈಕೋರ್ಟ್ ತೀರ್ಪು ಎತ್ತಿ ಹಿಡಿದಿದೆ. ನಮ್ಮ ಪರ ತೀರ್ಪು ಕೊಟ್ಟಿದೆ ಎಂದರು.ಎಲ್ಲವನ್ನೂ ರಾಜಕೀಯವಾಗಿ ಮಾಡಬೇಡಿ ಎಂದು ಇ.ಡಿಗೆ ಸುಪ್ರೀಂ ಕಟುವಾಗಿ ಹೇಳಿದೆ. ಸುಪ್ರೀಂ ಕೋರ್ಟ್‌ಗೆ ವಂದನೆ ಸಲ್ಲಿಸುತ್ತೇನೆ. ನ್ಯಾಯಕ್ಕೆ ಸಿಕ್ಕ ಜಯ ಇದು. ನ್ಯಾಯಾಲಯದಲ್ಲಿ ನಮಗೆ ನ್ಯಾಯ ಸಿಕ್ಕಿದೆ. ಸಂವಿಧಾನದ ಪ್ರಕಾರ ನ್ಯಾಯಮೂರ್ತಿಗಳು ನ್ಯಾಯ ಕೊಟ್ಟಿದ್ದಾರೆ. ಬಿಜೆಪಿ ಜೆಡಿಎಸ್ ನಾಟಕ ಮಾಡಿದ್ದು ಸುಳ್ಳು ಎಂದು ಗೊತ್ತಾಗಿದೆ.

## ರಾಹುಲ್ ಭೇಟಿಗಾಗಿ ಜು.25ಕ್ಕೆ ದಿಲ್ಲಿಯತ್ತ ಸಿಎಂ, ಡಿಸಿಎಂ ಪ್ರಯಾಣ

### ಕರ್ನಾಟಕ ಕಾಂಗ್ರೆಸ್ ಪಕ್ಷದೊಳಗೆ ನಾಯಕತ್ವದ ಗೊಂದಲ · ಸುರ್ಜೇವಾಲಾ ಬೆಂಗಳೂರು ಭೇಟಿ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

ನಾಯಕತ್ವ ಬದಲಾವಣೆ ಕುರಿತಂತೆ ಬಹಿರಂಗ ಚರ್ಚೆ ನಿಂತರೂ ಕಾಂಗ್ರೆಸ್ ಪಕ್ಷ ಮತ್ತು ಸರಕಾರದೊಳಗೆ ಚರ್ಚೆ ಮುಂದುವರಿದಿದ್ದು, ಗೊಂದಲ ಇನ್ನೂ ತಿಳಿಯಾಗಿಲ್ಲ. ಐದೂ ವರ್ಷ ನಾನೇ ಸಿಎಂ.., ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲಿಂದ ಮೇಲೆ ಘೋಷಣೆ ಮಾಡಿಕೊಂಡರೂ ಎಐಸಿಸಿ ವರಿಷ್ಠ ನಾಯಕರ ಮೌನವು ಈ ಸಂಬಂಧದ ಚರ್ಚೆ ಹಾಗೂ ಕುತೂಹಲ ಮುಂದುವರಿಯಲು ಕಾರಣವಾಗಿದೆ. ಈ ಪರಿಸ್ಥಿತಿಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತೊಮ್ಮೆ ಶುಕ್ರವಾರ (ಜು.25) ದಿಲ್ಲಿಗೆ ಹೊರಟಿರುವುದು ಕುತೂಹಲವನ್ನು ಹೆಚ್ಚಿಸಿದೆ.

**ವಾರಾಂತ್ಯದಲ್ಲಿ ದಿಲ್ಲಿಯಲ್ಲೇ ಉಳಿಯುವ ಸಾಧ್ಯತೆ:** ಈ ತಿಂಗಳಲ್ಲಿ ಎರಡು ಬಾರಿ ದಿಲ್ಲಿಗೆ ತೆರಳಿದರೂ ಸಿಎಂ ಸಿದ್ದರಾಮಯ್ಯ ಅವರು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ರಾಹುಲ್ ಗಾಂಧಿ ಭೇಟಿ ಮಾಡುವ ಉದ್ದೇಶದಿಂದಲೇ ಸಿಎಂ ಮತ್ತು ಡಿಸಿಎಂ ದಿಲ್ಲಿಗೆ ಹೊರಟಿದ್ದು, ವಾರಾಂತ್ಯ ದಿಲ್ಲಿಯಲ್ಲೇ ಉಳಿಯುವ ಸಾಧ್ಯತೆಗಳಿವೆ.

ಆಗಸ್ಟ್ 2 ರಂದು ಎಐಸಿಸಿ ಕಾನೂನು ಮತ್ತು ಮಾನವ ಹಕ್ಕುಗಳ ವಿಭಾಗದ ಸಭೆಯಲ್ಲಿ ಪಾಲ್ಗೊಳ್ಳಲು ಆಹ್ವಾನದ ಮೇಲೆ ದಿಲ್ಲಿಗೆ ತೆರಳಬೇಕಿದ್ದ ಸಿಎಂ, ಅದಕ್ಕೆ ಮುನ್ನವೇ ಜು.25ಕ್ಕೆ ದಿಲ್ಲಿಗೆ ತೆರಳುತ್ತಿದ್ದಾರೆ. ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಸಮಿತಿಯ ಮುಂದುವರಿದ ಸಭೆಯ ಭಾಗವಾಗಿ ದಿಲ್ಲಿಗೆ ತೆರಳುತ್ತಿದ್ದಾರೆ ಎಂಬುದು ಸಿಎಂ ಆಪ್ತ ಮೂಲಗಳ ವಿವರಣೆಯಾಗಿದೆ. ಆದರೆ, ರಾಹುಲ್‌ಗಾಂಧಿ ಅವರು ಭೇಟಿಗೆ ಸಮಯಾವಕಾಶ ನೀಡಿದ್ದು, ಎಐಸಿಸಿ ಸೂಚನೆ ಆಧರಿಸಿ ದಿಲ್ಲಿಗೆ ತೆರಳುತ್ತಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೂ ಬುಲಾವ್ ಬಂದಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಡಿ.ಕೆ.ಶಿವಕುಮಾರ್‌ಮಾತನಾಡಿ, ಸಂಸತ್ ಅಧಿವೇಶನ ನಡೆಯುತ್ತಿದ್ದು, ನಾಯಕರು ದಿಲ್ಲಿಯಲ್ಲಿದ್ದಾರೆ. ಜು. 25 ರಂದು ಸಿಎಂ ಸಿದ್ದರಾಮಯ್ಯ ಮತ್ತು ನಾನು ದಿಲ್ಲಿಗೆ ತೆರಳುತ್ತಿದ್ದೇವೆ. ಸದ್ಯಕ್ಕೇ ಇಷ್ಟೇ ಮಾಹಿತಿ, ಎಂದು ಹೇಳಿದರು.

**2 ಬಾರಿ ಭೇಟಿ ಆಗಿರಲಿಲ್ಲ;** ಸಿಎಂ ಮತ್ತು ಡಿಸಿಎಂ ಇತ್ತೀಚೆಗೆ ಎರಡು ಬಾರಿ ದಿಲ್ಲಿಗೆ ತೆರಳಿದ್ದರೂ ಉದ್ದೇಶಿತ ರಾಹುಲ್ ಗಾಂಧಿ ಅವರ ಭೇಟಿ ಸಾಧ್ಯವಾಗಿರಲಿಲ್ಲ. ಮೊದಲ ಸಲ ರಾಹುಲ್ ಗಾಂಧಿ ಅವರು ಗುಜರಾತ್ ರಾಜ್ಯಕ್ಕೆ ಸಂಬಂಧಿಸಿದ ಪಕ್ಷದ ಸಭೆಯಲ್ಲಿ ಬ್ಯುಸಿಯಾಗಿದ್ದರೆ, ಮತ್ತೊಂದು ಬಾರಿ ಅನ್ಯ ಕಾರ್ಯದ ನಿಮಿತ್ತ ಸಮಯಾವಕಾಶ ನೀಡಿರಲಿಲ್ಲ.



**ಇನ್ನು ನಿಂತಿಲ್ಲ ನಾಯಕತ್ವ ಕೇಂದ್ರಿತ ಕುತೂಹಲ**

### ನಾಮನಿರ್ದೇಶನ ಫೈನಲ್

ಆ.11 ರಿಂದ ರಾಜ್ಯ ವಿಧಾನ ಮಂಡಲ ಅಧಿವೇಶನ ಆರಂಭವಾಗುತ್ತಿದ್ದು, ಅಷ್ಟರೊಳಗೆ ವಿಧಾನ ಪರಿಷತ್‌ನಲ್ಲಿ ಖಾಲಿ ಇರುವ ನಾಲ್ಕು ಸದಸ್ಯ ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ನಾಲ್ವರ ನೇಮಕ ಪಟ್ಟಿಗೆ ಹೈಕಮಾಂಡ್ ನಾಯಕರ ಅನುಮೋದನೆ ಪಡೆಯಲು ಸಿಎಂ ಬಯಸಿದ್ದಾರೆ. ಕಳೆದ ಆರೇಳು ತಿಂಗಳಿಂದ ಖಾಲಿ ಇರುವ ಮೇಲ್ಮನೆಯ ಈ ನಾಲ್ಕು ಸ್ಥಾನಗಳಿಗೆ ದಲಿತ ಮುಖಂಡ ಸಾಗರ್, ಪತ್ರಕರ್ತ ದಿನೇಶ್ ಅಮಿನ್‌ಮಟ್ಟು, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಹಾಗೂ ಎನ್‌ಆರ್‌ಐ ಕೋಶದ ಆರತಿ ಕೃಷ್ಣ ಅವರ ಹೆಸರನ್ನು ಫೈನಲ್ ಮಾಡಲಾಗಿತ್ತಾದರೂ, ಕೊನೇ ಕ್ಷಣದಲ್ಲಿ ಎಐಸಿಸಿ ಹೈಕಮಾಂಡ್ ಈ ಪಟ್ಟಿಗೆ ಬ್ರೇಕ್ ಹಾಕಿತ್ತು.

### ಸುರ್ಜೇವಾಲಾ ಭೇಟಿ ಮುಂದೂಡಿಕೆ




ಈ ಮಧ್ಯೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜು.23ರ ಬೆಂಗಳೂರು ಭೇಟಿ ಮುಂದೂಡಿಕೆಯಾಗಿದೆ. ಸಂಸತ್ ಅಧಿವೇಶನ ಆರಂಭವಾಗಿದ್ದು, ಜು.25ರಂದು ಎಐಸಿಸಿ ನಾಯಕರ ಭೇಟಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ದಿಲ್ಲಿಗೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಸುರ್ಜೇವಾಲಾ ಅವರು ಉದ್ದೇಶಿತ ಭೇಟಿಯನ್ನು ಮುಂದೂಡಿದ್ದಾರೆ ಎಂದು ಕೆಪಿಸಿಸಿ ಮೂಲಗಳು ತಿಳಿಸಿವೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,015/Gram24ct ₹9,180/Gram22ct | ಬೆಳ್ಳಿ: ₹116.00/Gram

# ಜುಲೈ ಆವೃತ್ತಿ ಪ್ರವೇಶಕ್ಕೆ ಕೆಎಸ್‌ಒಯು ಅರ್ಜಿ ಆಹ್ವಾನ

• ಉದಯವಾಹಿನಿ, ಬೆಂಗಳೂರು

ನಗರದ ಮಲ್ಲೇಶ್ವರಂನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಹಿಳಾ ಪ್ರಾದೇಶಿಕ ಕೇಂದ್ರವು 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಗೆ ವಿವಿಧ ಪದವಿ, ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳು ಬಿಎ, ಬಿಕಾಂ, ಬಿಎಸ್ಸಿ, ಬಿಎಸ್ ಡಬ್ಲ್ಯು, ಬಿಬಿ,ಎಂ ಬಿಸಿಎ(ಜನರಲ್,ಐಟಿ) ಪದವಿ ಕೋರ್ಸುಗಳು, ಎಂಎ. ಎಕಾಂ, ಎಂಎಸ್ಸಿ,ಎಂಸಿಜೆ, ಎಂಎಸ್‌ಡಬ್ಲ್ಯು, ಎಂಸಿಎ, ಎಂಬಿಎ ಸೇರಿದಂತೆ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.



ವಿವಿಯ ವೆಬ್‌ಸೈಟ್ www.ksoumysuru.ac.in ನಲ್ಲಿನ ಪ್ರವೇಶಕ್ಕೆ ಸಂಬಂಧಿಸಿದ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಶಶಿಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿಪಿಎಲ್ ಕಾರ್ಡು ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಸೈನಿಕ, ಮಾಜಿ ಸೈನಿಕ, ಆಟೋ ಕ್ಯಾಬ್ ಚಾಲಕರ ಮಕ್ಕಳಿಗೆ, ಕೆಎಸ್‌ಆರ್‌ಟಿಸಿ ಸೇರಿದಂತೆ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ಬೋಧನಾ ಶುಲ್ಕದಲ್ಲಿ ಶೇ.10ರಷ್ಟು ರಿಯಾಯಿತಿ ಇರುತ್ತದೆ. ಕೋವಿಡ್‌ನಿಂದ ಮೃತಪಟ್ಟ ಪೋಷಕರ ಮಕ್ಕಳು ಲೈಂಗಿಕ ಅಲ್ಪಸಂಖ್ಯಾತರು, ದೃಷ್ಟಿದೋಷದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ. ಎಸ್ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ದಾಖಲೆಗಳನ್ನು ನೀಡಿದರೆ ಎಸ್‌ಎಸ್‌ಪಿ ವಿದ್ಯಾರ್ಥಿವೇತನ ದೊರೆಯುತ್ತದೆ ಎಂದು ತಿಳಿಸಲಾಗಿದೆ.

# ನೌಕರರ 38 ತಿಂಗಳ ಹಿಂಬಾಕಿ ವೇತನ ಬಿಡುಗಡೆಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ನಾಲ್ಕು ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ 38 ತಿಂಗಳ ಬಾಕಿ ವೇತನ ನೀಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಆಗ್ರಹಿಸಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಮಿತಿಯ ಅಧ್ಯಕ್ಷ ಮನು ಬಳಿಗಾರ್, ಸಾರಿಗೆ ನೌಕರರ ವೇತನ ಪರಿಷ್ಕರಣೆಯಾದ 2020ರ ಜನವರಿ 1ಕ್ಕೆ ಅನ್ವಯ ವಾಗುವಂತೆ 38 ತಿಂಗಳ ಬಾಕಿ ವೇತನ ಪಾವತಿಸಬೇಕು.

2024ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆಯನ್ನು ತಕ್ಷಣ ಜಾರಿಗೊಳಿಸಬೇಕು. ಇತರೆ ಇಲಾಖೆಗಳಿಗೆ ಹೋಲಿಸಿದರೆ ಸಾರಿಗೆ ಸಂಸ್ಥೆ ನೌಕರರ ವೇತನ ಕಡಿಮೆ ಇದೆ. ದಿನಬಳಕೆ ವಸ್ತುಗಳ ದರ ಹೆಚ್ಚಳವಾಗಿದ್ದು, ಜೀವನ ನಿರ್ವಹಣೆ ಕಷ್ಟವಾಗುತ್ತಿದೆ. ಆದ್ದರಿಂದ ಕೂಡಲೇ 38 ತಿಂಗಳ ಹಿಂಬಾಕಿ ನೀಡಬೇಕು ವೇತನ ಪರಿಷ್ಕರಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

# ಮತ್ತಿಬ್ಬರ ಬಂಧನ, ಬಂಧಿತರ ಸಂಖ್ಯೆ 7ಕ್ಕೆ ಏರಿಕೆ

• ಉದಯವಾಹಿನಿ, ಬೆಂಗಳೂರು

ರೌಡಿಶೀಟರ್ ಶಿವ ಪ್ರಕಾಶ್ ಅಲಿಯಾಸ್ ಬಿಕ್ಲ ಶಿವ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪ್ರಕರಣದಲ್ಲಿ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರನ್ನು ಆರೋಪಿಯನ್ನಾಗಿ ಹೆಸರಿಸಲಾಗಿದೆ. ಈ ಮೂಲಕ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ಈಗ ಏಳಕ್ಕೆ ಏರಿದೆ. ಶಂಕಿತರನ್ನು ಅರುಣ್ ಅಲಿಯಾಸ್ ತೇಮು ಮತ್ತು ನವೀನ್ ಎಂದು ಗುರುತಿಸಲಾಗಿದ್ದು, ಕೊಲೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳಿಬ್ಬರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ನಂತರ ನಾವು 14 ದಿನಗಳ ಪೊಲೀಸ್ ಕಸ್ಟಡಿಗೆ ಪಡೆದಿದ್ದೇವೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತೊಬ್ಬ ಶಂಕಿತ ಆರ್‌ಡಿ ಅನಿಲ್ ಎಂಬಾತನನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದ್ದು, ಅಪರಾಧ ಕೃತ್ಯದಲ್ಲಿ ಬಳಸಲಾದ ವಾಹನವನ್ನು ಅವನೇ ಒದಗಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

# ಜೆಬಿಎ: 5 ನಗರ ಪಾಲಿಕೆಗಷ್ಟೇ ಸೀಮಿತವಲ್ಲ

## ಗ್ರೇಟರ್ ಬೆಂಗಳೂರು ಪ್ರದೇಶ' ವ್ಯಾಪ್ತಿಗೆ ಬರುವ ಗ್ರಾ.ಪಂ.ಗಳ ಯೋಜನೆಗಳ ನಿರ್ವಹಣೆ ಜವಾಬ್ದಾರಿ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ- 2024'ರ (ಜಿಬಿಜಿಎ) ಪ್ರಕಾರ ರಚನೆಯಾಗಲಿರುವ ಮುಖ್ಯಮಂತ್ರಿ ನೇತೃತ್ವದ 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿ ನಗರ ಪಾಲಿಕೆಗಳಿಷ್ಟೇ ಸೀಮಿತವಾಗುವುದಿಲ್ಲ. ಸರ್ಕಾರ ಗ್ರೇಟರ್ ಬೆಂಗಳೂರು ಪ್ರದೇಶವನ್ನು ಎಷ್ಟು ವಿಸ್ತರಿಸುತ್ತದೆಯೋ ಅಲ್ಲಿಯವರೆಗೂ ಜಿಬಿಎ ಅಧಿಕಾರ ವ್ಯಾಪ್ತಿಯನ್ನು ಹೊಂದಲಿದೆ. ಬಿಬಿಎಂಪಿ ವ್ಯಾಪ್ತಿಗಷ್ಟೇ ಗ್ರೇಟರ್ ಬೆಂಗಳೂರು ಪ್ರದೇಶವನ್ನು ಮೇ 15ರಂದು ಅಧಿಸೂಚಿಸಿರುವ ರಾಜ್ಯ ಸರ್ಕಾರ, ಸದ್ಯದಲ್ಲಿಯೇ ಇನ್ನೂ ಹಲವು ಪ್ರದೇಶಗಳನ್ನು ಸೇರಿಸಲಿದೆ. ಹೀಗಾಗಿ, ಮುಖ್ಯಮಂತ್ರಿ ನೇತೃತ್ವದಲ್ಲಿ 15ಕ್ಕೂ ಹೆಚ್ಚು ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡು ಶೀಘ್ರವೇ ರಚನೆಯಾಗುವ ಜಿಬಿಎ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯನ್ನೂ ಮೀರಲಿದೆ. ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಲವು ಪ್ರದೇಶಗಳೂ 'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಬರಲಿವೆ.


ಉದಯವಾಹಿನಿ ಚಿತ್ರ

**5 ಶಾಸಕರಿಗೆ ಎರಡು ಪಾಲಿಕೆಯಲ್ಲಿ ಹಕ್ಕು**

ಹೊಸ ನಗರ ಪಾಲಿಕೆಗಳೂ ಸೇರಿದಂತೆ ತನ್ನ ವ್ಯಾಪ್ತಿಯ ಎಲ್ಲಾ ಪ್ರದೇಶಗಳ ಅಭಿವೃದ್ಧಿಯ ನೇತೃತ್ವವನ್ನು ಜಿಬಿಎ ವಹಿಸಲಿದೆ.

ಮೂಲಸೌಕರ್ಯಗಳು ಸೇರಿದಂತೆ ಬೃಹತ್ ಯೋಜನೆಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆಯೂ ಜಿಬಿಎ ಅಧಿಕಾರ ವ್ಯಾಪ್ತಿಗೆ ಬರಲಿದೆ. ಬಿಬಿಎಂಪಿ ವ್ಯಾಪ್ತಿಯನ್ನೇ 'ಗ್ರೇಟರ್ ಬೆಂಗಳೂರು ಪ್ರದೇಶವನ್ನಾಗಿ ಗುರುತಿಸಿ, ಅದರಲ್ಲೇ ಐದು ಹೊಸ ನಗರ ಪಾಲಿಕೆಗಳನ್ನು ರಚಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. 'ಗ್ರೇಟರ್ ಬೆಂಗಳೂರಿಗೆ' ಸುತ್ತಮುತ್ತಲಿನ ಪ್ರದೇಶಗಳೂ ಸೇರಿಕೊಂಡು ನಗರ ಪಾಲಿಕೆಗಳು ರಚನೆಯಾಗುತ್ತವೆ ಎಂಬ ಅನಿಸಿಕೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರಲ್ಲಿತ್ತು.

> **ಬಿಬಿಎಂಪಿ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆ ರಚನೆಯಾಗಿರುವುದರಿಂದ ಹೊಸ ಪ್ರದೇಶಗಳು ಜಿಬಿಎಗೆ ಸೇರಿಕೊಳ್ಳುವುದಿಲ್ಲ ಎಂದೇನೂ ಇಲ್ಲ. 712 ಚದರ ಕಿ.ಮೀ. ವ್ಯಾಪ್ತಿಗೆ ಮಾತ್ರ ನಗರ ಪಾಲಿಕೆಗಳು ರಚನೆಯಾಗಿವೆ. ಜಿಬಿಎ 1000 ಚದರ ಕಿ.ಮೀಗೂ ಹೆಚ್ಚು ಪ್ರದೇಶಕ್ಕೆ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಲಿದೆ. ಈಗಿರುವ ಬಿಬಿಎಂಪಿ ವ್ಯಾಪ್ತಿಯ ಸುತ್ತಮುತ್ತಲಿರುವ ಪ್ರದೇಶಗಳು ಗ್ರೇಟರ್ ಬೆಂಗಳೂರು ಆಗಲಿವೆ' ಎಂದು 'ಬ್ರಾಂಡ್ ಬೆಂಗಳೂರು ಸಮಿತಿ ಸದಸ್ಯ ವಿ. ರವಿಚಂದರ್ ತಿಳಿಸಿದರು.**

ಹೀಗಾಗಿ, ಬಿಬಿಎಂಪಿ ವ್ಯಾಪ್ತಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಕೂಡ ಗರಿಗೆದರಿಕೊಂಡಿತ್ತು.

ಯಶವಂತಪುರ, ಬೆಂಗಳೂರು ದಕ್ಷಿಣ, ಮಹದೇವಪುರ, ಬೊಮ್ಮನಹಳ್ಳಿ, ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳು ಗ್ರೇಟರ್ ಬೆಂಗಳೂರು ಅಡಿ ರಚನೆಯಾಗಲಿರುವ ನಗರ ಪಾಲಿಕೆಗಳಿಗೆ ಸೇರುತ್ತವೆ ಎಂದು ಜನಪ್ರತಿನಿಧಿಗಳು ಆಗಾಗ್ಗೆ ಹೇಳುತ್ತಿದ್ದರು. ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯ ಸ್ಥಳೀಯರೂ ಇದೇ ನಿರೀಕ್ಷೆಯಲ್ಲಿದ್ದರು. ನಮ್ಮ ಪ್ರದೇಶವೆಲ್ಲ ಗ್ರೇಟರ್ ಬೆಂಗಳೂರು ಆಗುತ್ತದೆ.

ಮೂಲಸೌಕರ್ಯದಲ್ಲಿ ಹಿಂದಿರುವ ನಮಗೆ ಹೆಚ್ಚು ಅನುಕೂಲವಾಗಲಿದೆ ಎಂದು ಭಾವಿಸಿದ್ದೆವು. ಆದರೆ, ಬಿಬಿಎಂಪಿ ವ್ಯಾಪ್ತಿಗಷ್ಟೇ ಐದು ನಗರ ಪಾಲಿಕೆಗಳಾಗಿರುವುದು ಹಲವರಲ್ಲಿ ನಿರಾಸೆ ತರಿಸಿದೆ' ಎಂದು ಬಿಬಿಎಂಪಿ ಗಡಿಯಲ್ಲಿರುವ ಕಣ್ಣೂರು ನಿವಾಸಿ ನಾಗರಾಜು ಹೇಳಿದರು.

# ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣಾ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಸಮುದಾಯದ ಮುಖಂಡರು ರೂ. 1ಕೋಟಿಗೂ ಹೆಚ್ಚು ಹಣವನ್ನು ವಿನಿಯೋಗಿಸುತ್ತಿದ್ದಾರೆ. ಮಕ್ಕಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ದೇಶಕೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದು ಸಚಿವ ರಾಮಲಿಂಗಾರೆಡ್ಡಿ ಸಲಹೆ ನೀಡಿದರು.

ನಗರದಲ್ಲಿ ಆರ್.ಎಂ.ಆರ್.ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ಆಯೋಜಿಸಿದ್ದ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಇಂಥದ್ದೊಂದು ಕೆಲಸ ಮಾಡುತ್ತಿರುವುದು ಶ್ಲಾಘನೀಯ.

ಎಲ್ಲರ ಬಳಿಯೂ ಹಣವಿರುತ್ತದೆ. ಅದನ್ನು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಿನಿಯೋಗಿಸುವ ಟ್ರಸ್ಟ್‌ನ ಕೆಲಸ ಮೆಚ್ಚುವಂಥದ್ದು ಎಂದರು.



ಉದಯವಾಹಿನಿ ಚಿತ್ರ

> **ಟ್ರಸ್ಟ್ ಅಧ್ಯಕ್ಷ ಕೆ.ಎಂ.ನಾಗರಾಜ್ ಮಾತನಾಡಿ, ತಂದೆ ತಾಯಿಯವರು ಕೂಡಿಟ್ಟಿರುವ ಹಣದಲ್ಲಿ ಸಮಾಜಕ್ಕೆ ಕಿರುಕಾಣಿಕೆ ನೀಡಲಾಗುತ್ತಿದೆ. ಬಡತನದಿಂದಾಗಿ ಹಳ್ಳಿಕಾರ ಸಮುದಾಯದ ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣವನ್ನು ಮೊಟಕುಗೊಳಿ ಸುತ್ತಿದ್ದಾರೆ. ಅಂಥ ಮಕ್ಕಳು ಶೈಕ್ಷಣಿಕವಾಗಿ ಬೆಳೆಯಲು ಟ್ರಸ್ಟ್ ನೆರವಾಗುತ್ತಿದೆ. ಐಎಎಸ್, ಕೆಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಾಗಿ ತರಬೇತಿ ನೀಡಲಾಗುತ್ತಿದೆ' ಎಂದು ವಿವರಿಸಿದರು.**

ಗ್ಯಾರಂಟಿ ಅನುಷ್ಠಾನಗಳ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಹಳ್ಳಿಕಾರ ಸಮುದಾಯದ 100 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 200 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು.

# ವಿವಾಹಿತ ಮಹಿಳೆಗೆ ಮದುವೆಯಾಗುವಂತೆ ಕಿರುಕುಳ

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ ಜಾಲತಾಣದಲ್ಲಿ ವಿವಾಹಿತ ಮಹಿಳೆಗೆ ಮದುವೆಯಾಗುವಂತೆ ಕಿರುಕುಳ ನೀಡಿದ ಆರೋಪದ ಮೇಲೆ 26 ವರ್ಷದ ಯುವಕನನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ತಮಿಳುನಾಡು ಮೂಲದ ಸೆಲ್ವ ಕಾರ್ತಿಕ್ ಎಂದು ಗುರುತಿಸಲಾಗಿದ್ದು, ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದ ವಿವಾಹಿತ ಮಹಿಳೆಗೆ ಮದುವೆಯಾಗುವಂತೆ ಪೀಡಿಸುತ್ತಿದ್ದ ಎಂದು ಆರೋಪಿಸಲಾಗಿದೆ. ಮಹಿಳೆಯು ಈ ವಿಷಯವನ್ನು ತನ್ನ ತಂದೆ ಮತ್ತು ಚಿಕ್ಕಪ್ಪನ ಮಗನಿಗೆ ತಿಳಿಸಿದ್ದು, ಅವರು ಸೆಲ್ವ ಕಾರ್ತಿಕ್‌ನನ್ನು ಮಾತನಾಡಲು ಕರೆಸಿಕೊಂಡಿದ್ದರು.



ಈ ವೇಳೆ ಸೆಲ್ವ ಕಾರ್ತಿಕ್, ಪ್ರಶಾಂತ್‌ನ ಕತ್ತು ಕೊಯ್ದು ಕೊಲೆಗೆ ಯತ್ನಿಸಿದ್ದು, ಪೊಲೀಸರು ಆತನನ್ನು ಬಂಧಿಸಿದ್ದಾರೆ. ವಿವಾಹಿತ ಮಹಿಳೆಸೆಲ್ವ ಕಾರ್ತಿಕ್ ಹೊಸೂರಿನ ಖಾಸಗಿ ದ್ವಿಚಕ್ರ ವಾಹನ ತಯಾರಿಕಾ ಕಂಪನಿಯಲ್ಲಿ ಉದ್ಯೋಗಿಯಾಗಿದ್ದಾರೆ. ಕಾರ್ತಿಕ್ ಕಗ್ಗದಾಸಪುರದ ವಿವಾಹಿತ ಮಹಿಳೆಯೊಂದಿಗೆ ಸ್ನೇಹ ಬೆಳೆಸಿಕೊಂಡು ಚಾಟ್ ಮಾಡಲು ಪ್ರಾರಂಭಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ನಂತರ ಆತ ಮಹಿಳೆಯನ್ನು ಪ್ರೀತಿಸುತ್ತಿದ್ದ. ಆದರೆ ಆ ಮಹಿಳೆ ಆತನ ಸಂಪರ್ಕ ಕಡಿದುಕೊಂಡಿದ್ದಾರೆ. ಜೂನ್‌ನಲ್ಲಿ, ಕಾರ್ತಿಕ್ ಆಕೆಯ ಮನೆಗೆ ಭೇಟಿ ನೀಡಿ, ಆಕೆ ತನ್ನೊಂದಿಗೆ ಮಾತನಾಡದಿದ್ದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದ.

ಆಕೆಯ ಪತಿ, ಇತರ ಕುಟುಂಬ ಸದಸ್ಯರು ಆತನ ಮನವೊಲಿಸಿ ವಾಪಸ್ ಕಳುಹಿಸಿದ್ದಾರೆ. ಆಕೆ ತನ್ನ ಗಂಡನನ್ನು ಬಿಡದಿದ್ದರೆ ಆಕೆಯ ತಂದೆ ಮತ್ತು ಸಂಬಂಧಿಯನ್ನು ಕೊಲ್ಲುವುದಾಗಿ ಫೋನ್ ಮೂಲಕ ಬೆದರಿಕೆ ಹಾಕಿದ್ದ ಎನ್ನಲಾಗಿದೆ.

ಜುಲೈ 17ರಂದು ಬೆಂಗಳೂರಿಗೆ ಬಂದಿದ್ದ ಸೆಲ್ವ ಕಾರ್ತಿಕ್‌ನನ್ನು ಶೇಖರ್ ಮತ್ತು ಪ್ರಶಾಂತ್ ಅವರು ಬೈಕ್‌ನಲ್ಲಿ ಮುರುಗೇಶ್‌ಪಾಳ್ಯದತ್ತ ಕರೆದುಕೊಂಡು ಹೋಗುತ್ತಿದ್ದರು. ಈ ವೇಳೆ ಸೆಲ್ವ ಕಾರ್ತಿಕ್, ಬೈಕ್‌ನ ಮಧ್ಯ ಭಾಗದಲ್ಲಿ ಕುಳಿತಿದ್ದ ಪ್ರಶಾಂತ್‌ರ ಕತ್ತು ಕೊಯ್ದು ಕೊಲೆ ಮಾಡಲು ಯತ್ನಿಸಿದ್ದಾನೆ. ಬೈಕ್ ಚಾಲನೆ ಮಾಡುತ್ತಿದ್ದ ಶೇಖರ್ ಅವರು ಪ್ರಶಾಂತ್‌ರ ಚೀರಾಟ ಕೇಳಿ ವಾಹನ ನಿಲ್ಲಿಸುತ್ತಿದ್ದಂತೆ ಆರೋಪಿ ಸೆಲ್ವ ಕಾರ್ತಿಕ್ ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

# ಅಕ್ರಮ ವಲಸಿಗರ ವಿರುದ್ಧ ಕ್ರಮಕ್ಕೆ ಆಗ್ರಹ: ಪೊಲೀಸ್ ಕಮಿಷನರ್‌ಗೆ ಸಚಿವೆ ಶೋಭಾ ಪತ್ರ

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಮಾನಿಕೆರೆ ಗ್ರಾಮದಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ಹಾಕಿಕೊಂಡು ವಾಸಮಾಡುತ್ತಿರುವ ಬಾಂಗ್ಲಾದೇಶದ ಸಾವಿರಾರು ವಲಸಿಗರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಪತ್ರ ಬರೆದಿರುವ ಅವರು ಹೆಬ್ಬಾಳದಲ್ಲಿ ಬಿಎಂಆರ್ ಸಿಎಲ್ ಕಾಮಗಾರಿ ಪರಿಶೀಲನೆ ವೇಳೆ ಅಮಾನಿಕೆರೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ, ಅಕ್ರಮ ವಲಸಿಗರು ವಾಸಿಸುತ್ತಿರುವುದು ಗಮನಕ್ಕೆ ಬಂತು.


ಉದಯವಾಹಿನಿ ಚಿತ್ರ

ಬಾಂಗ್ಲಾದೇಶದ ಅಂದಾಜು 3,500 ಪ್ರಜೆಗಳನ್ನು ಗುತ್ತಿಗೆದಾರರು ನಗರಕ್ಕೆ ಕರೆತಂದಿದ್ದಾರೆ. ಅವರ ಬಳಿ ನಕಲಿ ಆಧಾರ್ ಕಾರ್ಡ್, ಗುರುತಿನ ಚೀಟಿ ಇದೆ. ಅಕ್ರಮವಾಗಿ ಶೆಡ್ ಹಾಕಿಕೊಂಡು, ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ರಾಷ್ಟ್ರೀಯ ಭದ್ರತಾ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ತಕ್ಷಣ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಬೇಕು.

ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್ ಆರ್‌ಆರ್‌ಒ) ಅಧಿಕಾರಿಗಳು ಕೂಡಲೇ ವಲಸಿಗರ ದಾಖಲೆ ಪರಿಶೀಲನೆ ನಡೆಸಬೇಕು. ವಲಸಿಗರನ್ನು ನಗರಕ್ಕೆ ಕರೆತಂದು, ನಕಲಿ ಆಧಾರ್, ಗುರುತಿನ ಚೀಟಿ ನೀಡಿರುವ ಗುತ್ತಿಗೆದಾರರು ಮತ್ತು ಏಜೆಂಟರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

> **'ನಿಯಮಬಾಹಿರವಾಗಿ ಪ್ಲಾಸ್ಟಿಕ್, ತ್ಯಾಜ್ಯವನ್ನು ಇಲ್ಲಿ ಶೇಖರಿಸಿ ಸುಡುವ ಕೆಲಸ ಮಾಡುತ್ತಿದ್ದಾರೆ. ಕಸದ ತಾಣವಾಗಿ ಮಾರ್ಪಟ್ಟಿದೆ. ಇದರಿಂದ ಪರಿಸರ ಹಾಳಾಗುತ್ತಿದೆ. ಹೆಬ್ಬಾಳ ಮತ್ತು ಸುತ್ತಮುತ್ತಲ ಪ್ರದೇಶಗಳ ಜನರಿಗೆ ಆರೋಗ್ಯ ಸಮಸ್ಯೆ ಉಂಟಾಗಲಿದೆ' ಎಂದು ಹೇಳಿದ್ದಾರೆ.**

# ರಾಜ್ಯ ಕಲ್ಲು ಗಣಿ, ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ಗಣಿ, ಭೂ ವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಅವರು ಗಣಿ ಉದ್ಯಮಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ವಿಳಂಬ ಮಾಡದೇ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಕಲ್ಲುಗಣಿಗಾರಿಕೆ ಬಂದ್ ಮಾಡುತ್ತೇವೆ ಎಂದು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ಎಚ್ಚರಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಸಿದ್ದರಾಜು, ಗೌರವಾಧ್ಯಕ್ಷ ಸಂಜೀವ್ ಹಟ್ಟಿಹೊಳಿ, ಗಣಿ ಮಂತ್ರಿಗಳು ನಮ್ಮ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಅಧಿಕಾರಿಗಳಿಗೂ ಮತ್ತು ಮಂತ್ರಿಗಳಿಗೂ ಸಹಕಾರ ಇದ್ದಂತೆ ಕಾಣುತ್ತಿಲ್ಲ. ನಮ್ಮಬೇಡಿಕೆಗಳು ಈಡೇರದೇ ಹೋದಲ್ಲಿ ರಾಜ್ಯಾದ್ಯಂತ ಗಣಿಗಾರಿಕೆ ಬಂದ್ ಮಾಡುತ್ತೇವೆ. ಕಲ್ಲು ಗಣಿಗಾರಿಕೆ ಸ್ಥಗಿತಗೊಂಡಲ್ಲಿ ಎಲ್ಲಾ ಕಾಮಗಾರಿಗಳು ಸ್ಥಗಿತವಾಗುತ್ತವೆ ಎಂದರು. ರಾಜ್ಯದಲ್ಲಿ ಅನಧಿಕೃತವಾಗಿ ನಡೆಸುವ ಕ್ರಷರ್ ಗಳಿಗೆ ಅಧಿಕಾರಿಗಳು ಬೆಂಬಲವಾಗಿ ನಿಂತಿದ್ದಾರೆ. ನಾವು ಅಕ್ರಮ ಕ್ರಷರ್ ಗಳ ಜೊತೆ ಸ್ಪರ್ಧಿಸಲು ಸಾಧ್ಯವಿಲ್ಲ. ಗಣಿಗಾರಿಕೆ ಇಲಾಖೆಯಲ್ಲಿ ಭ್ರಷ್ಟ ಅಧಿಕಾರಿಗಳು ಹೆಚ್ಚುತ್ತಿದ್ದು,



ಉದಯವಾಹಿನಿ ಚಿತ್ರ

ಲೋಕಯುಕ್ತ ದಾಳಿಗೆ ಒಳಗಾದ ಭ್ರಷ್ಟ ಅಧಿಕಾರಿಗಳನ್ನು ಮತ್ತೆ ಅದೇ ಸ್ಥಳಕ್ಕೆ ಮರು ನೇಮಿಸುತ್ತಿದ್ದಾರೆ. ಇದರಿಂದ ಗಣಿ ಮಾಲೀಕರಿಗೆ ಸಮಸ್ಯೆ ಎದುರಾಗಿದೆ. ಸರ್ಕಾರ ಈ ವಿಷದಲ್ಲಿ ಗಮನಹರಿಸುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳ ಸಭೆ ಕರೆದು ಸಮಸ್ಯೆ ನಿವಾರಿಸಬೇಕು ಎಂದು ಹೇಳಿದರು. ಕಂದಾಯ ಮತ್ತು ಅರಣ್ಯ ಇಲಾಖೆ ನ್ಯೂನತೆಗಳಿಂದಲೂ ಗಣಿ ಮಾಲೀಕರಿಗೆ ಸಮಸ್ಯೆ ಉಂಟಾಗಿದೆ.

ಈ ಹಿಂದೆ ವಿಧಿಸಿದ್ದ 5 ಪಟ್ಟು ದಂಡವನ್ನು ತೆಗೆದು ಹೆಕ್ಟೇರಿಗೆ 5 ಲಕ್ಷ ರೂಪಾಯಿ ದಂಡ ವಿಧಿಸಿ ಇತ್ಯರ್ಥ ಗೊಳಿಸಬೇಕು. ಕೊನೆಯ ಹಂತದಲ್ಲಿ ಬಳಕೆ ಮಾಡುವವರಿಂದ ಶೇ 100 ರಷ್ಟು ರಾಜ ಧನ ಪಡೆಯಬೇಕು. ಇದರಲ್ಲಿ ಖಾಸಗಿ ಶೇ 25 ಮತ್ತು ಸರ್ಕಾರಿ ಕಾಮಗಾರಿಗಳ ಪಾಲು ಶೇ 75 ರಷ್ಟಿರಬೇಕು. ವಿದ್ಯುತ್ ಬಿಲ್ಲಿನ ಮೇಲೆ ತೆರಿಗೆ ಅಂದಾಜಿಸುವ ಅವೈಜ್ಞಾನಿಕ ಕ್ರಮ ಕೈಬಿಡಬೇಕಯು. ಲಾರಿಗಳಿಗೆ ಅಳವಡಿಸುತ್ತಿರುವ ಜಿಪಿಎಸ್ ವ್ಯವಸ್ಥೆಯನ್ನು ರದ್ದು ಮಾಡಬೇಕು. ಪಟ್ಟಾ ಭೂಮಿಗೆ ಸಂಪೂರ್ಣವಾಗಿ ರಾಜಧನವನ್ನು ತೆಗೆದುಹಾಕುವ ಜೊತೆಗೆ ಸರಕಾರಿ ಜಾಗದಲ್ಲಿ ಸ್ಟೋನ್ ಕ್ರಷರ್ ನಡೆಸುತ್ತಿರುವವರ ಭೂಮಿಗಳಿಗೆ ಪಟ್ಟಾ ನೀಡಬೇಕು. ಕಲ್ಲುಗಣಿ ಗುತ್ತಿಗೆ ಮತ್ತು ಪರವಾನಗಿಯ ಫಾರಂ ಸಿ ಅವಧಿಯನ್ನು 50 ವರ್ಷಕ್ಕೆ ವಿಸ್ತರಿಸಬೇಕು. ಜಿಲ್ಲಾ ಕೇಂದ್ರಗಳಲ್ಲಿಯೇ ಕಲ್ಲುಗಣಿ ಗುತ್ತಿಗೆಗೆ ಪರವಾನಗಿ ನೀಡಬೇಕು. ನಾವೆಲ್ಲರೂ ನಿಯಮಬದ್ಧವಾಗಿ ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಿದ್ದು, ಜಿಎಸ್ ಟಿ ಜಾರಿಗೆ ಬಂದ ನಂತರ ಸರ್ಕಾರದ ಆದಾಯ ಹೆಚ್ಚಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಆರ್.ಮಹೇಶ್, ಸಹ ಕಾರ್ಯದರ್ಶಿ ಸಿ.ಎಸ್.ಭಾಸ್ಕರ್, ಕೋಶಧಿಕಾರಿ ಉಮಾಶಂಕರಯ್ಯ, ಉಪಾಧ್ಯಕ್ಷರಾದ ಎಚ್. ವಾಗೇಶ್, ಸಂಘದ ಕಾರ್ಯದರ್ಶಿ ಕೆ.ವೆಂಕಟೇಶ್ವರ ರಾವ್ ಚೌಧರಿ ಉಪಸ್ಥಿತರಿದ್ದರು.

# ಸಂಚಾರ ದಟ್ಟಣೆ ಕಡಿಮೆ ಮಾಡುವ ಬದಲು ಮತ್ತಷ್ಟು ಹೆಚ್ಚಿಸಿದ ಸುರಂಗ ರಸ್ತೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಸಂಚಾರ ದಟ್ಟಣೆ ಬಿಕ್ಕಟ್ಟಿಗೆ ಪರಿಹಾರವಾಗಿ ರೂಪಿಸಲಾಗಿರುವ ಹೆಬ್ಬಾಳ ಮತ್ತು ಸಿಲ್ಕ್ ಬೋರ್ಡ್ ನಡುವಿನ ಅಂದಾಜು ರೂ. 22,000 ಕೋಟಿ ವೆಚ್ಚದ ಸುರಂಗ ರಸ್ತೆಯು ಸಂಚಾರ ದಟ್ಟಣೆ ಕಡಿಮೆ ಮಾಡುವ ಬದಲು ಮತ್ತಷ್ಟು ಹೆಚ್ಚಿಗೆ ಸೃಷ್ಟಿಸುತ್ತದೆ.

ನಗರದ ದೀರ್ಘಕಾಲದ ಸಂಚಾರ ದಟ್ಟಣೆಗೆ ಪ್ರಮುಖ ಪರಿಹಾರವಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷೆಯ ಸುರಂಗ ರಸ್ತೆ ಕೇವಲ ಎಂಟು ಪ್ರವೇಶ ಮತ್ತು ನಿರ್ಗಮನಗಳಲ್ಲಿ 16 ಹೊಸ ಗ್ರಿಡ್‌ಲಾಕ್ ಪಾಯಿಂಟ್‌ಗಳನ್ನು ಮಾಡುತ್ತಿದೆ - ಅಲ್ಲಿ ಯು-ಟರ್ನ್‌ಗಳು ಮತ್ತು ವಿಲೀನ ಸಂಚಾರವು ಮೇಲ್ಮೈ ಮಟ್ಟದ ದಟ್ಟಣೆಯನ್ನು ಇನ್ನಷ್ಟು ಹದಗೆಡಿಸುವ ನಿರೀಕ್ಷೆಯಿದೆ.

ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಲಭ್ಯವಾದ ಅಂತಿಮ ವಿವರವಾದ ಯೋಜನಾ ವರದಿ(ಡಿಪಿಆರ್)ಯಲ್ಲಿನ ಚಿತ್ರಗಳ ಪ್ರಕಾರ, ಈಗಾಗಲೇ ಜನದಟ್ಟಣೆಯಿಂದ ಕೂಡಿರುವ ಪ್ರದೇಶಗಳಾದ ಹೆಬ್ಬಾಳ ಫ್ಲೈಓವರ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ), ಮಹಾರಾಣಿ ಕಾಲೇಜು ಜಂಕ್ಷನ್, ಫ್ರೀಡಂ ಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳು, ಅಶೋಕ ಪಿಲ್ಲರ್ ಬಳಿಯ ವಿಲ್ಸನ್ ಗಾರ್ಡನ್ ಜಂಕ್ಷನ್ ಮತ್ತು ಪ್ರಸ್ತಾವಿತ ಪ್ರವೇಶ ಮತ್ತು ನಿರ್ಗಮನ ಪಾಯಿಂಟ್ ಗಳನ್ನು ಯೋಜಿಸಲಾಗಿದ್ದು, ಹೊಸೂರು ರಸ್ತೆಯಲ್ಲಿ ಹೆಚ್ಚುವರಿ ಸಂಚಾರ ಸಮಸ್ಯೆ ಎದುರಾಗಬಹುದು. ರೋಡಿಕ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ಡಿಪಿಆರ್ (ಸಂಪುಟ-ವಿ) ಸುರಂಗವು ನಗರದ ಒಟ್ಟು ಸಂಚಾರದಲ್ಲಿ ಎಷ್ಟು ಭಾಗದಲ್ಲಿ ಹಾದು ಹೋಗುತ್ತದೆ ಎಂಬುದರ ಬಗ್ಗೆ ಯಾವುದೇ ಅಂದಾಜು ಮಾಡಿಲ್ಲ. ಇದಲ್ಲದೆ, ಸುರಂಗ ಬಳಕೆದಾರರು ಪ್ರಯಾಣಿಸಬೇಕಾದ ಸರಾಸರಿ ದೂರವನ್ನು ಅದರಲ್ಲಿ ಉಲ್ಲೇಖಿಸಿಲ್ಲ.


ಉದಯವಾಹಿನಿ ಚಿತ್ರ

> **ಅಲ್ಟಿನೋಕ್ ಸಿದ್ಧಪಡಿಸಿದ ಬಿಬಿಎಂಪಿಯ ಕಾರ್ಯಸಾಧ್ಯತಾ ದತ್ತಾಂಶದ ಆಧಾರದ ಮೇಲೆ, ಬೆಂಗಳೂರು ಸುರಂಗವನ್ನು ಬಳಸುವ ಪ್ರಯಾಣಿಕರು ಸುರಂಗದ ಮಧ್ಯಭಾಗದ 16.68 ಕಿ.ಮೀ ಉದ್ದವನ್ನು ಪ್ರಯಾಣಿಸುವುದಲ್ಲದೆ, ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಸರಾಸರಿ 2.23 ಕಿ.ಮೀ ಹೆಚ್ಚುವರಿ ದೂರವನ್ನು ಕ್ರಮಿಸಬೇಕಾಗುತ್ತದೆ. ಪ್ರವೇಶದ್ವಾರದಲ್ಲಿ 1.14 ಕಿ.ಮೀ ಮತ್ತು ನಿರ್ಗಮನದಲ್ಲಿ 1.09 ಕಿ.ಮೀ. ಹೆಚ್ಚುವರಿ ಕ್ರಮಿಸಬೇಕು. ಸುರಂಗ ರಸ್ತೆ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಅಡಚಣೆಗಳು ಉಂಟಾಗುವ ಸಾಧ್ಯತೆ ಇದೆ ಎಂದು ನಗರ ತಜ್ಞರು ಹೇಳಿದ್ದಾರೆ.**

# ಸಾರ್ವಜನಿಕರ ಸಾವಿರಾರು ಸಮಸ್ಯೆಗಳ ನಿವಾರಣೆ

## ಜನರೊಂದಿಗೆ ಜನಸೇವಕ ಕಾರ್ಯಕ್ರಮ ಸಹಕಾರಿ-ಎಸ್.ಸುರೇಶ್ ಕುಮಾರ್

• ಉದಯವಾಹಿನಿ, ಬೆಂಗಳೂರು

ರಾಜಾಜಿನಗರ ಶಾಸಕರ ಕಛೇರಿಯಲ್ಲಿ ಮಾಜಿ ಶಿಕ್ಷಣ ಸಚಿವರು, ಶಾಸಕರಾದ ಎಸ್.ಸುರೇಶ್ ಕುಮಾರ್ ರವರ ನೇತೃತ್ವದಲ್ಲಿ ಜನರೊಂದಿಗೆ ಜನಸೇವಕ ಜನಸ್ಪಂದನಾ ಕಾರ್ಯಕ್ರಮ ಯಶ್ವಸಿಯಾಗಿ 25ನೇ ವಾರಕ್ಕೆ ಪಾದರ್ಪಣೆ ಮಾಡಿದೆ. ಸಾರ್ವಜನಿಕರ ಸಮಸ್ಯೆಗಳನ್ನು ಶಾಸಕರಾದ ಎಸ್.ಸುರೇಶ್ ಕುಮಾರ್ ರವರು ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಆಲಿಸಿದ, ಪರಿಹಾರ ಕಾರ್ಯಕ್ಕೆ ಕ್ರಮ ಕೈಗೊಂಡರು.

ಇದೇ ಸಂದರ್ಭದಲ್ಲಿ ಶಾಸಕರಾದ ಎಸ್.ಸುರೇಶ್ ಕುಮಾರ್ ರವರು ಮಾತನಾಡಿ ಸಾರ್ವಜನಿಕರ ಖುದ್ದು ಭೇಟಿ ಮಾಡಿ ಮಾಡುವುದರಿಂದ ಸಮಸ್ಯೆಗಳಿಗೆ ತತಕ್ಷಣ ಪರಿಹಾರಕ್ಕೆ ಅನುಕೂಲವಾಗಿ, ಸಮಸ್ಯೆಗಳು ನಿವಾರಣೆಯಾಗುತ್ತದೆ.

25ನೇವಾರದ ಜನರೊಂದಿಗೆ ಜನಸೇವಕ ಕಾರ್ಯಕ್ರಮದಿಂದ ಸಾವಿರಾರು ಸಮಸ್ಯೆಗಳು ನಿವಾರಣೆಯಾಗಿದೆ ಎಂಬ ಸಂತೋಷವಿದೆ. ಕುಡಿಯುವ ನೀರು, ಒಳಚರಂಡಿ, ಬೀದಿ ದೀಪ ಮತ್ತು ವೈದ್ಯಕೀಯ ಪರಿಹಾರ, ಸರ್ಕಾರ ಯೋಜನೆಗಳ ಫಲಾನುಭವಿಗಳಿಗೆ ಅದೇಶ ಪತ್ರ ನೀಡಿಕೆ ಹಾಗೂ ನೂರಾರು ಹೆಚ್ಚು ಕೆಪಿಸಿಎಲ್ ಇಂಜನಿಯರ್ ನೇಮಕಾತಿ ಅದೇಶ ಪತ್ರ ಕೊಡಿಸುವಲ್ಲಿ ಜನರೊಂದಿಗೆ ಜನಸೇವಕ ಕಾರ್ಯಕ್ರಮ ಯಶ್ವಸಿಯಾಗಿದೆ. ಜನರ ಸಮಸ್ಯೆ ನಿವಾರಣೆ ಜೊತೆಯಲ್ಲಿ ಪಕ್ಷ ಸಂಘಟನೆಗೆ ಆದ್ಯತೆ ನೀಡಿಲಾಗಿದೆ .ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಮಂಡಲ, ವಾರ್ಡ್ ಮಟ್ಟದ ಬಿಜೆಪಿ ಮುಖಂಡರು, ಕಾರ್ಯಕರ್ತರ ಜೊತೆಯಲ್ಲಿ ಗೂಗಲ್ ಮೀಟ್ ಮಾಡಲಾಯಿತು ಅಲ್ಲಿ ವಾರ್ಡ್ ಸಮಸ್ಯೆ ಹಾಗೂ ಪಕ್ಷ ಸಂಘಟನೆ ಕುರಿತು ಚರ್ಚಿಸಿ ಕೈಗೊಳ್ಳಬೇಕಾದ ಕ್ರಮದ ಚರ್ಚಿಸಲಾಯಿತು.



ಉದಯವಾಹಿನಿ ಚಿತ್ರ

**ಕೆಪಿಸಿಎಲ್ ಇಂಜನಿಯರ್ ನೇಮಕಾತಿ ಅದೇಶ ಪತ್ರ**

ಆನ್‌ಲೈನ್ ಗೂಗಲ್ ಮೀಟ್ ಮೂಲಕ ಕಾರ್ಯಕರ್ತರ ಜೊತೆಯಲ್ಲಿ ಸಂವಾದ ಕಾರ್ಯಕ್ರಮ.

ಮಾಜಿ ಮಹಾಪೌರರಾದ ರಂಗಣ್ಣ, ಮಂಡಲ ಅಧ್ಯಕ್ಷರಾದ ಸುದರ್ಶನ್, ಮಾಜಿ ಪಾಲಿಕೆ ಸದಸ್ಯರುಗಳಾದ ಎಮ್.ಮುನಿರಾಜು, ರಾಜಣ್ಣ ಹೆಚ್.ಆರ್.ಕೃಷ್ಣಪ್ಪ, ಹೆಚ್.ವಿಜಯಕುಮಾರ್, ದೀಪ ನಾಗೇಶ್ , ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಬಿಜೆಪಿ ಮುಖಂಡರುಗಳಾದ ಕಾಮಧೇನು ಸುರೇಶ್, ಅನಿಲ್ ರಂಗಣ್ಣ, ಅಮಿತ್ ಜೈನ್, ಮಂಜುನಾಥ್, ಉಮೇಶ್ ಪುಟ್ಟ, ಸಂಜಯ್ ಕುಮಾರ್, ಗೌತಮ್ ಮತ್ತು ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿ, ಪೊಲೀಸ್ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

> **ರಾಜಾಜಿನಗರ ವಿಧಾನಸಭಾ ಕ್ಷೇತ್ರ ಮಾದರಿ ವಿಧಾನಸಭಾ ಕ್ಷೇತ್ರವಾಗಬೇಕು, ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಬೇಕು ಈ ನಿಟ್ಟಿನಲ್ಲಿ ಜನರೊಂದಿಗೆ ಜನಸೇವಕ ಕಾರ್ಯಕ್ರಮ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ಹೇಳಿದರು.**

# ವರುಣನ ಅಬ್ಬರ; ಯೆಲ್ಲೋ ಅಲರ್ಟ್ ಘೋಷಣೆ


• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಪ್ರಸ್ತುತ ಮಳೆಯಾಗುತ್ತಿದ್ದು, ಮುಂದಿನ ಕೆಲವು ದಿನಗಳವರೆಗೆ ಮಳೆ ಮುಂದುವರಿಯುವ ನಿರೀಕ್ಷೆಯಿದೆ.

ಭಾರತೀಯ ಹವಾಮಾನ ಇಲಾಖೆ ಜುಲೈ 27ರವರೆಗೆ ಬೆಂಗಳೂರಿಗೆ ಹಳದಿ ಅಲರ್ಟ್ ಘೋಷಿಸಿದೆ. ಅಷ್ಟೇ ಅಲ್ಲದೇ ಏಳು ದಿನ ಕರಾವಳಿ ಭಾಗದ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ಭಾಗದಲ್ಲಿ ಮಳೆ ಹೆಚ್ಚಾಗುವ ಕಾರಣ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗೆ ರೆಡ್ ಅಲರ್ಟ್ ಎಚ್ಚರಿಕೆ ನೀಡಲಾಗಿದೆ. ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು ಜಿಲ್ಲೆಗಳಿಗೆ ಎರಡು ದಿನಗಳ ಕಾಲ ಆರೆಂಜ್ ಅಲರ್ಟ್ ನೀಡಲಾಗಿದೆ. ಮಂಡ್ಯ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಕರಾವಳಿ ಪ್ರದೇಶದಲ್ಲಿ ಗಾಳಿಯ ವೇಗ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಿರಿ ಎಂದು ಇಲಾಖೆ ತಿಳಿಸಿದೆ.

ಹಾವೇರಿ, ವಿಜಯಪುರ, ವಿಜಯನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲದೆ, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ. ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ.


ಉದಯವಾಹಿನಿ ಚಿತ್ರ

### ಎಲ್ಲೆಲ್ಲಿ ಮಳೆಯಾಗಲಿದೆ?

**ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು ಜಿಲ್ಲೆಗಳಲ್ಲಿ ಎರಡು ದಿನ ಆರೆಂಜ್ ಅಲರ್ಟ್ ಇರಲಿದೆ. ಮಂಡ್ಯ, ಮೈಸೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಗದಗ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ನೀಡಲಾಗಿದೆ.**

ಇದರಿಂದ ಚಳಿಯ ವಾತಾವರಣ ಇರಲಿದೆ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ಮಂಗಳೂರು, ಶೃಂಗೇರಿ, ಕೊಪ್ಪ, ಕಳಸ, ಸೋಮವಾರಪೇಟೆ, ರಾಯಚೂರು, ಕೊಪ್ಪಳ, ಯಾದಗಿರಿ, ಬೀದರ್, ಬೆಳಗಾವಿ, ದಾವಣಗೆರೆ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿದೆ.

# 15ರಿಂದ 20 ವರ್ಷ ನಾನೇ ಶಾಸಕ: ಪ್ರದೀಪ್ ಈಶ್ವರ

## ಚಿಕ್ಕಬಳ್ಳಾಪುರಕ್ಕೆ ಮೆಟ್ರೊ ತರಲು ಐದಾರು ಸಾವಿರ ಕೋಟಿ ಅಗತ್ಯ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಎಲ್ಲರೂ ದೇವರ ಕೇಳಿಕೊಂಡು ಶಾಸಕರಾದರೆ ನಾನು ದೇವರೇ ನಿರ್ಧಾರ ಮಾಡಿರುವ ಶಾಸಕ. 15ರಿಂದ 20 ವರ್ಷ ಶಾಸಕನಾಗಿರುವೆ ಎಂದು ಪ್ರದೀಪ್ ಈಶ್ವರ್ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಮುಂದಿನ ವಾರ ಚಿಕ್ಕಬಳ್ಳಾಪುರ ಕ್ಷೇತ್ರದ ಮಹಿಳೆಯರಿಗೆ ಸೀರೆ ವಿತರಿಸುವೆ. ಸೂರತ್‌ನಲ್ಲಿ ಮಳೆ ಹೆಚ್ಚಿರುವ ಕಾರಣ ಅಲ್ಲಿಂದ ಸೀರೆ ಬರುವುದು ತಡವಾಗಿದೆ. ಇದು ಮೂರನೇ ವರ್ಷದ ಸೀರೆ ವಿತರಣೆ ಕಾರ್ಯಕ್ರಮ. ಮುಂದಿನ ತಿಂಗಳು ವಿದ್ಯಾರ್ಥಿಗಳಿಗೆ ಬಟ್ಟೆ ವಿತರಿಸುವೆ.

ವಿದ್ಯಾರ್ಥಿ ವೇತನ ನೀಡುತ್ತಿದ್ದೇನೆ. ಹೀಗೆ ನಿರಂತವಾಗಿ ಕೆಲಸ ಮಾಡುತ್ತಿದ್ದೇನೆ ಎಂದರು. ಅಭಿವೃದ್ಧಿ ವಿಚಾರವಾಗಿ ದೂರದೃಷ್ಟಿ ಮುಖ್ಯ. ಚಿಕ್ಕಬಳ್ಳಾಪುರಕ್ಕೆ ಮೆಟ್ರೊ ತರಲು ಐದಾರು ಸಾವಿರ ಕೋಟಿ ಅಗತ್ಯ. ನಂದಿ ದೇಗುಲದ ಅಭಿವೃದ್ಧಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರವನ್ನು ರೂ.500 ಕೋಟಿ ಕೇಳಿದರೆ ಕೊಡುವರೇ ಭೋಗ ನಂದೀಶ್ವರ ದೇಗುಲವನ್ನು ಯುನೆಸ್ಕೊ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಿದರೆ ಅಭಿವೃದ್ಧಿ ಸಾಧ್ಯವಾಗಲಿದೆ ಎಂದರು. ನಂದಿ ದೇಗುಲಕ್ಕೆ 8ನೇ ಶತಮಾನದ ಇತಿಹಾಸವಿದೆ. ಯುನೆಸ್ಕೊ ಪಟ್ಟಿಗೆ ಸೇರಲು 10 ಷರತ್ತು ಇವೆ. ಅದರಲ್ಲಿ ಮೂರರಿಂದ ನಾಲ್ಕು ನಿಬಂಧನೆಗಳಿಗೆ ಈ ದೇಗುಲ ಒಳಪಡುತ್ತದೆ. ಯುನೆಸ್ಕೊ ಪಾರಂಪರಿಕ ಪಟ್ಟಿಗೆ ಸೇರಿಸುವ ಬಗ್ಗೆ ಐಎಎಸ್ ಅಧಿಕಾರಿಗಳನ್ನು ಕೇಳಿದೆ. ಅವರು ನಾವು ಪ್ರಸ್ತಾವ ಸಲ್ಲಿಸಿದರೆ 10ರಿಂದ 20 ವರ್ಷ ಆಗುತ್ತದೆ ಎಂದರು. ಆದ್ದರಿಂದ ಸರ್ಕಾರದಿಂದಲೇ ಪ್ರಸ್ತಾವ ಸಲ್ಲಿಸುತ್ತೇವೆ ಎಂದರು. ಯುನೆಸ್ಕೊ ಜ್ಯೂರಿ ಸದಸ್ಯರಲ್ಲಿ ಇಂಗ್ಲೆಂಡ್, ಅಮೆರಿಕದವರು ಇರುತ್ತಾರೆ. ಅವರಿಗೆ ನಂದಿ ದೇಗುಲದ ಇತಿಹಾಸ ತಿಳಿಸಬೇಕು. ಅವರ ಗಮನ ಸೆಳೆಯಲು ಅಂತರರಾಷ್ಟ್ರೀಯ ಮಟ್ಟದ ಪ್ರಭಾವ ಇರುವವರು ಅಗತ್ಯ. ಆದ್ದರಿಂದ ಸದ್ಗುರು ಜಗ್ಗಿ ವಾಸುದೇವ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ ಎಂದು ಹೇಳಿದರು. ಯುನೆಸ್ಕೊ ಪಟ್ಟಿ ಸೇರಿದರೆ ಅಂತರರಾಷ್ಟ್ರೀಯ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಸರ್ಕಾರಕ್ಕೆ ಆದಾಯ ಹೆಚ್ಚುತ್ತದೆ. ಆಗ ಸಹಜವಾಗಿ ಚಿಕ್ಕಬಳ್ಳಾಪುರಕ್ಕೆ ಮೆಟ್ರೊ ಬರುತ್ತದೆ. ವಿಮಾನ ನಿಲ್ದಾಣವಿದೆ ಎನ್ನುವ ಕಾರಣಕ್ಕೆ ದೇವನಹಳ್ಳಿಗೆ ಮೆಟ್ರೊ ಬಂದಿದೆ. ಅದೇ ರೀತಿಯಲ್ಲಿ ಯುನೆಸ್ಕೊ ಪಟ್ಟಿಗೆ ಸೇರಿದರೆ ಅನುಕೂಲವಾಗಲಿದೆ. ನನ್ನ ದೂರದೃಷ್ಟಿ ಈಗ ಅರ್ಥವಾಗದೇ ಇರಬಹುದು 10 ರಿಂದ 12 ವರ್ಷಗಳಲ್ಲಿ ಗೊತ್ತಾಗಲಿದೆ ಎಂದು ಹೇಳಿದರು.

ಸರ್ಕಾರ, ಸದ್ಗುರು ಅವರ ಸಹಕಾರದಲ್ಲಿ ಭೋಗ ನಂದೀಶ್ವರ ದೇಗುಲಕ್ಕೆ ಯುನೆಸ್ಕೊ ಪಾರಂಪರಿಕ ತಾಣದ ಸ್ಥಾನ ದೊರಕಿಸಿಕೊಡಲು ಪ್ರಯತ್ನಿಸುತ್ತಿದ್ದೇನೆ ಎಂದರು. ನನ್ನ ಏಕೆ ಇಷ್ಟಪಡುವಿರೊ ಗೊತ್ತಿಲ್ಲ, ಆದರೆ ಅಮ್ಮ ಅಂಬುಲೆನ್ಸ್ ಕಾರಣದಿಂದ ನನ್ನ ಮೇಲೆ ಪ್ರೀತಿ ತೋರಲೇಬೇಕು. ಅಂಬುಲೆನ್ಸ್‌ಗೆ ತಿಂಗಳಿಗೆ ರೂ. 15 ಲಕ್ಷ ವೆಚ್ಚ ಮಾಡುತ್ತಿದ್ದೇನೆ. 10 ಆಂಬುಲೆನ್ಸ್‌ಗಳಿವೆ. 20 ಚಾಲಕರು ಇದ್ದಾರೆ. ಅದರ ನಿರ್ವಹಣೆ, ಡೀಸೆಲ್ ಸೇರಿದಂತೆ ಎಲ್ಲವೂ ನನ್ನದೇ. ಒಂದು ರೂಪಾಯಿ ಸಹ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು.

**ಬಿಜೆಪಿಯವರು ಮಾಡಿದ್ದೇನು:** ಬಿಜೆಪಿಯವರು ಅಧಿಕಾರದಲ್ಲಿ ಇದ್ದಾಗ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಿದ್ದಾರೆ. ಅವರು ಮಾಡಿದ್ದನ್ನೇ ನಾವು ಮಾಡುತ್ತಿದ್ದೇವೆ. ಅನುದಾನವಿಲ್ಲದೆ ಹಳ್ಳಿಗಳಿಗೆ ಹೋಗಲು ಸಾಧ್ಯವಿಲ್ಲ. ಈಗಾಗಲೇ 190 ಹಳ್ಳಿಗಳ ಪ್ರವಾಸ ಮಾಡಿದ್ದೇನೆ ಎಂದರು. ಮುನ್ನೂರು ರಸ್ತೆ ಕಾಮಗಾರಿ ನಡೆಯುತ್ತಿದೆ. ಇಟ್ಟಪ್ಪನಹಳ್ಳಿ, ದಿನ್ನಹೊಸಹಳ್ಳಿ ರಸ್ತೆ ಕಾಮಗಾರಿ ಪೂರ್ಣವಾಗಿದೆ. ಜಡಲತಿಮ್ಮನಹಳ್ಳಿ ರಸ್ತೆ ಪ್ರಾರಂಭವಾಗಬೇಕಿದೆ. ಕಂದವಾರ ರಸ್ತೆ ಟೆಂಡರ್ ಹಂತದಲ್ಲಿ ಇದೆ ಎಂದರು. ನಗರಸಭೆ, ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಕಾಂಗ್ರೆಸ್ ಮುಖಂಡರು ಈ ವೇಳೆ ಹಾಜರಿದ್ದರು.


ಉದಯವಾಹಿನಿ ಚಿತ್ರ

> **ವರ್ಷಕ್ಕೆ ರೂ.1.50 ಕೋಟಿ ಉಳಿತಾಯವಾದರೆ ಅದರಲ್ಲಿ ಮನೆ ತೆಗೆದುಕೊಳ್ಳಬಹುದು. ಆದರೆ ನನ್ನ ತಂದೆ, ತಾಯಿಗೆ ಆದ ಸ್ಥಿತಿ ಬೇರೆಯವರಿಗೆ ಆಗಬಾರದು ಎಂದು ನಿಷ್ಕಲ್ಮಷ ಮನಸ್ಸಿನಿಂದ ಅಮ್ಮ ಆಂಬುಲೆನ್ಸ್ ಬಿಟ್ಟಿದ್ದೇನೆ ಎಂದು ಹೇಳಿದರು.**

### 22ನೇ ವಾರ್ಡ್‌ನಲ್ಲಿ ನಮಸ್ತೆ ಚಿಕ್ಕಬಳ್ಳಾಪುರ

**ಶಾಸಕ ಪ್ರದೀಪ್ ಈಶ್ವರ್ 22ನೇ ವಾರ್ಡ್‌ನ ವಿನಾಯಕ ನಗರದಲ್ಲಿ ಬೆಳಿಗ್ಗೆ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮ ನಡೆಸಿದರು. ಕೊಳವೆಬಾವಿ ಕೊರೆಸಿಕೊಡುವಂತೆ ರಸ್ತೆ ನಿರ್ಮಿಸುವಂತೆ ಇಲ್ಲಿನ ನಿವಾಸಿಗಳು ಕೋರಿದ್ದಾರೆ. ಇವುಗಳನ್ನು ಮಾಡಿಕೊಡಲಾಗುವುದು. ರಾಜಕಾಲುವೆ ಒತ್ತುವರಿ ವಿಚಾರವಾಗಿ ಕಾನೂನು ರೀತಿ ಕ್ರಮವಹಿಸಿ ಒತ್ತುವರಿ ತೆರವುಗೊಳಿಸಲಾಗುವುದು ಎಂದು ಪ್ರದೀಪ್ ಈಶ್ವರ್ ತಿಳಿಸಿದರು.**

# ಸ್ಕ್ಯಾನರ್ ಮಾಯ: ಉದ್ಭವಿಸಿದ ಚಿಲ್ಲರೆ ಸಮಸ್ಯೆ

• **ಉದಯವಾಹಿನಿ, ಚಿಂತಾಮಣಿ**

ವಾಣಿಜ್ಯ ತೆರಿಗೆ ಇಲಾಖೆ ವ್ಯಾಪಾರಸ್ಥರ ಫೋನ್ ಪೇ, ಯುಪಿಐ ಮತ್ತಿತರ ಎಲ್ಲಾ ವಹಿವಾಟುಗಳನ್ನು ಜಾಲಾಡಿ ವಾರ್ಷಿಕ ವಹಿವಾಟು ಲೆಕ್ಕಕ್ಕೆ ಸೇರಿಸಿ ಜಿಎಸ್‌ಟಿ ಪಾವತಿಸಲು ನೋಟಿಸ್ ನೀಡುತ್ತಿದೆ ಎಂಬ ಸುದ್ದಿ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ನುಂಗಲಾರದ ತುತ್ತಾಗಿದೆ.ಆಧಾರ್, ಪಾನ್‌ಕಾರ್ಡ್‌ಗಳ ಲಿಂಕ್ ಬಳಸಿಕೊಂಡು ಬ್ಯಾಂಕ್‌ಗಳಲ್ಲಿನ ವ್ಯಾಪಾರಸ್ಥರ ಖಾತೆಗಳ ಮಾಹಿತಿ ಪಡೆದು ನೋಟಿಸ್ ನೀಡಿ ದಂಡ ವಸೂಲಿ ಮಾಡುತ್ತಿದೆ. ಜಿಎಸ್‌ಟಿ ವಂಚಿಸಲಾಗಿದೆ ಎಂದು ಮೊಕದ್ದಮೆ ಹೂಡಲಾಗುತ್ತದೆ ಎಂದು ವ್ಯಾಪಾರಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.

ಅಂಗಡಿಗಳ ಮುಂದೆ ನೇತಾಡುತ್ತಿದ್ದ ಸ್ಕ್ಯಾನರ್‌ಗಳು ಮಾಯವಾಗುತ್ತಿವೆ. ಫೋನ್ ಪೇ ಬೇಡ ಕಾಸು ಕೊಡಿ. ಸ್ಕ್ಯಾನರ್ ತೆಗೆದು ಬಿಟ್ಟಿದೆ. ಚಿಲ್ಲರೆ ಇಲ್ಲದಿದ್ದರೆ ನಾಳೆ ಕೊಡಿ ಆದರೆ ಆನ್ ಲೈನ್ ಪೇಮೆಂಟ್ ಬೇಡ ಎನ್ನುತ್ತಿದ್ದಾರೆ ಅಂಗಡಿಯವರು. ಚಿಲ್ಲರೆ ಅಂಗಡಿಯವರು, ತಳ್ಳು ಗಾಡಿಯವರು, ಹೂವು, ಹಣ್ಣು ಮತ್ತು ತರಕಾರಿ ವ್ಯಾಪಾರಿಗಳಿಂದ ಒಂದು ವಾರದಿಂದ ಈ ಮಾತು ಕೇಳಿಬರುತ್ತಿದೆ. ನಮಗೆ ಬರುವ ಅಲ್ಪ ಲಾಭದಲ್ಲಿ ಜೀವನ ನಿರ್ವಹಣೆ ಕಷ್ಟ. ಇಂತಹ ಪರಿಸ್ಥಿತಿಯಲ್ಲಿ ತೆರಿಗೆ ನೋಟಿಸ್ ಬಂದರೆ ಏನು ಗತಿ ಎನ್ನುತ್ತಾರೆ ಸಣ್ಣ ಅಂಗಡಿ ಮಾಲೀಕ ನಾಗರಾಜ್.

ಯುಪಿಐ, ಆನ್‌ಲೈನ್ ವಹಿವಾಟಿಗಾಗಿ ಅಂಟಿಸಿದ್ದ ಕ್ಯೂಆರ್ ಕೋಡ್‌ಗಳನ್ನು ಸಣ್ಣ ವ್ಯಾಪಾರಿಗಳು ಕಿತ್ತುಹಾಕಿದ್ದಾರೆ. ಹಣ ಕೊಟ್ಟು ವ್ಯಾಪಾರ ಮಾಡಿ ಎಂದು ಬೇಡಿಕೆ ಇಡುತ್ತಿದ್ದಾರೆ. ಇದರಿಂದ ಮತ್ತೆ ಚಿಲ್ಲರೆ ಸಮಸ್ಯೆ ಉದ್ಭವವಾಗಿದೆ.


ಉದಯವಾಹಿನಿ ಚಿತ್ರ

> **ಬೆಳಿಗ್ಗೆಯಿಂದ ಸಂಜೆವರೆಗೂ ಗಾಡಿ ತಳ್ಳುತ್ತೇವೆ. ಆದರೂ ನಮಗೆ ಬರುವ ಲಾಭ ಅಷ್ಟಕಷ್ಟೆ. ನಾವು ಲೆಕ್ಕದ ವಹಿವಾಟುಗಳನ್ನು ಇಡಬೇಕು. ಜಿಎಸ್‌ಟಿ ಕಟ್ಟಬೇಕು ಎಂದರೆ ಹೇಗೆ ಜೀವನ ನಡೆಸುವುದು. ನಮ್ಮ ಹಣಕ್ಕೆ ನಾವೇ ತೆರಿಗೆ ಕಟ್ಟಬೇಕೆಂದರೆ ಹೇಗೆ? ನಮಗೆ ವ್ಯಾಪಾರ ಇಲ್ಲದಿದ್ರೂ ಪರವಾಗಿಲ್ಲ ನಾವು ಯುಪಿಐ ಪೇಮೆಂಟ್ ಸ್ವೀಕರಿಸುವುದಿಲ್ಲ. ಹಣ ಕೊಟ್ಟರೆ ಮಾತ್ರ ಹೂವು ಕೊಡುತ್ತೇವೆ ಎಂದು ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವ ಸರೋಜಮ್ಮ ಹೇಳಿದರು.**

# ಲಿಂಗಾಯತ ವಿಶ್ವಶ್ರೇಷ್ಠ ಧರ್ಮ: ಚಂದ್ರಶೇಖರ ಸ್ವಾಮೀಜಿ

• **ಉದಯವಾಹಿನಿ, ಗುಬ್ಬಿ**

ಸಕಲ ಧರ್ಮಗಳಿಗೆ ಲೇಸು ಬಯಸುವ ವೀರಶೈವ- ಲಿಂಗಾಯತ ಧರ್ಮ ವಿಶ್ವಶ್ರೇಷ್ಠ ಧರ್ಮವಾಗಿದೆ ಎಂದು ಬೆಟ್ಟದಹಳ್ಳಿ ಗವಿಮಠದ ಚಂದ್ರಶೇಖರ ಸ್ವಾಮೀಜಿ ತಿಳಿಸಿದರು. ಪಟ್ಟಣ ಹೊರವಲಯದ ಹೇರೂರಿನಲ್ಲಿ ತಾಲ್ಲೂಕು ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಸವಾದಿ ಶರಣರ ಹಾಗೂ ಗುರು ರೇಣುಕಾಚಾರ್ಯರ ತತ್ವ, ಸಿದ್ಧಾಂತಗಳ ಮೇಲೆ ರೂಪಗೊಂಡಿರುವ ವೀರಶೈವ ಲಿಂಗಾಯತ ಧರ್ಮ ಪಾಲನೆಯನ್ನು ಕೇವಲ ಮಾತಿನಲ್ಲಿ ಆಡದೆ ಆಚರಣೆಯಲ್ಲಿ ತೋರಬೇಕಿದೆ ಎಂದು ಹೇಳಿದರು.

ಗೊಲ್ಲಹಳ್ಳಿ ಮಠದ ವಿಭವ ವಿದ್ಯಾಶಂಕರ ಸ್ವಾಮೀಜಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪೋಷಕರು ಮಕ್ಕಳನ್ನು ಪ್ರೇಮದಿಂದ ಬೆಳೆಸದೆ ಮೋಹದಿಂದ ಬೆಳೆಸುತ್ತಿದ್ದಾರೆ. ಶರಣರ ಬದುಕಿನ ಆದರ್ಶಗಳನ್ನು ಮಕ್ಕಳಲ್ಲಿ ತುಂಬಿ ಸಾಮಾಜಿಕ ಚಿಂತನೆಗಳನ್ನು ಬೆಳಸಬೇಕಿದೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಎಸ್.ಆರ್. ನಟರಾಜು ಮಾತನಾಡಿ, ಸದ್ಯ ನಡೆಯುತ್ತಿರುವ ಜಾತಿ ಗಣತಿಯಲ್ಲಿ ಸಮುದಾಯದವರು ಕಡ್ಡಾಯವಾಗಿ ವೀರಶೈವ–ಲಿಂಗಾಯತ ಎಂದು ನಮೂದಿಸಿ ಹೆಚ್ಚಿನ ಸವಲತ್ತು ಪಡೆಯಬೇಕು ಎಂದು ಹೇಳಿದರು. ಎಸ್‌ಎಸ್‌ಎಲ್‌ಸಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಎಸ್‌ಎಸ್‌ಎಲ್‌ಸಿ, ಪಿಯು ವಿದ್ಯಾರ್ಥಿಗಳು ಹಾಗೂ ಸಮುದಾಯದ ನಿವೃತ್ತ ನೌಕರರನ್ನು ಸತ್ಕರಿಸಲಾಯಿತು. ವೀರಶೈವ–ಲಿಂಗಾಯತ ನೌಕರರ ತಾಲ್ಲೂಕು ಘಟಕದ ಅಧ್ಯಕ್ಷ ಕೆ.ಎಂ. ರವೀಶ್, ಪದಾಧಿಕಾರಿಗಳು, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ತಾಲ್ಲೂಕು ಘಟಕದ ಅಧ್ಯಕ್ಷ ಎಚ್.ಸಿ. ಯತೀಶ್, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ್ ಹಾಗೂ ಸಮುದಾಯದವರು ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

> **ಕೆಎಎಸ್ ಅಧಿಕಾರಿ ಸೋಮಶೇಖರ್ ಮಾತನಾಡಿ, ಸಮುದಾಯದಲ್ಲಿ ಒಗ್ಗಟ್ಟು ಇಲ್ಲದಿರುವುದರಿಂದ ವೀರಶೈವ-ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ಸಾಕಷ್ಟು ಅನ್ಯಾಯವಾಗುತ್ತಿದೆ. ಸಮುದಾಯದವರ ಹಕ್ಕುಗಳನ್ನು ಭಿಕ್ಷೆ ಬೇಡಿ ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರಾದೃಷ್ಟಕರ ಎಂದರು.**

# 30 ವರ್ಷದಿಂದ ರಸ್ತೆಯೇ ಬಂದ್!

• **ಉದಯವಾಹಿನಿ, ಗೌರಿಬಿದನೂರು**

ಒಂದು ರಸ್ತೆ ಎಷ್ಟು ವರ್ಷಗಳ ಕಾಲ ಬಂದ್ ಆಗಬಹುದು. ಒಂದು... ಎರಡು...ಹೀಗೆ ಬೆರಳೆಣಿಕೆಯ ವರ್ಷಗಳಲ್ಲ. ಕಳೆದ 30 ವರ್ಷಗಳಿಂದಲೂ ರಸ್ತೆ ಬಂದ್ ಆಗಿದೆ. ಈ ರಸ್ತೆಯ ಬಗ್ಗೆ ನಗರಸಭೆ ಅಧಿಕಾರಿಗಳು ಸ್ವಲ್ಪವೂ ಗಮನವಹಿಸುತ್ತಿಲ್ಲ ಎನ್ನುವುದಕ್ಕೆ ಇದು ಸ್ಪಷ್ಟ ನಿದರ್ಶನ.
ನಗರದ ಹಿಂದೂಪುರ ರಸ್ತೆಯಿಂದ ಆಚಾರ್ಯ ಶಾಲೆಯವರೆಗೆ ಇರುವ ರಸ್ತೆ, 30 ವರ್ಷಗಳಿಂದ ಬಳಕೆ ಬಂದಿಲ್ಲ. ಪಾದಚಾರಿಗಳ ಬಳಕೆಗೆ ಯೋಗ್ಯವಾಗಿಲ್ಲ. ಗಿಡ ಗಂಟಿಗಳು ಬೆಳೆದಿವೆ. ರಸ್ತೆ ಉದ್ದಕ್ಕೂ ವಿದ್ಯುತ್ ಕಂಬಗಳು ನಿಂತಿವೆ. ಇದರಿಂದ ನಗರವಾಸಿಗಳಿಗೆ ಇಡೀ ರಸ್ತೆಯೇ ಮೂತ್ರಾಲಯವಾಗಿದೆ. ಕೆಲವೆಡೆ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಈ ರಸ್ತೆಯು 12ನೇ ವಾರ್ಡ್ ವ್ಯಾಪ್ತಿಗೆ ಒಳಪಡುತ್ತದೆ. ಈ ರಸ್ತೆ ಎಲ್ಲೊ ನಗರದ ಮೂಲೆಯಲ್ಲಿ ಇಲ್ಲ. ಗೌರಿಬಿದನೂರು ಹೃದಯ




ಭಾಗದಲ್ಲಿದೆ. ಹೆಚ್ಚಿನ ದರವಿರುವ ಇಂತಹ ಭಾಗದಲ್ಲಿ ರಸ್ತೆಯನ್ನೇ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದು ರಸ್ತೆಯೇ ಎಂಬ ಅನುಮಾನ ಸಾರ್ವಜನಿಕರಿಗೆ ಹುಟ್ಟಿಸುವಷ್ಟರ ಮಟ್ಟಿಗೆ ರಸ್ತೆ ಕಳೆದುಹೋಗಿದೆ. ರಸ್ತೆಯಲ್ಲಿರುವ ಅಕ್ಕಪಕ್ಕದ ಮನೆ ಮತ್ತು ಅಂಗಡಿ ಮಾಲೀಕರು ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಕೆಲವೆಡೆ ಮನೆ ಮಾಲೀಕರು ಇಡೀ ರಸ್ತೆಯನ್ನೇ ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದಾರೆ. ಕೆಲವರು ಕಾಂಪೌಂಡ್ ಹಾಕಿದ್ದಾರೆ. ನಗರದ ಹೃದಯ ಭಾಗದಲ್ಲಿರುವ ಸಾರ್ವಜನಿಕ ರಸ್ತೆಯನ್ನು ಈ ರೀತಿ ಉದಾಸೀನ ಮಾಡಿರುವುದು ಎಷ್ಟರ ಮಟ್ಟಿಗೆ ಸರಿ ಸಾರ್ವಜನಿಕರ ಆಸ್ತಿ ಪಾಸ್ತಿ ಕಾಪಾಡುವುದು ಅಧಿಕಾರಿಗಳ ಕರ್ತವ್ಯ, ಆದರೆ ದಶಕಗಳಿಂದ ಈ ರಸ್ತೆಯನ್ನು ನಿರ್ಲಕ್ಷ್ಯ ವಹಿಸಿರುವುದು ಏಕೆ ಎಂದು ಸಾರ್ವಜನಿಕರು ನಗರಸಭೆಯ ನಡೆಯನ್ನು ಪ್ರಶ್ನಿಸುತ್ತಿದ್ದಾರೆ. ನಗರಸಭೆ ಅಧಿಕಾರಿಗಳು ಮಾತ್ರ ನಮಗೂ ಇದಕ್ಕೂ ಸಂಬಂಧ ಇಲ್ಲ ಎನ್ನುವಂತೆ ಕಣ್ಮುಚ್ಚಿ ಕುಳಿತಿದ್ದಾರೆ.ಬಿ.ಚ್ ರಸ್ತೆಯ ಹಿಂದೂಪುರ ಬಸ್ ನಿಲ್ದಾಣದಿಂದ ಪ್ರಾರಂಭವಾಗುವ ಸಂಪರ್ಕ ರಸ್ತೆ, ಕೇಕ್ ವರ್ಲ್ಡ್ ಬೇಕರಿ, ಇಂಡಿಯನ್ ಗ್ಯಾಸ್ ಕಚೇರಿಯಿಂದ ಆಚಾರ್ಯ ಶಾಲೆಯವರೆಗೆ ಇದೆ. 20 ಅಡಿ ಅಗಲದ ಈ ರಸ್ತೆ, ನಗರದ ಬಹುತೇಕ ರಸ್ತೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಇಂತಹ ಪ್ರಮುಖ ರಸ್ತೆ ಬಗ್ಗೆ ವಾರ್ಡ್ ಸದಸ್ಯರು, ನಗರಸಭೆ ಅಧಿಕಾರಿಗಳು ಗಮನ ಹರಿಸದೆ, ಒತ್ತುವರಿದಾರರಿಗೆ ಅನುಕೂಲ ಮಾಡಿ ಕೊಟ್ಟಂತಿದೆ. ಸರ್ಕಾರ ಸಾರ್ವಜನಿಕರ ಅನುಕೂಲಕ್ಕೆ ನಿರ್ಮಿಸಿರುವ ಇಂತಹ ಪ್ರಮುಖ ರಸ್ತೆಯನ್ನು ಆದಷ್ಟು ಬೇಗ ಸಾರ್ವಜನಿಕರ ಓಡಾಟಕ್ಕೆ ನಗರಸಭೆ ಅನುಕೂಲ ಮಾಡಿಕೊಡಬೇಕು. ಈ ಬಗ್ಗೆ ಸಾರ್ವಜನಿಕರು ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಾರೆ.

> **ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸಿ ಒತ್ತುವರಿ ಆಗಿದ್ದರೆ ತೆರವುಗೊಳಿಸಲಾಗುವುದು. ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು. ಲಕ್ಷ್ಮಿನಾರಾಯಣಪ್ಪ ನಗರಸಭೆ ಅಧ್ಯಕ್ಷ ಗೌರಿಬಿದನೂರು ಅಧಿಕಾರಿಗಳ ಮೀನ ಮೇಷ ಹಲವು ಬಾರಿ ಈ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತ ಮಾಡಿಕೊಡುವಂತೆ ನಗರಸಭೆ ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಮೀಷಮೇಷ ಎನಿಸುತ್ತಿದ್ದಾರೆ.**
> **-ಅಶೋಕ್ ವಾರ್ಡ್ ನಿವಾಸಿ**

> **ಬದ್ಧತೆ ಎಷ್ಟಿದೆ ಎನ್ನುವ ಅರಿವು ನಗರದ ಹೃದಯ ಭಾಗದ ಸಂಪರ್ಕ ರಸ್ತೆ ದಶಕಗಳ ಕಾಲ ಸಾರ್ವಜನಿಕರಿಗೆ ಓಡಾಡಲು ಆಗದೆ ಸಂಬಂಧಿಸಿದ ಅಧಿಕಾರಿಗಳು ಇದನ್ನು ಸರಿಪಡಿಸುವ ಗೋಜಿಗೆ ಹೋಗಿಲ್ಲ. ಇದರಿಂದ ಅಧಿಕಾರಿಗಳ ಬದ್ಧತೆ ಎಷ್ಟಿದೆ ಎಂದು ತಿಳಿಯುತ್ತದೆ.**
> **ಅಂಜಿನಪ್ಪ ಗೌರಿಬಿದನೂರು**

# ಮಂಥನ ಮುತ್ತುಗಳು ಚುಟುಕು ಸಂಕಲನ ಬಿಡುಗಡೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ಕಾವ್ಯಕ್ಕೆ ವಿಜ್ಞಾನ ಖಚಿತತೆಯ, ವಿಜ್ಞಾನಕ್ಕೆ ಮಾನವೀಯತೆಯ ಸ್ಪರ್ಶ ಬೇಕು. ಆಗ ಮಾತ್ರ ವಿಜ್ಞಾನ ವಿನಾಶದ ಬದಲು ಪ್ರಗತಿಗೆ ಕಾರಣವಾಗಬಹುದು' ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ. ತಳವಾರ ಅಭಿಪ್ರಾಯ ವ್ಯಕ್ತಪಡಿಸಿದರು.
ಬೆಳಕು ಚಾರಿಟಬಲ್ ಟ್ರಸ್ಟ್ ಪ್ರಗತಿ ಪ್ರಕಾಶನದ ಸಹಯೋಗದಲ್ಲಿ ನಗರದ ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆ ಅಕ್ಕಿಹೆಬ್ಬಾಳು ಸರ್ಕಾರಿ ಪಿಯು ಕಾಲೇಜಿನ ಭೌತವಿಜ್ಞಾನ ಉಪನ್ಯಾಸಕ ಎಲ್.ಸಿ. ಶಂಕರ ಅವರ ಮಂಥನ ಮುತ್ತುಗಳು ಚುಟುಕು ಸಂಕಲನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಾನವ ಕಲ್ಯಾಣಕ್ಕಾಗಿ ಸಾಹಿತ್ಯ, ವಿಜ್ಞಾನ ಸಂಗಮವಾಗಬೇಕು ಎಂದು ಆಶಿಸಿದರು. ಕಾವ್ಯದ ಮೂಲದ್ರವ್ಯವೆಂದರೆ ಭಾವತೀವ್ರತೆ ಮತ್ತು ಭಾಷೆ. ಕಾವ್ಯಕ್ಕೆ ಉತ್ಕಟವಾದ ಭಾವತೀವ್ರತೆ ಇರಬೇಕು. ಹೊರಮೈಯಲ್ಲಿ ಭಾಷೆ ಇರಬೇಕು. ಪ್ರಾಣಕ್ಕೆ ಉಸಿರಿನಂತೆ ಕಾವ್ಯಕ್ಕೆ ಭಾಷೆ ಇರಬೇಕು. ಭಾವ, ಭಾಷೆ, ಪ್ರತಿಭೆ ಸಂಗಮವಾದಾಗ ಕಾವ್ಯ ಮೂಡುತ್ತದೆ. ಕಾವ್ಯಕ್ಕೆ ವಸ್ತು ಮತ್ತು ಪರಿಸರ ಕೂಡ ಮುಖ್ಯವಾಗುತ್ತದೆ. ಲೌಕಿಕ, ಅನುಭಾವಿಕ ಕಾವ್ಯವಾಗುತ್ತದೆ' ಎಂದರು. ಉದ್ಘಾಟಿಸಿದ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಗತಿ ಪ್ರಕಾಶನದ ಪುರುಷೋತ್ತಮ ಮಾತನಾಡಿದರು.

ಕನ್ನಡ ಉಪನ್ಯಾಸಕ ಶಿವಾನಂದ, ಕೆ.ಆರ್. ನಗರ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಶ್ರೀನಿವಾಸ್, ಸಂಗೀತ ಶಿಕ್ಷಕಿ ಡಿ. ಜ್ಞಾನೇಶ್ವರಿ ಪ್ರೌಢಶಾಲಾ ಶಿಕ್ಷಕಿ ರೋಹಿಣಿ, ಉಪನ್ಯಾಸಕ ಗಿಡ್ಡಶೆಟ್ಟಿ, ನೆರಳು ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಕುಮಾರ್ ಅಕ್ಕಿಹೆಬ್ಬಾಳು ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಬಾಲಕೃಷ್ಣ, ಪ್ರೌಢಶಾಲಾ ಮುಖ್ಯಶಿಕ್ಷಕ ಚಲುವರಾಜ್, ಗೃಹರಕ್ಷಕ ದಳದ ನಿವೃತ್ತ ಕಮಾಂಡೆಂಟ್ ವಿ. ಪುರುಷೋತ್ತಮ ಪಾಲ್ಗೊಂಡಿದ್ದರು.

### ಹೊಸಬರನ್ನು ಸ್ವಾಗತಿಸಬೇಕು

**ಓದಿಗೂ, ವೃತ್ತಿಗೂ, ಬರವಣಿಗೆಗೂ ಸಂಬಂಧವಿಲ್ಲ. ಆಸಕ್ತಿ ಇರುವವರೆಲ್ಲಾ ಸಾಹಿತ್ಯ ರಚಿಸಬಹುದು. ಕಾವ್ಯಕ್ಕೆ ಹೊಸ ಹೊಸ ನೀರು ಬರುತ್ತಾ ಇರಬೇಕು. ಸಾಹಿತ್ಯ ಲೋಕಕ್ಕೆ ಯಾರೇ ಹೊಸಬರು ಬಂದರೂ ಸ್ವಾಗತಿಸುವುದು ನಮ್ಮ ಕರ್ತವ್ಯವಾಗಬೇಕು. ಶಂಕರ ಅವರ ಚುಟುಕುಗಳಲ್ಲಿ ಪರಿಸರ, ಸಾರ್ವಜನಿಕ, ಕೌಟುಂಬಿಕ ಪ್ರಜ್ಞೆಯ ಚಿಂತನೆ ವ್ಯಾಪಕವಾಗಿ ಮೂಡಿಬಂದಿದೆ' ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ನೆರಳು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಅಮ್ಮಸಂದ್ರ ಸುರೇಶ್, ಈ ಕೃತಿಯಲ್ಲಿರುವ ಚುಟುಕುಗಳು ಚಿಕಿತ್ಸಕ ಗುಣ ಹೊಂದಿವೆ. ಸಮಾಜಕ್ಕೆ ಮುದ ನೀಡುವ ವಿಷಯಗಳು ಅಡಕವಾಗಿವೆ' ಎಂದರು.**

# ಕೊರಟಗೆರೆ ಸಂತೆಯಲ್ಲಿ ಮೂಲಸೌಕರ್ಯ ಕೊರತೆ

## ಪಂಚಾಯಿತಿಯಿಂದ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಸುಮಾರು 15 ವರ್ಷದ ಹಿಂದೆ ಶೌಚಾಲಯ ನಿರ್ಮಿಸಲಾಗಿದೆ

• **ಉದಯವಾಹಿನಿ, ಕೊರಟಗೆರೆ**

ಜಿಲ್ಲೆಯಲ್ಲೆ ಕೊರಟಗೆರೆ ಅತಿ ಚಿಕ್ಕ ತಾಲ್ಲೂಕು. ಪಟ್ಟಣ ಕೂಡ ಕಿರಿದಾಗಿದೆ. ಆದರೂ ಕೆಲವೊಂದು ಮೂಲ ಸಮಸ್ಯೆಗಳನ್ನು ಇಲ್ಲಿನ ಸಾರ್ವಜನಿಕರು ದಿನ ನಿತ್ಯ ಎದುರಿಸುತ್ತಲೆ ಇದ್ದಾರೆ. ಅದಕ್ಕೊಂದು ಪ್ರಮುಖ ಉದಾಹರಣೆ ಪ್ರತಿ ಇಲ್ಲಿ ನಡೆಯುವ ಸಂತೆ. ಸಂತೆಗೆ ತಾಲ್ಲೂಕಿನ ಹತ್ತಾರು ಪ್ರದೇಶಗಳಿಂದ ರೈತರು ಬೆಳೆದ ಹಣ್ಣು, ತರಕಾರಿ, ದೈನಂದಿನ ಬಳಕೆಯ ವಸ್ತುಗಳನ್ನು ಖರೀದಿಸಲು ಮತ್ತು ಮಾರಾಟಕ್ಕೆ ಬರುತ್ತಾರೆ. ಆದರೆ ಇಂಥ ಸಮೃದ್ಧ ವ್ಯಾಪಾರ ಚಟುವಟಿಕೆಯ ಮಧ್ಯೆ ಸಾರ್ವಜನಿಕರು ಅನುಭವಿಸುತ್ತಿರುವ ಮೂಲಸೌಕರ್ಯಗಳ ಕೊರತೆ ಅನುಭವಿಸುತ್ತಿದ್ದಾರೆ.

ಸಂತೆಯು ಪಟ್ಟಣದ ಮುಖ್ಯರಸ್ತೆಯ ಸರ್ಕಾರಿ ಬಸ್ ನಿಲ್ದಾಣದ ಎದುರಿನ ಪ್ರದೇಶದಲ್ಲಿ ನಡೆಯುತ್ತದೆ. ಸಂತೆ ದಿನ ಮುಖ್ಯರಸ್ತೆಯಲ್ಲಿ ವಾಹನ ಸಂಚಾರ ಹಾಗೂ ಜನರ ಓಡಾಟ ತುಂಬಾ ಕಿರಿಕಿರಿ ಅನುಭವಿಸುವಂತಾಗಿದೆ. ಪಾದಚಾರಿ ಮಾರ್ಗಗಳಿಲ್ಲದೆ ಹಿರಿಯರು, ಮಕ್ಕಳು ಅಪಾಯದ ನಡುವೆಯೇ ಸಾಗಬೇಕಾಗಿದೆ.

ಸಂತೆ ಸ್ಥಳದ ಬಳಿ ಪಟ್ಟಣ ಪಂಚಾಯಿತಿಯಿಂದ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಸುಮಾರು 15 ವರ್ಷದ ಹಿಂದೆ ಶೌಚಾಲಯ ನಿರ್ಮಿಸಲಾಗಿದೆ. ನಿರ್ಮಾಣವಾದಗಿಂದಲೂ ಒಂದೇ ಒಂದು ದಿನ ಸಾರ್ವಜನಿಕ ಬಳಕೆಗೆ ನೀಡಿಲ್ಲ. ಈಗ ಅದು ದುಸ್ಥಿತಿ ತಲುಪಿದೆ. ಸಂತೆಗೆ ಬರುವ ವರ್ತಕರು ಹಾಗೂ ವ್ಯಾಪಾರಿಗಳಿಗೆ ಬಯಲು ಶೌಚವೇ ಗತಿ. ಮಹಿಳೆಯರಿಗೆ ಇದು ಸಂಕಟದ ಸ್ಥಿತಿ.

ಆದರೂ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಬಗ್ಗೆ ಪಟ್ಟಣ ಪಂಚಾಯಿತಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ಸಂತೆ ಮೈದಾನಕ್ಕೆ ಹೊಂದಿಕೊಂಡಂತೆ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಇದೆ. ಸಂತೆಗೆ ಬರುವವರು ಶಾಲೆಯ ಕಾಂಪೌಂಡ್ ಪಕ್ಕದಲ್ಲೆ ಶೌಚ ಮಾಡುವುದರಿಂದ ಶಾಲಾ ಮಕ್ಕಳು ದುರ್ವಾಸನೆಯಲ್ಲಿ ದಿನ ದೂಡುವ ಸ್ಥಿತಿ ನಿರ್ಮಾಣವಾಗಿದೆ. ಸಂತೆ ಸ್ಥಳದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಮಾಡಲಾಗಿದೆ. ಆದರೆ ಅದು ಕೆಟ್ಟು ನಿಂತು ವರ್ಷಗಳೆ ಕಳೆದಿವೆ. ಸಂತೆಗೆ ಬರುವ ಜನ ಹತ್ತಿರದ ಅಂಗಡಿ, ಹೋಟೆಲ್‌ಗಳಲ್ಲಿ ನೀರಿಗೆ ಅವಲಂಬಿತರಾಗಿದ್ದಾರೆ. ಬೇಸಿಗೆಯಲ್ಲಿ ಅಂಗಡಿ, ಹೋಟೆಲ್‌ನವರೂ ಕೂಡ ನೀರಿನ ಅಭಾವದ ಕಾರಣದಿಂದ ನೀರು ಕೊಡಲು ಹಿಂದೆಮುಂದೆ ನೋಡುತ್ತಾರೆ. ಸಂತೆ ದಿನಗಳಲ್ಲಿ ವಾಹನ ನಿಲುಗಡೆಗೆ ಸರಿಯಾದ ವ್ಯವಸ್ಥೆ ಇಲ್ಲದೆ ವಾಹನ ರಸ್ತೆಗಳ ಎರಡೂ ಬದಿಗೆ ನಿಲ್ಲಿಸಲಾಗುತ್ತಿದೆ. ಹೀಗಾಗಿ ಸಂಚಾರ ದಟ್ಟಣೆ ಉಂಟಾಗಿ, ಕೆಲವೊಮ್ಮೆ ತುರ್ತು ವಾಹನ ಪಾದಚಾರಿಗಳಿಗೆ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಬಸ್ ನಿಲ್ದಾಣ ಇದೇ ಸ್ಥಳದಲ್ಲಿ ಇರುವುದರಿಂದ ಸಂತೆ ದಿನ ಶಾಲಾ ಮಕ್ಕಳು ಸಾರ್ವಜನಿಕರು ಜೀವ ಕೈಲಿಡಿದು ಓಡಾಡುವಂತಾಗಿದೆ ಸಂತೆ ಮೈದಾನದ ಸುತ್ತಾಮುತ್ತಾ ಸಿ.ಸಿ ಟಿವಿ ಕ್ಯಮೆರಾ ಅಳವಡಿಕೆ ಇಲ್ಲದ ಕಾರಣಕ್ಕೆ ಪ್ರತಿವಾರ ಕಳ್ಳತನ ಪ್ರಕರಣ ವರದಿಯಾಗುತ್ತಿವೆ. ಸಂತೆ ಪಕ್ಕದಲ್ಲೆ ಸುವರ್ಣಮುಖಿ ನದಿ ಹರಿಯುತ್ತದೆ. ತ್ಯಾಜ್ಯವನ್ನು ನದಿಗೆ ಸುರಿಯಲಾಗುತ್ತಿದೆ. ಇದರಿಂದ ಇಲ್ಲಿನ ಪರಿಸರ ಹಾಳಾಗುತ್ತಿದೆ. ಇಲ್ಲಿರುವ ಚರಂಡಿಗಳು ತ್ಯಾಜ್ಯ ತುಂಬಿ ದುರ್ನಾತ ಬೀರುತ್ತಿವೆ. ಸಂತೆ ಮೈದಾನದಲ್ಲಿ ಪ್ರತಿ ಅಂಗಡಿಗಳಿಂದ ಪ್ರತಿವಾರ ಸುಂಕ ವಸೂಲಿ ಮಾಡಲಾಗುತ್ತದೆ. ಆದರೂ ಅಲ್ಲಿನ ವ್ಯಾಪಾರಿಗಳಿಗೆ ಸೌಲಭ್ಯ ಒದಗಿಸಿಲ್ಲ.

ದಿನ ನಿತ್ಯ ಹೂ ಹಣ್ಣು, ತರಕಾರಿ ಮಾರಾಟಗಾರರಿಗೆ ಸರಿಯಾದ ವ್ಯವಸ್ಥೆ ಕಲ್ಪಿಸದೇ ಅವರು ರಸ್ತೆ ಬದಿಯಲ್ಲೆ ವ್ಯಾಪಾರ ಮಾಡುವ ಸ್ಥಿತಿ ಇದೆ. ಇವರಿಂದಲೂ ದಿನ ನಿತ್ಯ ನೂರಾರು ರೂಪಾಯಿ ಸುಂಕ ವಸೂಲಿ ಮಾಡುತ್ತಾರಾದರೂ ಸೂಕ್ತ ಸ್ಥಳ ಒದಗಿಸಿಲ್ಲ. ಇದರಿಂದ ವಾಹನ ಓಡಾಟ ಸೇರಿದಂತೆ ಪಾದಚಾರಿಗಳಿಗೆ ಸಮಸ್ಯೆ ಎದುರಾಗಿದೆ.


ಉದಯವಾಹಿನಿ ಚಿತ್ರ

**ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ**

> **ದಿನನಿತ್ಯ ವ್ಯಾಪಾರಿಗಳಿಂದ ನೂರಾರು ರೂಪಾಯಿ ಸುಂಕ ವಸೂಲಿ ಮಾಡುತ್ತಾರೆ. ಆದರೆ ಯಾವುದೇ ಸೌಲಭ್ಯ ಒದಗಿಸಿಲ್ಲ. ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುತ್ತೇನೆ. ಅದಕ್ಕೂ ಸುಂಕ ವಸೂಲಿ ಮಾಡುತ್ತಾರೆ -ಬಖಾರ್ ಹೊಳವನಹಳ್ಳಿ**

> **ಸಂತೆ ಮೈದಾನದಲ್ಲಿ ಕುಡಿಯುವ ನೀರಿಲ್ಲ ಶೌಚಾಲಯವಂತೂ ಕೇಳೋ ಹಾಗೆ ಇಲ್ಲ. ಬಯಲು ಶೌಚವೇ ಗತಿಯಾಗಿದೆ. ಸಂತೆಗೆ ಬರುವ ಹೆಣ್ಣು ಮಕ್ಕಳ ಪಾಡು ಹೇಳತೀರದು**
> **-ಗೋವಿಂದರಾಜು ವ್ಯಾಪಾರಿ**

## ಮಿನಿ ನ್ಯೂಸ್

### ತಾಲ್ಲೂಕಿನ ಬೆಳಗುಂಬ ವಿಎಸ್‌ಎಸ್‌ಎನ್ ಜೆಡಿಎಸ್ ತೆಕ್ಕೆಗೆ

• **ಉದಯವಾಹಿನಿ, ಮಾಗಡಿ**

ತಾಲ್ಲೂಕಿನ ಬೆಳಗುಂಬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರು ಮೇಲುಗೈ ಸಾಧಿಸಿದ್ದಾರೆ. ಬೆಳಗುಂಬ ಸರ್ಕಾರಿ ಶಾಲಾ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 11 ನಿರ್ದೇಶಕರ ಸ್ಥಾನದಲ್ಲಿ ಜೆಡಿಎಸ್ ಬೆಂಬಲಿತ 9 ನಿರ್ದೇಶಕರು ವಿಜೇತರಾಗಿದ್ದಾರೆ.
ನೂತನ ನಿರ್ದೇಶಕರು: ಹೊಸಹಳ್ಳಿ ಎಚ್.ಎಂ.ರಂಗನಾಥ್ (ರಂಗಣಿ), ನರಸೇಗೌಡ, ಬಿ.ಎಸ್.ಮಂಜುನಾಥ್, ಬಿ.ರಾಜಣ್ಣ, ಗೌರಮ್ಮ ಸೂರಪ್ಪ, ಬಿ.ವಿ.ಗಂಗನರಸಿಂಹಯ್ಯ, ರೇಣುಕಯ್ಯ, ಬಿ.ಎಸ್.ಚಂದ್ರಶೇಖರ, ಪುಷ್ಪ, ಗೋಪಾಲ್ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಉಮೇಶ್ ತಿಳಿಸಿದ್ದಾರೆ. ಜೆಡಿಎಸ್ ಬೆಂಬಲಿತ ನಿರ್ದೇಶಕರು ಆಯ್ಕೆಯಾಗುತ್ತಿದ್ದಂತೆ ಪಕ್ಷದ ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಜೊತೆಗೆ ಕಲ್ಯಾಗೇಟ್ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ಈ ವೇಳೆ ಜೆಡಿಎಸ್ ಮುಖಂಡರಾದ ಕೋಟಪ್ಪ, ಹೊನ್ನಪ್ಪ, ಸೂರಪ್ಪ, ನಾಗಣ್ಣ, ವಿಜಯಕುಮಾರ್, ದಂಡಿಗೆಪುರ ಕುಮಾರ್, ಭರತ್, ತಗ್ಗಿಕುಪ್ಪೆ ಪಂಚೆ ರಾಮಣ್ಣ, ಗೌಡ್ರುಪಾಳ್ಯ ಶಿವರಾಂ. ಮಂಜುನಾಥ್, ವಿಶ್ವನಾಥ್ ಸೇರಿದಂತೆ ಇತರರು ಭಾಗವಹಿಸಿದ್ದರು.

### ಗೌರಿಬಿದನೂರು: ಡಕಾಯಿತಿಗೆ ಹೊಂಚು ಹಾಕುತ್ತಿದ್ದವರ ಬಂಧನ

• **ಉದಯವಾಹಿನಿ, ಗೌರಿಬಿದನೂರು**


ಚಿಕ್ಕಕುರುಗೋಡು ಗ್ರಾಮದ ಕಡೆ ಗ್ರಾಮಾಂತರ ಪೊಲೀಸರು ಜುಲೈ 19ರ ರಾತ್ರಿ ಡಕಾಯಿತಿಗೆ ಹೊಂಚು ಹಾಕುತ್ತಿದ್ದವರನ್ನು ಬಂಧಿಸಿದ್ದಾರೆ. ರಾಜಲಕ್ಷ್ಮಿ ದೇವಸ್ಥಾನಕ್ಕೆ ಹೋಗುವ ಆರ್ಚ್ ಬಳಿ 7 ಜನರು ಮಾರಕ ಆಯುಧ ಹಿಡಿದು ರಸ್ತೆಯಲ್ಲಿ ಬರುವ ವಾಹನ ಮತ್ತು ಜನರನ್ನು ಅಡ್ಡಗಟ್ಟಿ ಹೆದರಿಸಿ ಅವರ ಬಳಿ ಇರುವ ಬೆಲೆಬಾಳುವ ವಸ್ತುಗಳನ್ನು ಕಿತ್ತುಕೊಳ್ಳಲು ಹೊಂಚು ಹಾಕುತ್ತಿದ್ದ ಸಂದೀಪ (26), ಉಮೇಶ (24), ಕುಮಾರ (28), ಗಣೇಶ್ ಸಿ.ಎನ್ (24), ರಂಜಿತ್ ಕುಮಾರ್ (30), ಗೋಪಿನಾಥ, ಸಿ.ಎನ್ ಸುರೇಶ (22) ರನ್ನು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಆರೋಪಿತರು ಚಿಕ್ಕಕುರುಗೋಡು ಗ್ರಾಮದವರಾಗಿದ್ದಾರೆ.

### ಸಹಕಾರಿ ಉಪ ನಿಬಂಧಕ ಸಣ್ಣಪ್ಪಯ್ಯ FDA ರಾಘವೇಂದ್ರ ಲೋಕಾಯುಕ್ತ ಬಲೆಗೆ

• **ಉದಯವಾಹಿನಿ, ಮಧುಗಿರಿ**

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯಲ್ಲಿ ರೂ.20 ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದ ಸಹಕಾರ ಸಂಘಗಳ ಉಪ ನಿಬಂಧಕ ಸಣ್ಣಪ್ಪಯ್ಯ, ಪ್ರಥಮ ದರ್ಜೆ ಸಹಾಯಕ ರಾಘವೇಂದ್ರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಶಿರಾ ತಾಲ್ಲೂಕಿನ ಎಲೆಯೂರು ಗ್ರಾಮದ ಮೀನುಗಾರಿಕೆ ಸಹಕಾರ ಸಂಘದ ಖಾತೆ ಬ್ಲಾಕ್ ಮಾಡಿದ್ದು, ಈ ಖಾತೆ ಮತ್ತೆ ಪ್ರಾರಂಭಿಸಲು ರೂ.20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮೀನುಗಾರಿಕೆ ಸಂಘದ ಪದಾಧಿಕಾರಿ ರವೀಶ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ನಿಬಂಧಕರ ಕಚೇರಿಯಲ್ಲಿ ಹಣ ಪಡೆಯುತ್ತಿದ್ದಾಗ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಹಣದ ಸಮೇತ ಇಬ್ಬರನ್ನು ಬಂಧಿಸಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಸಂತೋಷ್, ಇನ್‌ಸ್ಪೆಕ್ಟರ್‌ಗಳಾದ ರಾಜು, ಸಲೀಂ, ಸುರೇಶ್, ಶಿವರುದ್ರಪ್ಪ ಅವರ ತಂಡ ಕಾರ್ಯಾಚರಣೆ ನಡೆಸಿತ್ತು.

### ಒಳ ಮೀಸಲಾತಿ ಸಮೀಕ್ಷೆ: ರಾಮನಗರ ಜಿಲ್ಲೆಯಲ್ಲಿದ್ದಾರೆ 1.98 ಲಕ್ಷ ಪರಿಶಿಷ್ಟರು


ಉದಯವಾಹಿನಿ ಚಿತ್ರ

• **ಉದಯವಾಹಿನಿ, ರಾಮನಗರ**

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ 54,475 ಕುಟುಂಬಗಳಿದ್ದು, ಒಟ್ಟು 1,98, 632 ಸದಸ್ಯರಿದ್ದಾರೆ. ಪರಿಶಿಷ್ಟರಿಗೆ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ರಾಜ್ಯ ಸರ್ಕಾರ ನಿಯೋಜಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗ ನಡೆಸಿರುವ 'ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆ'ಯಲ್ಲಿ ಈ ಅಂಶ ಗೊತ್ತಾಗಿದೆ. ಆಯೋಗವು ಮೇ 5ರಿಂದ ಜೂನ್ 30ರವರೆಗೆ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿರುವ ಪರಿಶಿಷ್ಟ ಜಾತಿಯವರ ಸಮೀಕ್ಷೆಯನ್ನು ಕೈಗೊಂಡಿತ್ತು. ಶಾಲಾ ಶಿಕ್ಷಕರಿಂದ ಮನೆ ಭೇಟಿ ಮೂಲಕ, ನಾಗರೀಕ ಸೇವಾ ಕೇಂದ್ರಗಳಾದ ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳು, ಬಾಪೂಜಿ ಸೇವಾ ಕೇಂದ್ರ ಹಾಗೂ ಆನ್ ಲೈನ್‌ನಲ್ಲಿ ಸ್ವಯಂ ಘೋಷಣೆ ಮೂಲಕವೂ ನಡೆದಿದ್ದ ಸಮೀಕ್ಷೆಯಲ್ಲಿ ಜಿಲ್ಲೆಯ ಶೇ 92ರಷ್ಟು ಪರಿಶಿಷ್ಟರು ಭಾಗಿಯಾಗಿದ್ದಾರೆ.
**ಕನಕಪುರದಲ್ಲೇ ಹೆಚ್ಚು:** ಸಮೀಕ್ಷೆ ಪ್ರಕಾರ ಕನಕಪುರ ಕ್ಷೇತ್ರದಲ್ಲಿ ಪರಿಶಿಷ್ಟ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ತಾಲ್ಲೂಕಿನಲ್ಲಿ 14,276 ಪರಿಶಿಷ್ಟರ ಕುಟುಂಬಗಳಿದ್ದು ಒಟ್ಟು 52,043 ಸದಸ್ಯರಿದ್ದಾರೆ. ಎರಡನೇ ಸ್ಥಾನದಲ್ಲಿರುವ ಮಾಗಡಿಯಲ್ಲಿ 13,836 ಕುಟುಂಬಗಳಿದ್ದು 50,419 ಜನರಿದ್ದಾರೆ. ಮೂರನೇ ಸ್ಥಾನದಲ್ಲಿರುವ ರಾಮನಗರದಲ್ಲಿ 13,624 ಕುಟುಂಬಗಳಿದ್ದು, 49,114 ಜನರಿದ್ದಾರೆ. ಕಡೆಯ ಚನ್ನಪಟ್ಟಣ ಕ್ಷೇತ್ರದಲ್ಲಿ 12,739 ಪರಿಶಿಷ್ಟರ ಕುಟುಂಬಗಳಿದ್ದು ಒಟ್ಟು 47,326 ಸದಸ್ಯರಿದ್ದಾರೆ. ಸಮೀಕ್ಷೆಯಲ್ಲಿ ಜಿಲ್ಲೆಯಲ್ಲಿರುವ ಸಮುದಾಯದ ಶೇ 92ರಷ್ಟು ಮಂದಿ ಭಾಗವಹಿಸಿದ್ದಾರೆ. ಜೂನ್ 30ರವರೆಗೆ ಸಮೀಕ್ಷೆ ನಡೆದಿದ್ದು, 27ರವರೆಗಿನ ಮಾಹಿತಿ ಮಾತ್ರ ನಮಗೆ ಲಭ್ಯವಾಗಿದೆ. ಉಳಿದ ಮೂರು ದಿನದ ಮಾಹಿತಿ ಸಿಕ್ಕಿಲ್ಲ. ಅಂತಿಮ ವರದಿಯಲ್ಲಿ ಅದರ ಮಾಹಿತಿ ಸಿಗಲಿದ್ದು, ಆಗ ಈ ಅಂಕಿಅಂಶದಲ್ಲಿ ಸ್ವಲ್ಪ ಏರುಪೇರಾಗಲಿದೆ' ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಎಂ.ವಿ. ಶಿವಕುಮಾರ್ ತಿಳಿಸಿದರು.

ಅಂತರಾಳದಿಂದ...
EDITORIAL

# ಐಪಿಎಲ್ ವಿಜಯೋತ್ಸವದಲ್ಲಿನ
## ದುರಂತ: ಹೊಣೆ ನುಣುಚಿಕೊಳ್ಳುವುದು ಸಲ್ಲದು

ಆಯೋಗದ ವರದಿಯಲ್ಲಿ, ದುರ್ಘಟನೆಯ ಹೊಣೆಗಾರರನ್ನಾಗಿ 'ಆರ್‌ಸಿಬಿ' ಆಡಳಿತ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ), ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್‌ಲಿ. ಹಾಗೂ ಆಗ ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಗುರ್ತಿಸಲಾಗಿದೆ. ಕಾಲ್ತುಳಿತದ ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ವರದಿ ಸಲ್ಲಿಸಿರುವ ಸರ್ಕಾರ, ಸಂಘಟಕರ ಸೇವಕರಂತೆ ಪೊಲೀಸರು ವರ್ತಿಸಿದ್ದಾರೆ ಎಂದು ಕಟುವಾಗಿ ಹೇಳಿದೆ. ತಪ್ಪಿತಸ್ಥರ ಸ್ಥಾನದಲ್ಲಿ ಪೊಲೀಸರನ್ನು ಏಕಪಕ್ಷೀಯವಾಗಿ ನಿಲ್ಲಿಸುವುದು ಎಷ್ಟುಸರಿ ಹಾಗೂ ಇಂಥ ಧೋರಣೆಯಿಂದ ಅವರ ಆತ್ಮವಿಶ್ವಾಸ ಮತ್ತು ನೈತಿಕತೆಯನ್ನು ಕುಗ್ಗಿಸಿದಂತೆ ಆಗುವುದಿಲ್ಲವೇ ಎನ್ನುವ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕಾಗಿದೆ. ದುರಂತದ ಹೊಣೆಯನ್ನು ಪೊಲೀಸರ ತಲೆಗೆ ಕಟ್ಟಿ ನುಣುಚಿಕೊಳ್ಳುವ ಬದಲಾಗಿ, ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಆಗಿರುವ ಸಾಂಸ್ಥಿಕ ಲೋಪ ಹಾಗೂ ನಿರ್ಲಕ್ಷ್ಯದ ಫಲಿತಾಂಶದ ರೂಪದಲ್ಲಿ ಸಂಭವಿಸಿದ ದುರ್ಘಟನೆಯನ್ನು ಗುರ್ತಿಸಬೇಕಾಗಿದೆ. ವಿಜಯೋತ್ಸವದಂಥ ಕಾರ್ಯಕ್ರಮವನ್ನು ಅಯೋಜಿಸಲು ಅಗತ್ಯವಾಗಿದ್ದ ಪೊಲೀಸರ ಕಡ್ಡಾಯ ಅನುಮತಿಯನ್ನು ಪಡೆಯದಿರುವ ಆಯೋಜಕರು, ಸಾರ್ವಜನಿಕ ಹಿತವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಲಕ್ಷಾಂತರ ಜನ ಸೇರುವ ನಿರೀಕ್ಷೆಯಿದ್ದ ಬೃಹತ್ ಕಾರ್ಯಕ್ರಮವೊಂದನ್ನು ಪೊಲೀಸ್ ಅನುಮತಿ ಇಲ್ಲದೆ ನಡೆಸಲು ಮುಂದಾಗುವುದು ಬರೀ ನಿರ್ಲಕ್ಷ್ಯ ಮಾತ್ರವಲ್ಲ, ಉದ್ಧಟತನವೂ ಹೌದು. ಅನುಮತಿ ಪಡೆಯದೆಯೇ ಭಾರೀ ಜನಸ್ತೋಮ ಸೇರುವ ಕಾರ್ಯಕ್ರಮವೊಂದರ ಆಯೋಜನೆಗೆ ಸಿದ್ಧತೆ ನಡೆಯುತ್ತಿದ್ದ ಸಂದರ್ಭದಲ್ಲಾದರೂ, ಮ್ಯಾಜಿಸ್ಟ್ರೇಟರು ತಮ್ಮ ಅಧಿಕಾರವನ್ನು ಬಳಸಿ ಜನ ಸೇರುವುದನ್ನು ನಿರ್ಬಂಧಿಸಿ ನಿಷೇಧಾಜ್ಞೆ ಜಾರಿ ಮಾಡಬಹುದಾಗಿತ್ತು: ನಿರ್ಣಾಯಕ ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ವಿಪತ್ತನ್ನು ತಪ್ಪಿಸುವ ಅವಕಾಶವೂ ಪರಿಸ್ಥಿತಿ ಹತೋಟಿ ತಪ್ಪುವಲ್ಲಿ ರಾಜಕಾರಣದ ಹಸ್ತಕ್ಷೇಪವೂ ಸ್ಪಷ್ಟವಾಗಿದೆ. ಐಪಿಎಲ್ ಆಟಗಾರರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋಗಿದ್ದ ಡಿ.ಕೆ. ಶಿವಕುಮಾರ್ ಅವರು, ಆರ್‌ಸಿಬಿ ಧ್ವಜವನ್ನು ಹಿಡಿದುಕೊಂಡು ಸಂಭ್ರಮಿಸಿದ್ದರು. ವಿಧಾನಸೌಧದ ಆವರಣದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಸೇರಿದಂತೆ ಇಡೀ ಆಡಳಿತಾಂಗವೇ ಹಾಜರಿತ್ತು.

**ಐಪಿಎಲ್' ಕ್ರಿಕೆಟ್ ಪಂದ್ಯಾವಳಿಯಲ್ಲಿ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' (ಆರ್‌ಸಿಬಿ) ತಂಡ ಸಾಧಿಸಿದ ಗೆಲುವನ್ನು ಸಂಭ್ರಮಿಸಲು ನಡೆದ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಹನ್ನೊಂದು ಜನ ಸಾವಿಗೀಡಾಗಿದ್ದರು. ಜೂನ್ 4ರಂದು ಸಂಭವಿಸಿದ ಆ ದುರ್ಘಟನೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ನ ನೇತೃತ್ವದ ವಿಚಾರಣಾ ಆಯೋಗ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ.**

ಹೀಗೆ ವಿಜಯೋತ್ಸವದ ಭಾಗವಾಗಿ ಗುರ್ತಿಸಿಕೊಂಡ ಸರ್ಕಾರ. ದುರ್ಘಟನೆ ಸಂಭವಿಸಿದ ನಂತರ ಅಂತರ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಹಾಗೂ ಅನಾಹುತದ ಸಂಪೂರ್ಣ ಹೊಣೆಗಾರಿಕೆಯನ್ನು ಪೊಲೀಸರ ಹೆಗಲಿಗೇರಿಸಿದೆ. ಜವಾಬ್ದಾರಿಯಿಂದ ನುಣುಚಿ ಕೊಳ್ಳುವ ಕಾರ್ಯತಂತ್ರದ ಭಾಗವಾಗಿಯೇ, ಸರ್ಕಾರದ ವರದಿ ಹೈಕೋರ್ಟ್‌ಗೆ ಸಲ್ಲಿಕೆಯಾದ ದಿನವೇ ಆಯೋಗದ ವರದಿಯ ಕೆಲವು ಭಾಗಗಳು ಮಾಧ್ಯಮಗಳಿಗೆ ಬಿಡುಗಡೆಯಾದುದನ್ನು ಗಮನಿಸಬೇಕಾಗಿದೆ. ಪೊಲೀಸರ ಮೇಲಿನ ರಾಜಕೀಯ ಒತ್ತಡವು ದುರದೃಷ್ಟಕರ ವಾಸ್ತವವಾಗಿದೆ. ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಮೌಖಿಕ ಆದೇಶಗಳನ್ನು ಅನುಸರಿಸಿ ಪೊಲೀಸರು ಕಾರ್ಯ ನಿರ್ವಹಿಸಬಾರದು ಎನ್ನುವುದಕ್ಕೆ ಐಪಿಎಲ್ ವಿಜಯೋತ್ಸವ ಸಂದರ್ಭದಲ್ಲಿ ಘಟಿಸಿದ ದುರಂತ ಪೊಲೀಸ್ ಇಲಾಖೆಗೆ ಪಾಠ ಆಗಬೇಕಾಗಿದೆ. ಕಾಲ್ತುಳಿತದಿಂದ ಸಂಭವಿಸಿದ ಸಾವುಗಳ ಹೊಣೆಗಾರಿಕೆ ಸಾಮೂಹಿಕವಾದುದು. ಸಂಘಟಕರ ನಿರ್ಲಕ್ಷ್ಯ, ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ತೀರ್ಮಾನಗಳಲ್ಲಿ ಪೊಲೀಸರು ಎಸಗಿದ ಲೋಪಗಳು ಹಾಗೂ ರಾಜಕೀಯ ಹಸ್ತಕ್ಷೇಪ, ಇವೆಲ್ಲವೂ ಕಾಲ್ತುಳಿತದ ಸಾವು– ನೋವುಗಳಿಗೆ ಕಾರಣವಾಗಿವೆ. ಮುಂದೆ, ಇಂಥ ಕಾರ್ಯಕ್ರಮಗಳು ನಡೆಯುವಾಗ ಸಾರ್ವಜನಿಕರ ಹಿತಾಸಕ್ತಿ ಮತ್ತು ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಎಲ್ಲರೂ ಪ್ರದರ್ಶಿಸಬೇಕಾಗಿದೆ.



# ವಯಸ್ಸಾದ ನಂತರವೂ ಆರೋಗ್ಯದಿಂದಿರಬೇಕಾದ್ರೆ..!

ವಯಸ್ಸಾದಂತೆ ಪ್ರತಿಯೊಬ್ಬರ ಮೂಳೆಗಳು ದುರ್ಬಲವಾಗಲಾರಂಭಿಸುತ್ತದೆ. ದೇಹದಲ್ಲಿ ವಿಟಮಿನ್, ಖನಿಜಗಳ ಕೊರತೆಯಾಗಲಾರಂಭಿಸುತ್ತದೆ. ಈ ಸಮಸ್ಯೆಯನ್ನು ತಡೆಯಬೇಕಾದರೆ ಈ ಎಲ್ಲಾ ಪೋಷಕಾಂಶಗಳನ್ನು ಡಯೆಟ್‌ನಲ್ಲಿ ಅಳವಡಿಸುವುದು ಉತ್ತಮ. ನಾವು ಯಾವ ರೀತಿಯ ಆಹಾರ ಸೇವಿಸುತ್ತೇವೆ, ಯಾವ ರೀತಿಯ ಪೋಷಕಾಂಶಗಳು ಸೇವಿಸುತ್ತೇವೆ ಎನ್ನುವುದು ನಮ್ಮ ಮುಂದಿನ ಜೀವನಕ್ಕೂ ಸಹಕಾರಿಯಾಗಿದೆ. ವೃದ್ಧಾಪ್ಯದಲ್ಲಿ ನೀವು ಆರೋಗ್ಯವಾಗಿರಲು ಬಯಸಿದರೆ, ಇವು ಅಗತ್ಯವಾದ ಜೀವಸತ್ವಗಳು ಮತ್ತು ಖನಿಜಗಳನ್ನು ತೆಗೆದುಕೊಳ್ಳುವುದು ಮುಖ್ಯ. ವಯಸ್ಸಾದಂತೆ ನಮ್ಮ ದೇಹದ ಅಗತ್ಯತೆಗಳು ಬದಲಾಗುತ್ತವೆ, ಆದ್ದರಿಂದ ಹಿರಿಯ ವಯಸ್ಕರು ಕೆಲವು ಪೋಷಕಾಂಶಗಳ ಮೇಲೆ ಕೇಂದ್ರೀಕರಿಸುವುದು ಮುಖ್ಯವಾಗುತ್ತದೆ.

**ವಿಟಮಿನ್‌ಗಳು ಏಕೆ ಅಗತ್ಯ:** ವಿಟಮಿನ್‌ಗಳು ದೇಹದ ಬೆಳವಣಿಗೆ ಮತ್ತು ಸರಿಯಾದ ಕಾರ್ಯನಿರ್ವಹಣೆಗೆ ಸಹಾಯ ಮಾಡುತ್ತವೆ. ವಿಟಮಿನ್ ಎ, ಸಿ, ಡಿ, ಇ, ಕೆ ನಂತಹ 13 ಅಗತ್ಯ ಜೀವಸತ್ವಗಳು, ಬಿ–ಗುಂಪಿನ ಎಂಟು ಜೀವಸತ್ವಗಳು ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತವೆ. ಇದರಲ್ಲಿ ಸೋಂಕುಗಳಿಂದ ರಕ್ಷಿಸುವುದು, ನರಗಳನ್ನು ಆರೋಗ್ಯಕರವಾಗಿಡುವುದು, ಆಹಾರ ಹೀರಿಕೊಳ್ಳುವಿಕೆ ಅಥವಾ ರಕ್ತ ಹೆಪ್ಪುಗಟ್ಟುವಿಕೆಗೆ ಸಹಾಯ ಮಾಡುವುತ್ತದೆ. ಸಮತೋಲಿತ ಆಹಾರ ಸೇವನೆಯು ಸಾಮಾನ್ಯವಾಗಿ ಇವುಗಳಲ್ಲಿ ಸಾಕಷ್ಟನ್ನು ಒದಗಿಸುತ್ತದೆ.


**ಖನಿಜಗಳು ದೇಹಕ್ಕೆ ಎಷ್ಟು ಮುಖ್ಯ?:** ಖನಿಜಗಳು ದೇಹವು ಸರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ಖನಿಜಗಳು ಭೂಮಿಯ ಮೇಲೆ ಮತ್ತು ನಮ್ಮ ಆಹಾರದಲ್ಲಿ ಕಂಡುಬರುವ ಅಂಶಗಳಾಗಿದ್ದು, ದೇಹವು ಕಾರ್ಯನಿರ್ವಹಿಸಲು ಅಗತ್ಯವಾಗಿದೆ. ಅಯೋಡಿನ್ ಮತ್ತು ಫ್ಲೋರೈಡ್ ನಂತಹ ಕೆಲವು ಬಹಳ ಕಡಿಮೆ ಪ್ರಮಾಣದಲ್ಲಿ ಅಗತ್ಯವಾಗಿರುತ್ತದೆ, ಆದರೆ ಕ್ಯಾಲ್ಸಿಯಂ, ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್‌ನಂತಹ ಇತರ ಖನಿಜಗಳು ಹೆಚ್ಚು ಅಗತ್ಯವಾಗಿರುತ್ತದೆ.

**ಈ ವಿಷಯಗಳನ್ನು ನೆನಪಿನಲ್ಲಿಡಿ:** ವಯಸ್ಸಾದವರು ತಮ್ಮ ಆಹಾರದ ಬಗ್ಗೆ ವಿಶೇಷ ಗಮನ ಹರಿಸಬೇಕು. ಏಕೆಂದರೆ ವಯಸ್ಸಾದಂತೆ ಪೋಷಕಾಂಶಗಳ ಹೀರಿಕೊಳ್ಳುವಿಕೆ ಕಡಿಮೆಯಾಗುತ್ತದೆ. ಅಗತ್ಯವಿದ್ದರೆ ವೈದ್ಯರು ಅಥವಾ ಆಹಾರ ತಜ್ಞರ ಸಲಹೆಯ ಮೇರೆಗೆ ಪೂರಕಗಳನ್ನು ತೆಗೆದುಕೊಳ್ಳುವುದು ಪ್ರಯೋಜನಕಾರಿಯಾಗಿದೆ. ವೃದ್ಧಾಪ್ಯದಲ್ಲಿ ಆರೋಗ್ಯಕರವಾಗಿ, ಬಲಶಾಲಿಯಾಗಿರಲು ಸಹಾಯ ಮಾಡುವ ಕೆಲವೊಂದು ಪ್ರಮುಖ ಜೀವಸತ್ವಗಳು ಮತ್ತು ಖನಿಜಗಳ ನಾವಿಲ್ಲಿ ತಿಳಿಯೋಣ.



**ಕ್ಯಾಲ್ಸಿಯಂ:** ಕ್ಯಾಲ್ಸಿಯಂ ಮೂಳೆಗಳು ಮತ್ತು ಹಲ್ಲುಗಳ ಪ್ರಮುಖ ಅಂಶವಾಗಿದೆ. ವಯಸ್ಸಾದಂತೆ ಆಸ್ಟಿಯೊಪೊರೋಸಿಸ್ ಅಪಾಯ ಹೆಚ್ಚಾಗುತ್ತದೆ. ಆದ್ದರಿಂದ ಮೂಳೆ ಸಾಂದ್ರತೆಯನ್ನು ಕಾಪಾಡಿಕೊಳ್ಳಲು ಸಾಕಷ್ಟು ಕ್ಯಾಲ್ಸಿಯಂ ಸೇವನೆ ಮುಖ್ಯ. ಹಾಲು, ಮೊಸರು, ಚೀಸ್, ಸೊಪ್ಪು ತರಕಾರಿಗಳು, ಬ್ರೊಕೊಲಿ ಮತ್ತು ಬಲವರ್ಧಿತ ಆಹಾರಗಳಿಂದ ಈ ಅಗತ್ಯವನ್ನು ಪೂರೈಸಬಹುದು.

**ಒಮೆಗಾ–3 ಕೊಬ್ಬಿನಾಮ್ಲಗಳು:** ಒಮೆಗಾ–3 ಕೊಬ್ಬಿನಾಮ್ಲಗಳು ನಿಮ್ಮ ದೇಹಕ್ಕೆ ಅಗತ್ಯವಿರುವ ಅಗತ್ಯ ಕೊಬ್ಬುಗಳಾಗಿದ್ದು, ನಿಮ್ಮ ಹೃದಯ ಮತ್ತು ಮೆದುಳಿನ ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿಯಾಗಿದೆ. ಅವು ದೇಹದಲ್ಲಿ ಉರಿಯೂತವನ್ನು ಕಡಿಮೆ ಮಾಡಲು, ಹೃದಯ ಕಾಯಿಲೆಯ ಅಪಾಯವನ್ನು ಕಡಿಮೆ ಮಾಡಲು, ಅರಿವಿನ ಕುಸಿತ ಮತ್ತು ಆಲ್ಝೈಮರ್‌ನಂತಹ ಕಾಯಿಲೆಗಳಿಂದ ರಕ್ಷಿಸಲು ಸಹಾಯ ಮಾಡುತ್ತವೆ. ಕೊಬ್ಬಿನ ಮೀನುಗಳು ಒಮೆಗಾ–3 ನ ಸಮೃದ್ಧ ಮೂಲಗಳಾಗಿದ್ದು, ಇದರ ಜೊತೆಗೆ ಅಗಸೆ ಬೀಜಗಳು ಮತ್ತು ಚಿಯಾ ಬೀಜಗಳು ಸಹ ಒಮೆಗಾ–3 ಅನ್ನು ಒದಗಿಸುತ್ತವೆ.



**ವಿಟಮಿನ್ ಡಿ**

**ಮೂಳೆಗಳನ್ನು ಬಲವಾಗಿಡಲು ನಿರ್ಣಾಯಕವಾದ ಕ್ಯಾಲ್ಸಿಯಂ ಅನ್ನು ಹೀರಿಕೊಳ್ಳಲು ವಿಟಮಿನ್ ಡಿ ಸಹಾಯ ಮಾಡುತ್ತದೆ. ವಯಸ್ಸಾದಂತೆ, ವಿಟಮಿನ್ ಡಿ ಅನ್ನು ಸಂಶ್ಲೇಷಿಸುವ ದೇಹದ ಸಾಮರ್ಥ್ಯ ಕಡಿಮೆಯಾಗುತ್ತದೆ. ವಿಟಮಿನ್ ಡಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಸೂರ್ಯನ ಬೆಳಕು ಅದರ ಅತ್ಯುತ್ತಮ ನೈಸರ್ಗಿಕ ಮೂಲವಾಗಿದ್ದರೂ ಸಹ. ಇದರ ಜೊತೆಗೆ, ಇದು ಕೊಬ್ಬಿನ ಮೀನು, ಮೊಟ್ಟೆಯ ಹಳದಿ ಲೋಳೆ ಬಲವರ್ಧಿತ ಹಾಲು ಮತ್ತು ಧಾನ್ಯಗಳಲ್ಲಿಯೂ ಕಂಡುಬರುತ್ತದೆ**

**ಮೆಗ್ನೀಸಿಯಮ್:** ಸ್ನಾಯು ಮತ್ತು ನರಗಳ ಕಾರ್ಯ, ರಕ್ತದಲ್ಲಿನ ಸಕ್ಕರೆ ನಿಯಂತ್ರಣ, ರಕ್ತದೊತ್ತಡ ನಿಯಂತ್ರಣ ಮತ್ತು ಮೂಳೆಯ ಆರೋಗ್ಯ ಸೇರಿದಂತೆ ಮೆಗ್ನೀಸಿಯಮ್ 300 ಕ್ಕೂ ಹೆಚ್ಚು ದೇಹದ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಿದೆ. ಇದು ಶಕ್ತಿ ಉತ್ಪಾದನೆಯಲ್ಲಿಯೂ ಸಹಾಯ ಮಾಡುತ್ತದೆ. ನೀವು ಸೊಪ್ಪು ತರಕಾರಿಗಳು, ಕುಂಬಳಕಾಯಿ ಬೀಜಗಳು, ಚಿಯಾ ಬೀಜಗಳು, ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಸೇವಿಸಿ. ಇದರಿಂದ ಮೆಗ್ನೀಸಿಯಮ್ ಪಡೆಯುತ್ತೀರಿ.

**ವಿಟಮಿನ್ ಬಿ 12:** ವಿಟಮಿನ್ ಬಿ 12 ನರಗಳ ಕಾರ್ಯ, ಕೆಂಪು ರಕ್ತ ಕಣಗಳ ರಚನೆ ಮತ್ತು ಮೆದುಳಿನ ಆರೋಗ್ಯಕ್ಕೆ ಮುಖ್ಯವಾಗಿದೆ. ನೀವು ವಯಸ್ಸಾದಂತೆ, ದೇಹವು ಬಿ 12 ಅನ್ನು ಹೀರಿಕೊಳ್ಳುವುದು ಕಷ್ಟವಾಗುವುದರಿಂದ ಇದು ವಿಟಮಿನ್ ಬಿ 12 ಕೊರತೆಯ ಅಪಾಯವನ್ನು ಹೆಚ್ಚಿಸುತ್ತದೆ. ಮಾಂಸ, ಮೀನು, ಮೊಟ್ಟೆಗಳು ಮತ್ತು ಡೈರಿ ಉತ್ಪನ್ನಗಳಂತಹ ಪ್ರಾಣಿ ಆಧಾರಿತ ಆಹಾರಗಳಲ್ಲಿ ವಿಟಮಿನ್ ಬಿ 12 ಕಂಡುಬರುತ್ತದೆ.

# ಊಟದ ರುಚಿ ಹೆಚ್ಚಿಸುವ
## ಬೀಟ್ರೂಟ್ ಪಚಡಿ ಮಾಡಿ ನೋಡಿ!



ಊಟದ ಜೊತೆಗೆ ಪಲ್ಯ, ಚಟ್ನಿ ಇದ್ದರೆ ಊಟದ ರುಚಿ ಹೆಚ್ಚಿಸೋದು ಖಚಿತ. ಹೀಗಾಗಿ ಸಾಂಬಾರ್ ಜೊತೆಗೆ ಚಟ್ನಿ, ಇಲ್ಲವೆ ಯಾವುದಾದರು ಸೈಡ್ಸ್ ಸವಿಯುತ್ತೇವೆ. ಹಾಗೆ ಪಚಮಿ ಕೂಡ ಎಲ್ಲರಿಗೂ ಇಷ್ಟವಾಗುವ ರೆಸಿಪಿ. ಅದ್ರಲ್ಲೂ ಸೌತೆಕಾಯಿ ಬಳಸಿ ಮಾಡುವಂತಹ ಪಚಡಿ ಬಹಳ ರುಚಿಕರವಾಗಿರಲಿದೆ ನೀವು ಕೂಡ ಈ ಸೌತೆಕಾಯಿಯ ಪಚಡಿ ಮಾಡಿ ಸವಿದಿರುತ್ತೀರಿ. ನಾವಿಂದು ಸೌತೆಕಾಯಿ ಬದಲಿಗೆ ರುಚಿ ರುಚಿಯ ಬೀಟ್ರೂಟ್ ಪಚಡಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ. ಬೀಟ್ರೂಟ್ ಬಳಸಿ ಮಾಡುವ ಎಲ್ಲಾ ಖಾದ್ಯಗಳು ಅದ್ಭುತ ರುಚಿ ನೀಡಲಿವೆ.

ಊಟ ತಿಂಡಿಯೊಂದಿಗೆ ನಿಮಗೆ ರುಚಿಕರ ಸ್ವಾದ ನೀಡಲಿವೆ. ಅದರಲ್ಲೂ ಬೀಟ್ರೂಟ್ ಪಲ್ಯ ಎಲ್ಲರಿಗೂ ಇಷ್ಟವಾಗುವಂತಹ ಖಾದ್ಯ ಎನ್ನಬಹುದು. ಆದ್ರೆ ನಾವಿಂದು ರುಚಿ ರುಚಿಯಾಗಿ ಬೀಟ್ರೂಟ್ ಪಚಟಿ ಮಾಡುವುದು ಹೇಗೆ ನೋಡೋಣ. ಇದನ್ನು ನೀವು ಊಟದೊಂದಿಗೆ ಸವಿಯಲು ಬಹಳ ರುಚಿ ನೀಡಲಿದೆ. ಹಾಗೆ ತಿಂಡಿಯೊಂದಿಗೂ ಕೂಡ ರುಚಿ ದುಪ್ಪಟ್ಟಾಗಲಿದೆ. ಹಾಗಾದ್ರೆ ಈ ಬೀಟ್ರೂಟ್ ಪಚಡಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು? ಮಾಡುವುದು ಹೇಗೆ? ಎಷ್ಟು ಸಮಯ ಹಿಡಿಯಲಿದೆ ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ.

- **ಬೀಟ್ರೂಟ್ ಪಚಡಿ ಮಾಡಲು ಯಾವೆಲ್ಲಾ ಪದಾರ್ಥಗಳು ಬೇಕು?**
- **ಬೀಟ್ರೂಟ್**
- **ತೆಂಗಿನಕಾಯಿ**
- **ಹಸಿ ಮೆಣಸಿನಕಾಯಿ**
- **ಈರುಳ್ಳಿ**
- **ಜೀರಿಗೆ**
- **ಮೊಸರು**
- **ಕೊತ್ತಂಬರಿ ಸೊಪ್ಪು**
- **ಸಾಸಿವೆ**
- **ಇಂಗು**
- **ಉದ್ದಿನ ಬೇಳೆ**
- **ಒಣ ಮೆಣಸು**
- **ಕರಿಬೇವು**
- **ಅಡುಗೆ ಎಣ್ಣೆ**
- **ರುಚಿಗೆ ತಕ್ಕಷ್ಟು ಉಪ್ಪು**

**ಬೀಟ್ರೂಟ್ ಪಚಡಿ ಮಾಡುವುದು ಹೇಗೆ?**

ಮೊದಲಿ ಬೀಟ್ರೂಟ್ ಸಿಪ್ಪೆ ತೆಗೆದು ಅನ್ನು ಕ್ಯಾರೆಟ್‌ನಂತೆ ತುರಿದು ಇಟ್ಟುಕೊಳ್ಳಿ.

ಈಗ ಒಲೆ ಮೇಲೆ ಒಂದು ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿಕೊಂಡು ಬಳಿಕ ತುರಿದುಕೊಂಡಿರುವ ಈ ಬೀಟ್ರೂಟ್ ಅನ್ನು ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿ. ಹಾಗೆ ಇದಕ್ಕೆ ಉಪ್ಪು ಹಾಕಿ 4 ನಿಮಿಷ ಬೇಯಿಸಿಕೊಳ್ಳಬೇಕು. ಈ ನಡುವೆ ಬೀಟ್ರೂಟ್ ಬೇಯಲು ಬಿಟ್ಟು ಒಂದು ಮಿಕ್ಸಿ ಜಾರ್‌ಗೆ ಅರ್ಧ ಕಪ್ ತೆಂಗಿನಕಾಯಿ, ಹಸಿ ಮೆಣಸು, ಈರುಳ್ಳಿ 1, ಜೀರಿಗೆ ಹಾಕಿ ನೀರು ಹಾಕದೆ ತರಿ ತರಿಯಾಗಿ ರುಬ್ಬಿಕೊಳ್ಳಬೇಕು.

ಈಗ ಈ ರುಬ್ಬಿದ ಮಿಶ್ರಣವನ್ನು ಬೆಂದಿರುವ ಬೀಟ್ರೂಟ್‌ಗೆ ಹಾಕಿ ಮಿಕ್ಸ್ ಮಾಡಿ. ನಂತರ ಇದನ್ನು 2 ರಿಂದ 3 ನಿಮಿಷ ಚೆನ್ನಾಗಿ ಬೇಯಿಸಿಕೊಳ್ಳಿ. ಈಗ ಒಲೆ ಆಫ್ ಮಾಡಿಕೊಂಡು ಅರ್ಧ ಕಪ್ ಗಟ್ಟಿ ಮೊಸರಿಗೆ ಸ್ವಲ್ಪವೇ ಸ್ವಲ್ಪ ನೀರು ಹಾಕಿಕೊಂಡು ಗಂಟುಗಳು ಇಲ್ಲದಂತೆ ಕಲಸಿಕೊಂಡು ಬೀಟ್ರೂಟ್‌ಗೆ ಹಾಕಿ ಸಣ್ಣದಾಗಿ ಹೆಚ್ಚಿದ ಕೊತ್ತಂಬರಿ ಸೊಪ್ಪು ಸಹ ಹಾಕಿ ಮಿಕ್ಸ್ ಮಾಡಿಕೊಳ್ಳಿ. ಈಗ ಒಂದು ಸಣ್ಣ ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿ ಸಾಸಿವೆ, ಜೀರಗೆ ಕಡಲೆ ಬೇಳೆ, ಉದ್ದಿನ ಬೇಳೆ, ಕರಿಬೇವು, ಒಣ ಮೆಣಸು ಹಾಕಿಕೊಂಡು ಒಂದು ಒಗ್ಗರಣೆ ರೆಡಿ ಮಾಡಿಕೊಂಡು ಪಚಡಿಗೆ ಹಾಕಿ ಒಮ್ಮೆ ಮಿಶ್ರಣ ಮಾಡಿ. ಇಷ್ಟಾದರೆ ನಿಮ್ಮ ಮುಂದೆ ರುಚಿ ರುಚಿಯ ಬೀಟ್ರೂಟ್ ಪಚಡಿ ರೆಡಿಯಾಗಲಿದೆ. ನೀವು ಕೂಡ ಮನೆಯಲ್ಲಿ ಇದನ್ನೊಮ್ಮೆ ಟ್ರೈ ಮಾಡಿ ನೋಡಿ. ಊಟ, ತಿಂಡಿಯ ಜೊತೆಗೆ ಇಂದು ಬಹಳ ರುಚಿ ನೀಡಲಿದೆ.

# ಕೀಲು ನೋವ್ರುಗೆ ಸಿಂಪಲ್ ಪರಿಹಾರ

ಮೊದಲೆಲ್ಲಾ ಮೊಣಕಾಲು ನೋವು 50 ರಿಂದ 60 ವರ್ಷ ವಯಸ್ಸಿನಲ್ಲಿ ಕಂಡುಬರುತ್ತಿತ್ತು, ಆದರೆ ಈಗ 20–30 ವರ್ಷ ವಯಸ್ಸಿನ ಯುವಕರಲ್ಲಿಯೂ ಈ ಸಮಸ್ಯೆ ಹೆಚ್ಚುತ್ತಿದೆ. ಇದನ್ನು ಪರಿಹರಿಸಲು ಇಲ್ಲಿದೆ ವೈದ್ಯರ ಟಿಪ್ಸ್. ಇತ್ತೀಚಿನ ದಿನಗಳಲ್ಲಿ ಮೊಣಕಾಲು ನೋವು ವೃದ್ಧರಲ್ಲಿ ಮಾತ್ರವಲ್ಲದೆ ಯುವಕರಲ್ಲೂ ಸಾಮಾನ್ಯವಾಗಿದೆ. ಅನೇಕ ಜನರು ಕೇವಲ 30 ವರ್ಷ ವಯಸ್ಸಿನಲ್ಲೇ ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸರಿಯಾದ ಜೀವನಶೈಲಿ ಮತ್ತು ವೈದ್ಯರ ಮಾರ್ಗದರ್ಶನವಿದ್ದರೆ ಈ ಸಮಸ್ಯೆಯನ್ನು ನಿವಾರಿಸಬಹುದು ಎಂದು ಡಾ. ಶ್ರೀರಾಮ್ ನೆನೆ ಅವರು ಹೇಳುತ್ತಾರೆ.

**ಮೊಣಕಾಲು ನೋವಿಗೆ ಕಾರಣಗಳು:** ಮೊಣಕಾಲು ನೋವಿಗೆ ಸಾಮಾನ್ಯ ಕಾರಣವೆಂದರೆ ಕಳಪೆ ಭಂಗಿ, ತೂಕ ಹೆಚ್ಚಾಗುವುದು, ದುರ್ಬಲ ಸ್ನಾಯುಗಳು ಮತ್ತು ಪೋಷಕಾಂಶಗಳ ಕೊರತೆ. ಮೊಣಕಾಲುಗಳು ದೇಹದ ತೂಕದ 80% ಅನ್ನು ಹೊರುತ್ತವೆ. ಕೇವಲ 1 ಕೆಜಿ ಹೆಚ್ಚುವರಿ ತೂಕವು ಮೊಣಕಾಲುಗಳ ಮೇಲೆ 4 ಕೆಜಿ ಒತ್ತಡವನ್ನು ಹೇರುತ್ತದೆ, ಇದು ಕೀಲುಗಳಿಗೆ ಹಾನಿ ಮಾಡುತ್ತದೆ ಎಂದು ಡಾ. ಶ್ರೀರಾಮ್ ನೆನೆ ಹೇಳುತ್ತಾರೆ.

**ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗೂ ಕಾರಣವಾಗಬಹುದು:** ಹೊಸ ಸಂಶೋಧನೆಯ ಪ್ರಕಾರ, ಭಾರತದಲ್ಲಿ ಸುಮಾರು 20% ಜನರು ಮೊಣಕಾಲು ನೋವಿನಿಂದ ಬಳಲುತ್ತಿದ್ದಾರೆ. ಈ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಿದೆ. ಸಮಯಕ್ಕೆ ಸರಿಯಾಗಿ ಕಾಳಜಿ ವಹಿಸದಿದ್ದರೆ, ಈ ನೋವು ಅಸ್ಥಿಸಂಧಿವಾತ ಅಥವಾ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗೆ ಕಾರಣವಾಗಬಹುದು.

**ಸುಲಭ ಸಲಹೆಗಳು:** ಡಾ. ಶ್ರೀರಾಮ್ ನೀನೆ ಇತ್ತೀಚೆಗೆ ಇನ್‌ಸ್ಟಾಗ್ರಾಮ್‌ನಲ್ಲಿ ಮೊಣಕಾಲಿನ ಆರೋಗ್ಯಕ್ಕಾಗಿ 6 ಸುಲಭ ಮತ್ತು ಪರಿಣಾಮಕಾರಿ ಸಲಹೆಗಳನ್ನು ಹಂಚಿಕೊಂಡಿದ್ದಾರೆ. ಸಲಹೆಗಳನ್ನು ಅನುಸರಿಸುವ ಮೂಲಕ, ನೀವು ನೋವಿನಿಂದ ಪರಿಹಾರ ಪಡೆಯಬಹುದು ಮತ್ತು ನಿಮ್ಮ ಮೊಣಕಾಲುಗಳನ್ನು ದೀರ್ಘಕಾಲದವರೆಗೆ ಬಲವಾಗಿಡಬಹುದು.

**ತೂಕ ಹೆಚ್ಚಳ:** ತೂಕ ಹೆಚ್ಚಾಗುವುದು ಮೊಣಕಾಲು ನೋವಿಗೆ ಪ್ರಮುಖ ಕಾರಣವಾಗಿದೆ. ನೀವು ಅಧಿಕ ತೂಕ ಹೊಂದಿದ್ದರೆ, ಅದನ್ನು ಕಡಿಮೆ ಮಾಡುವುದು ಮುಖ್ಯ. ತೂಕ ನಷ್ಟವು ಮೊಣಕಾಲುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಆರೋಗ್ಯಕರ ಆಹಾರ ಮತ್ತು ನಿಯಮಿತ ನಡಿಗೆಯೊಂದಿಗೆ ತೂಕವನ್ನು ನಿಯಂತ್ರಿಸಬಹುದು.

**ಸ್ಟ್ರೆಚಿಂಗ್ ವ್ಯಾಯಾಮಗಳು:** ಪ್ರತಿದಿನ 5–10 ನಿಮಿಷಗಳ ಸ್ಟ್ರೆಚಿಂಗ್ ಮೊಣಕಾಲುಗಳಿಗೆ ವರದಾನವಾಗಿದೆ. ಸ್ಟ್ಯಾಂಡಿಂಗ್ ಸ್ಕ್ವಾಡ್ ಸ್ಟ್ರೆಚ್, ಕ್ಯಾಲ್ಫ್ ಸ್ಟ್ರೆಚ್ ಹ್ಯಾಮ್ಸ್ಟ್ರಿಂಗ್ ಸ್ಟ್ರೆಚ್‌ನಂತಹ ವ್ಯಾಯಾಮಗಳು ಸ್ನಾಯುಗಳನ್ನು ಬಲಪಡಿಸುತ್ತವೆ ಮತ್ತು ನೋವನ್ನು ಕಡಿಮೆ ಮಾಡುತ್ತವೆ. ನೀವು ಬೆಳಿಗ್ಗೆ ಎದ್ದ ತಕ್ಷಣ 5 ನಿಮಿಷಗಳ ಸ್ಟ್ರೆಚಿಂಗ್ ಮಾಡಿ, ಇದು ಕೀಲುಗಳ ನಮ್ಯತೆಯನ್ನು ಹೆಚ್ಚಿಸುತ್ತದೆ ಎನ್ನುತ್ತಾರೆ ಡಾ. ನೀನೆ. **ಸೈಕ್ಲಿಂಗ್:** ಸೈಕ್ಲಿಂಗ್ ಮೊಣಕಾಲುಗಳಿಗೆ ಸುರಕ್ಷಿತ ವ್ಯಾಯಾಮ. ಇದು ಸೈನೋವಿಯಲ್ ದ್ರವ ಉತ್ಪಾದನೆಯನ್ನು ಹೆಚ್ಚಿಸುತ್ತದೆ, ಇದು ಕೀಲುಗಳ ನೈಸರ್ಗಿಕ ಲೂಬ್ರಿಕಂಟ್ ಆಗಿದೆ. ಕೀಲುಗಳ ಮೇಲಿನ ಸವೆತವನ್ನು ಕಡಿಮೆ ಮಾಡುತ್ತದೆ. ವಾರಕ್ಕೆ 2 ರಿಂದ 3 ಬಾರಿ 15 ರಿಂದ 20 ನಿಮಿಷಗಳ ಕಾಲ ಸೈಕ್ಲಿಂಗ್ ಮಾಡುವುದು ಉತ್ತಮ.



**ಒಂದೇ ಭಂಗಿಯಲ್ಲಿ ಕುಳಿತುಕೊಳ್ಳಬೇಡಿ:** ತಪ್ಪು ಭಂಗಿಯು ಮೊಣಕಾಲುಗಳ ಮೇಲೆ ಹೆಚ್ಚುವರಿ ಒತ್ತಡವನ್ನು ಬೀರುತ್ತದೆ. ದೀರ್ಘಕಾಲ ಒಂದೇ ಸ್ಥಳದಲ್ಲಿ ಕುಳಿತುಕೊಳ್ಳುವುದನ್ನು ಅಥವಾ ನಿಲ್ಲುವುದನ್ನು ತಪ್ಪಿಸಿ. ಪ್ರತಿ ಗಂಟೆಗೆ 2 ರಿಂದ 3 ನಿಮಿಷಗಳ ಕಾಲ ನಡೆಯಿರಿ, ನೇರವಾಗಿ ನಿಂತುಕೊಳ್ಳಿ ನಂತರ ಮತ್ತೆ ಕುಳಿತುಕೊಳ್ಳಿ ಎಂದು ಡಾ. ನೀನೆ ಹೇಳುತ್ತಾರೆ.

**ಗಾಯವಾಗಿದ್ದರೆ ಏನು ಮಾಡಬೇಕು:** ನಿಮಗೆ ಮೊಣಕಾಲಿನ ಗಾಯವಾಗಿದ್ದರೆ, ವಿಶ್ರಾಂತಿ, ಐಸ್, ಕಂಪ್ರೆಷನ್, ಎಲಿವೇಶನ್ ವಿಧಾನವನ್ನು ಅನುಸರಿಸಿ. ಇದು ಮೊಣಕಾಲಿನ ಊತ ಮತ್ತು ನೋವನ್ನು ಕಡಿಮೆ ಮಾಡುತ್ತದೆ. ಗಾಯದ ನಂತರ ತಕ್ಷಣ 10 ರಿಂದ 15 ನಿಮಿಷಗಳ ಕಾಲ ಐಸ್ ಅನ್ನು ಇಡಿ ಎಂದು ಡಾ. ನೀನೆ ಹೇಳುತ್ತಾರೆ.

# ರಾಮಾಯಣ



## ಶ್ರೀರಾಮನು ರಾಜ್ಯಭಾರವನ್ನು ಒಪ್ಪದಿದ್ದುದು

• ಹಿಂದಿನ ಸಂಚಿಕೆಯಿಂದ

### 101ನೆಯ ಅಧ್ಯಾಯ

ಇಷ್ಟರಮೇಲೆ ದಶರಥಮಹಾರಾಯನ ಸೊಸೆ. ಲೋಕನಾಯಕನಾದ ಶ್ರೀರಾಮನ ಪಟ್ಟದ ರಾಣಿ. ಇಂಥವಳು ಈ ವನದಲ್ಲಿ ಈ ರೀತಿ ದುಃಖಕ್ಕೊಳಗಾಗಬಹುದೆ! ಸೀತಾದೇವಿ, ನಿನ್ನ ಮುಖವು ಬಿಸಿಲಿನಲ್ಲಿ ಒಣಗಿದ ತಾವರೆ ಹೂವಿನಂತೆಯೂ ಕಂದಿದ ಕನ್ನೈದಿಲೆ ಪುಷ್ಪದಂತೆಯೂ ಧೂಳುಮುಚ್ಚಿದ ಅಪರಂಜಿಯ ತಗಡಿನಂತೆಯೂ ಮೇಘಸಮೂಹ ಮುನುಕಿದ ಚಂದ್ರ ಮಂಡಲದಂತೆಯೂ ಕಾಂತಿಗುಂದಿದೆ. ನಿನ್ನ ಮುಖವು ಮೊದಲೇ ಶೋಕದಿಂದ ಖಿನ್ನವಾದ ನನ್ನ ಮನಸ್ಸನ್ನು ಬೆಗ್ಗಳವಾಗಿ ನೋಯಿಸುತ್ತಿದೆ ಎಂದು ನುಡಿದಳು.

ಬಳಿಕ ದೇವೇಂದ್ರನು ತನ್ನ ಗುರುವಾದ ಬೃಹಸ್ಪತಿಗೆ ಅಭಿವಂದಿಸುವಂತೆ ಶ್ರೀರಾಮನು ತನ್ನ ಗುರುವಾದ ವಸಿಷ್ಠ ಮುನೀಶ್ವರನಿಗೆ ಅಭಿನಂದಿಸಿ ಅತಿತೇಜಸ್ವಿಯಾದ ಆ ಮುನಿಯೊಡನೆ ದರ್ಭಾಸನದ ಮೇಲೆ ಕುಳಿತನು. ಅನಂತರ ಮಂತ್ರಿಗಳೂ ನಗರದ ಮುಖಂಡರುಗಳೂ ಸೇನಾಪತಿಗಳೂ ಮತ್ತು ಧರ್ಮವನ್ನರಿತ ಜನರೂ ಸುತ್ತ ನೆರೆದಿರಲು ಧರ್ಮಾತ್ಮನಾದ ಭರತನು ಆತನ ಸಮೀಪದಲ್ಲಿ ಕುಳಿತನು. ಬ್ರಹ್ಮದೇವನ ಸಂಮುಖದಲ್ಲಿ ದೇವೇಂದ್ರನು ಕೈಮುಗಿದುಕೊಂಡಿರುವಂತೆ ಮಹಾತ್ಮನಾದ ಅತಿತೇಜಸ್ವಿಯಾದ ಶ್ರೀರಾಮನ ಸಂಮುಖದಲ್ಲಿ ಕೈಮುಗಿದುಕೊಂಡಿದ್ದ ಭರತನನ್ನು ನೋಡಿ ಸಮಸ್ತ ಜನರೂ ಆತನು ಯಾವ ಕಾರ್ಯವನ್ನು ಬಿನ್ನವಿಸುವನೋ ಎಂದು ನೋಡುತ್ತಿದ್ದರು.

ಈ ಕ್ರಮದಲ್ಲಿ ಸಮಸ್ತ ಪ್ರಧಾನರಿಂದಲೂ ಸೇನಾಪತಿಗಳಿಂದಲೂ ಸುತ್ತು ವರಿಯಲ್ಪಟ್ಟ ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರು ಯಾಗಮಂಟಪದಲ್ಲಿ ಋತ್ವಿಕ್ಕುಗಳಿಂದ ಸುತ್ತುವರಿಯಲ್ಪಟ್ಟ ಯಕ್ಞೇಶ್ವರನ ಮರ್ಯಾದೆಯಲ್ಲಿ ಒಪ್ಪುತ್ತಿದ್ದರು.

**ಶ್ರೀರಾಮನು ರಾಜ್ಯಭಾರವನ್ನು ಒಪ್ಪದಿದ್ದುದು**

ಶ್ರೀರಾಮನು ಗುರುಭಕ್ತನಾದ ಭರತನನ್ನು ಕುಶಲಪ್ರಶ್ನೆಯನ್ನು ಕೇಳಿದ ಬಳಿಕ ಲಕ್ಷ್ಮಣಸಮೇತನಾಗಿ ಭರತನನ್ನು ಕುರಿತು ಭರತನೆ, ನೀನು ನಾರುಬಟ್ಟೆಗಳನ್ನುಟ್ಟು ಜಡೆಗಳನ್ನು ಧರಿಸಿ ಋಷಿಗಳಿರುವ ವನಕ್ಕೆ ಏನು ಕಾರಣವಾಗಿ ಬಂದೆ ನೀನು ಬಂದ ಪ್ರಯೋಜನ ವನ್ನು ಹೇಳು. ರಾಜ್ಯವನ್ನು ಬಿಟ್ಟು ನೀನಿಲ್ಲಿಗೆ ಬರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದನು. ಭರತನು ಕೈ ಮುಗಿದುಕೊಂಡು ಶ್ರೀರಾಮ. ನಮ್ಮ ತಂದೆಯಾದ ದಶರಥರಾಯನು ಕೈಕೇಯಾದೇವಿಯ ಮಾತಿಗೆ ಮರುಳಾಗಿ ಮಾಡಬಾರದ ಕೃತ್ಯವನ್ನು ಮಾಡಿ ನಿನ್ನನ್ನು ವನಕ್ಕೆ ಹೊರಡಿಸಿ ಪುತ್ರಶೋಕದಿಂದ ಶರೀರವನ್ನು ಧರಿಸಲಾರದೆ ನಮ್ಮೆಲ್ಲರನ್ನೂ ಬಿಟ್ಟು ಸ್ವರ್ಗಸ್ಥನಾದನು. ನನ್ನ ತಾಯಿಯಾದ ಕೈಕೇಯಾದೇವಿಯು ನನಗೆ ಅತ್ಯಂತ ಅಪಕೀರ್ತಿಯನ್ನುಂಟುಮಾಡುವ ಪಾಪವನ್ನು ಮಾಡಿ ಆ ಪಾಪಫಲದಿಂದ ರಾಜ್ಯಾಧಿಪತ್ಯವನ್ನು ಪಡೆಯದೆ ವಿಧವೆಯಾಗಿ ಅತ್ಯಂತವಾದ ಶೋಕಕ್ಕೊಳಗಾದಳು. ನೀನು ನಿನ್ನ ನೃತ್ಯನಾದ ನನ್ನಲ್ಲಿ ಕೃಪೆಮಾಡು. ದೇವೇಂದ್ರನು ಸ್ವರ್ಗಲೋಕದಲ್ಲಿ ಸ್ವರ್ಗಾಧಿಪತ್ಯವನ್ನು ಪಡೆದಂತೆ ನೀನು ಈಗಲೇ ಪಟ್ಟಾಭಿಷೇಕ ಮಾಡಿಕೊ, ಸಮಸ್ತ ಪ್ರಧಾನಿಗಳೂ ಬಂದಿದ್ದಾರೆ.

ಮುಂದುವರಿಯುವುದು...

# ಸ್ತ್ರೀಯ ಗುಣ ಹಾಗೂ ಭಗವಂತ

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಸ್ತ್ರೀಯರಲ್ಲಿ ಕಂಡುಬರುವ ಈ ಏಳು ಗುಣಗಳು ನನ್ನ ಗುಣಗಳು ಎಂದು ಭಗವಂತ ಹೇಳುತ್ತಾನೆ. ಇದನ್ನು ಅವಲಂಬಿಸಿ ಈ ಏಳು ಗುಣಲಕ್ಷಣಗಳು ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅಥವಾ ಮಹಿಳೆಯರಲ್ಲಿ ಈ ಏಳು ಲಕ್ಷಣಗಳು ಹೆಚ್ಚಾಗಿ ಕಂಡು ಬರಬಹುದು. ಇವು ಮಹಿಳೆಯರ ಸಹಜ ಗುಣಗಳೂ ಹೌದು. ಪ್ರತಿಯೊಂದು ವಸ್ತುವಿಗೆ ಒಂದು ಪದವನ್ನು ಹೇಳುವುದು, ನಾನು ಏಳು ಶ್ರೇಷ್ಠ ಮಹಿಳೆಯರಲ್ಲಿ ಒಬ್ಬಳು ಆ ಪರಮಾತ್ಮನು ಸ್ತ್ರೀಯರ ಅಪೂರ್ವತೆಯನ್ನು ಸಾರುತ್ತಾನೆ. ಏಳು ಶ್ರೇಷ್ಠರು ಯಾವುವು ...

**ಖ್ಯಾತಿ ...:** ಸತ್ಕರ್ಮ, ದಾನ, ಪೂಜೆ, ಯಜ್ಞ ಇತ್ಯಾದಿಗಳ ಮೂಲಕ. ತ್ಯಾಗದ ಮೂಲಕ ಖ್ಯಾತಿಯನ್ನು ಗಳಿಸುವುದು, ಗಂಡನ ಪರವಾಗಿ ಕುಟುಂಬ ನಿರ್ವಹಣೆಯನ್ನು ಪರಿಗಣಿಸುವುದು ಇವು ಸ್ತ್ರೀಲಿಂಗ ಪ್ರವೃತ್ತಿಗಳು.

**ಶ್ರೀ ...:** ಶ್ರೀ ಎಂದರೆ ಸಂಪತ್ತು. ಅಷ್ಟೇ ಅಲ್ಲ ಸಂಪತ್ತು ಕೂಡ ದೇಹಸೌಂದರ್ಯವನ್ನು ಕಾಪಾಡಿಕೊಂಡು ಕಂಗೊಳಿಸುವುದು ಹೆಣ್ಣಿನ ಸಹಜ ಗುಣವೂ ಹೌದು. ಶ್ರೀ ಎಂದರೆ ಲಕ್ಷ್ಮಿ.

**ಭಾಷಣ ...:** ಮಾತು ಎಂದರೆ ಸರಸ್ವತಿ. ವಿದ್ಯೆ, ಜ್ಞಾನ, ಜ್ಞಾನ ಸಂಪಾದನೆ, ತಣ್ಣಗೆ, ಮಧುರವಾಗಿ, ಮಧುರವಾಗಿ ಮಾತನಾಡುವುದು ಕೂಡ



ಭಗವಂತನ ಮಹಿಮೆ. **ಸ್ಮರಣೆ...:** ನಡೆದ ಸಂಗತಿಗಳನ್ನು ನೆನಪಿಸಿಕೊಳ್ಳುವ ನೆನಪು ಮರೆಯದಿರುವ ಜ್ಞಾನ ಜ್ಞಾಪಕವು ಸಂದರ್ಭಕ್ಕೆ ಸಂಬಂಧಿಸಿದ ಘಟನೆಗಳನ್ನು ನೆನಪಿಸಿಕೊಳ್ಳುವುದು ಇದು ದೇವರ ಮಹಿಮೆ.

**ಬೌದ್ಧಿಕ ಆಸ್ತಿ...:** ಧಾರಣ ಶಕ್ತಿ ಕೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಳ್ಳುವ ಶಕ್ತಿ. ವಿವೇಕ, ತತ್ತ್ವಶಾಸ್ತ್ರ ಮಾಡಲು ಬೇಕಾದ ಮೇಧಾಶಕ್ತಿ ಮಹಿಳೆಯರಲ್ಲಿ ಹೆಚ್ಚು. ಇದು ದೇವರ ಮಹಿಮೆಯೂ ಹೌದು. **ಧೃತಿ ...:** ಧೈರ್ಯದಿಂದ ನೀತಿಯ ಕಾರ್ಯಗಳಲ್ಲಿ, ದೇವರ ಕಾರ್ಯಗಳಲ್ಲಿ, ಪರಿಶ್ರಮ ಎಂದರೆ ಭಾಗವತಿಕೆ ಮೋಕ್ಷ ಪ್ರಾಪ್ತಿಗಾಗಿ ಪರಿಶ್ರಮ. ಇಂದ್ರಿಯಗಳನ್ನು ಮತ್ತು ಮನಸ್ಸನ್ನು ನಿಗ್ರಹಿಸುವ ಶಕ್ತಿ ಇದು ಮಹಿಳೆಯರಲ್ಲೂ ಹೆಚ್ಚು ಸಾಮಾನ್ಯವಾಗಿದೆ.

**ಕ್ಷಮಿಸಿ ...:** ಅತ್ತಿಗೆಯ ಆರೈಕೆಯಲ್ಲಿ, ಗಂಡನ ಪರವಾಗಿ, ಮಕ್ಕಳ ಪೋಷಣೆಯಲ್ಲಿ, ಬಾವಿಗಳು, ಔಷಧಗಳು, ಗೆಳೆಯರೊಂದಿಗೆ ಚೆನ್ನಾಗಿ ವ್ಯವಹರಿಸುವಾಗ. ತುಂಬಾ ತಾಳ್ಮೆಯಿಂದ ಇರಬೇಕು. ಇದು ಹೆಣ್ಣಿನ ಸಹಜ ಗುಣವೂ ಹೌದು. ಇವೆಲ್ಲವೂ ಸ್ತ್ರೀಯರಲ್ಲಿದ್ದರೆ ಅವರನ್ನು ಭಗವಂತನ ಮಹಾನ್ ಜೀವಿಗಳಂತೆ ಕಾಣಬೇಕು. **ವಿಶೇಷತೆ ...** ನರ ಎಂದರೆ ಭಾಗವತ ಸಂಬಂಧಿ.. ಎಂದು. ಭಗವದ್ಗೀತೆಯಲ್ಲಿ ವಾಸಿಸುವವರು ಅಥವಾ ಭಗವದ್ಗೀತೆಯ ಜ್ಞಾನದಲ್ಲಿ ವಾಸಿಸುವವರು, ಅವರು ಪುರುಷರಾಗಲಿ ಅಥವಾ ಮಹಿಳೆಯರಾಗಲಿ, ಅವರಲ್ಲಿ ಮೇಲೆ ಹೇಳಿದ ಗುಣಗಳು ಬೆಳಗಿದರೆ, ಅವರು ಭಗವತ್ ವಿಭೂತರು.

# ಕಾರಟಗಿ ಪುರಸಭೆಯಲ್ಲಿ ರಾಜಕೀಯ ಷಡ್ಯಂತರ; ಕಾರ್ಮಿಕರಿಗೆ ಕಣ್ಣೀರು ಹಗಲು ರಾತ್ರಿ ಹೋರಾಟ

• ಉದಯವಾಹಿನಿ ಸುದ್ದಿ

**ಕಾರಟಗಿ :** ಪಟ್ಟಣದ ಪುರಸಭೆಯಲ್ಲಿ ಕೆಲಸ ಮಾಡಲು ಆಯ್ಕೆಯಾಗಿರುವ ಶ್ರೀಪಾಲ ಎಂಟರ್ ಪ್ರೈಸಸ್ ಮತ್ತು ಸೆಕ್ಯೂರಿಟಿ ಮತ್ತು ಸರ್ವಿಸಸ್, ನವರ ಗುತ್ತಿಗೆ ಸಂಸ್ಥೆಯ ವತಿಯಿಂದ ಪುರಸಭೆಯಲ್ಲಿ ಸುಮಾರು ವರ್ಷಗಳಿಂದ ಸ್ವಚ್ಛತಾ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ 17 ಜನರಿಗೆ ಮೊದಲ ಆದ್ಯತೆ ನೀಡಿ ಕೆಲಸಕ್ಕೆ ತೆಗೆದುಕೊಳ್ಳಲು ಮತ್ತು ಎಲ್ಲಾ ಕಾರ್ಮಿಕರ ಬಾಕಿ ವೇತನ ನೀಡಲು ಕ್ರಮವಹಿಸಲು ಒತ್ತಾಯಿಸಿ ಅನಿರ್ದಿಷ್ಟಾವಧಿ ಧರಣಿ ನಡೆಯುತ್ತಿದೆ, ಕಾರಟಗಿಯ ಪುರಸಭೆ ಅಧಿಕಾರಿಗಳಿಂದ ಪೌರಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಕಾರ್ಮಿಕ ಮುಖಂಡ ಹನುಮಂತಪ್ಪ ಹುಲಿ ಹೈದರ ಆಗ್ರಹ ವ್ಯಕ್ತಪಡಿಸಿದ್ದಾರೆ, ಈ ಕುರಿತು ಮಾತನಾಡಿದ ಅವರು ಈಗಾಗಲೇ ಈ ಕಛೇರಿಯಲ್ಲಿ ಪೂರೈಸಿರುವ ಕಾರ್ಮಿಕ


ಉದಯವಾಹಿನಿ ಚಿತ್ರ

ಏಜೆನ್ಸಿಯಾದ ಶ್ರೀಪಾಲ ಎಂಟರ್ ಪ್ರೈಸಸ್, ಸೆಕ್ಯೂರಿಟಿ ಮತ್ತು ಸರ್ವಿಸಸ್ ಕೊಪ್ಪಳ ಇವರಿಗೆ 15 ಜನರನ್ನು ಪೂರೈಸಲು ಆದೇಶಿಸಿದ್ದರಲ್ಲಿ ಈಗಾಗಲೇ 08 ಜನ ಕೆಲಸ ನಿರ್ವಹಿಸುತ್ತಿದ್ದು, ಇನ್ನೂ 07 ಜನ ಬಾಕಿ ಪೂರೈಸಬೇಕಾಗಿದ್ದು, ಈ 07 ಜನರನ್ನು ಈಗಾಗಲೇ ಮನೆ-ಮನೆ ಕಸ ಸಂಗ್ರಹಿಸುತ್ತಿರವವರಿಗೆ ಆಯ್ಕೆ ಮಾಡಿಕೊಳ್ಳಲು ಕೋರಲಾಗಿತ್ತು ಆದರೂ ಅಧಿಕಾರಿಗಳು ಎರಡು ವರ್ಷಗಳಿಂದ ಪುರಸಭೆಯಲ್ಲಿ ಕಸ ಸಂಗ್ರಹಿಸುವ ಕೆಲಸ ಮಾಡಿದ ವರಿಗೆ ವೇತನ ನೀಡಿಲ್ಲ ಹಾಗೂ ಇವರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಅಲ್ಲದೆ ಬೇರೆಯವರನ್ನು ಇವರ ಸ್ಥಾನದಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ರಾಜಕೀಯ ಷಡ್ಯಂತ್ರ ಪುರಸಭೆಯಲ್ಲಿ ನಡೆಯುತ್ತಿದೆ, ಇದನ್ನು ನಾವು ಸಹಿಸುವುದಿಲ್ಲ ಎಂದರು.

**ಅಧಿಕಾರಿಗಳ ಕಣ್ಣ ಮುಚ್ಚಾಲೆ ಆಟ**

ನಂತರ ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಕೇಂದ್ರೀಯ ಸಮಿತಿ ಜಿಲ್ಲಾಧ್ಯಕ್ಷರಾದ ವಿಜಯ ದೊರೆರಾಜು ಮಾತನಾಡಿ ಸರ್ಕಾರಿ ಕಛೇರಿಗಳಿಗೆ ಸಿಬ್ಬಂದಿಗಳನ್ನು ಪಡೆಯುವ ನೀತಿ ನಿಯಮಗಳ ಪ್ರಕಾರವೇ ಈ ಹಿಂದೆ 17 ಜನರನ್ನು ಕೆಲಸಕ್ಕೆ ತೆಗೆದು ಕೊಂಡಿದ್ದಾರೆ.ಆ ಕಾರಣಕ್ಕಾಗಿಯೇ ಈ ಕಾರ್ಮಿಕರಿಗೆ ಎಲ್ಲರಂತೆ ಸಮವಸ್ತ್ರ ನೀಡಿದ್ದಾರೆ ಜೊತೆಗೆ 2016 ರಿಂದ 2024 ವರೆಗೆ ವೇತನ ನೀಡುತ್ತಾ ಬಂದಿದ್ದಾರೆ. ಈ ಕಾರ್ಮಿಕರಿಗೆ ಕಡಿಮೆ ವೇತನ ನೀಡುತ್ತಿದ್ದಾರೆಂದು ನಮ್ಮ ಸಂಘಟನೆಯಿಂದ ಕಾರ್ಮಿಕ ಇಲಾಖೆಗೆ ದೂರು ಸಲ್ಲಿಸಿದಾಗ ಪ್ರಕರಣ ದಾಖಲಿಸಿಕೊಂಡು ಪುರಸಭೆಯಿಂದ ಈ ಕಾರ್ಮಿಕರಿಗೆ ವೇತನ ನೀಡಬೇಕೆಂದು ಆದೇಶ ಕೂಡ ಮಾಡಿದ್ದಾರೆ, ಆದಾಗ್ಯೂ ಕಾರಟಗಿ ಪುರಸಭೆಯಲ್ಲಿ ಕಸ ಸಂಗ್ರಹಕರಾಗಿ ಕೆಲಸ ನಿರ್ವಹಿಸುತ್ತಿರುವ ಇವರನ್ನು ಪುರಸಭೆ ಅಧಿಕಾರಿಗಳು ಕೆಲಸಕ್ಕೆ ನೇಮಿಸಿಕೊಳ್ಳಬೇಕು ಹಾಗೂ ಕಡ್ಡಾಯವಾಗಿ ಬಾಕಿ ವೇತನ ಪಾವತಿಸಬೇಕು ಒಂದು ವೇಳೆ ನಮ್ಮ ಬೇಡಿಕೆ ಈಡೇರಿಸದಿದ್ದರೆ ಕಾನೂನಾತ್ಮಕವಾಗಿ ಉಗ್ರ ಹೋರಾಟವನ್ನು ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಅಮೃತ್ 2.0 ಯೋಜನೆ ಕಾಮಗಾರಿ ಕಳಪೆ: ನಡಹಳ್ಳಿ ಆರೋಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ನಾಲತವಾಡ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಪಟ್ಟಣದಲ್ಲಿ 20 ಕೋಟಿಗಳ ಅನುದಾನದಲ್ಲಿ ಕೈಗೊಂಡಿರುವ ಅಮೃತ್ 2.0 ಯೋಜನೆಯ ಟೆಂಡರ್ ಅನ್ನು ಆಂಧ್ರ ಮೂಲದವರು ಪಡೆದಿದ್ದು, ಶಾಸಕ ಸಿ.ಎಸ್.ನಾಡಗೌಡರ ದೂರದ ಸಂಬಂಧಿಗಳು ಸಹಭಾಗಿತ್ವ ಪಡೆದುಕೊಂಡಿದ್ದು, ಶಾಸಕರ ಆಪ್ತರು ಕಳಪೆ ಕಾಮಗಾರಿ ಮಾಡುತ್ತಿದ್ದಾರೆ' ಎಂದು ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಆರೋಪಿಸಿದರು. ಪಟ್ಟಣದ ರಘುವೀರ ಚಿತ್ರಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಅಪ್ಪಾಜಿ ನಾಡಗೌಡ ಅವರ ಸ್ವಂತ ಊರಿದು, ಕಳಪೆ ಕಾಮಗಾರಿ ಮಾಡಿ ಶಾಸಕರ ಸಂಬಂಧಿಗಳು ಅನುದಾನ ಲೂಟಿ ಹೊಡೆಯುತ್ತಿದ್ದಾರೆ ಎಂದರು.

ಪಟ್ಟಣದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿದ ನಡಹಳ್ಳಿ, ಸಿ.ಸಿ ರಸ್ತೆ ಅಗೆದು, ರಸ್ತೆ ಹಾಳುಮಾಡಿ ಅಮೃತ್ ಯೋಜನೆ ಕಾಮಗಾರಿ ಮಾಡುತ್ತಿದ್ದಾರೆ. ಪಟ್ಟಣದ ಜನತೆ ಗಮನಿಸಿ, ರಸ್ತೆಯ ಎಡ ಮತ್ತು ಬಲ ಭಾಗದಲ್ಲಿ ರಸ್ತೆ ಮೇಲೆ ಪೈಪ್‌ಲೈನ್ ಅಳವಡಿಸಿ. ರಸ್ತೆ ಅಡಿಯಲ್ಲಿಯ ಪೈಪ್‌ಲೈನ್‌ಗೆ ಚರಂಡಿ ನೀರು ಸೇರುವ ಸಾಧ್ಯತೆ ಇದೆ. ಸಾರ್ವಜನಿಕರು ಗುಣಮಟ್ಟದ ಕೆಲಸ ತೆಗೆದುಕೊಳ್ಳಬೇಕು' ಎಂದರು.

'ಅಮೃತ್ ಯೋಜನೆಗಾಗಿ ಸಿ.ಸಿ ರಸ್ತೆ ಒಡೆಯುವುದಕ್ಕೆ ನಮ್ಮ ವಿರೋಧವಿದೆ. ಆದರೆ, ಕೆಲಸ ಮಾಡಿಸಲು ನಮ್ಮ ತಕರಾರಿಲ್ಲ. ರಸ್ತೆ ಪಕ್ಕದಲ್ಲಿ ಪೈಪ್‌ಲೈನ್ ಮಾಡಬೇಕು. ಆದರೆ, ರೈತರು ಹೊಲಗಳಲ್ಲಿ ಬಳಸುವ ಪಿವಿಸಿ ಪೈಪ್ ಹಾಕಿ ಕಳಪೆ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ದುಡ್ಡು ಕೊಟ್ಟು ಕುಡಿಯುವ ನೀರಿಗೆ ಭವಿಷ್ಯದಲ್ಲಿ ಚರಂಡಿ ನೀರು ಸೇರಿ ಜನರು ಆರೋಗ್ಯ ಸಮಸ್ಯೆಗೆ ಒಳಗಾಗಬೇಕಾಗುತ್ತದೆ ಎಂದು ಹೇಳಿದರು.

ಆರು ಬಾರಿ ಶಾಸಕರಾದ ಅಪ್ಪಾಜಿ ನಾಡಗೌಡರು ಮೊದಲು ಪಟ್ಟಣದ ಎಲ್ಲಾ ಓಣಿ ವಾರ್ಡ್ ಗಳಿಗೆ ಭೇಟಿ ನೀಡಿ ಸಮಸ್ಯೆ ಅರಿಯಿರಿ. ಕೇಂದ್ರ ಹಾಗೂ ರಾಜ್ಯ ಸರ್ಕಾರದ 50:50 ಅನುಪಾತದಲ್ಲಿ ಅಮೃತ್ ಯೋಜನೆ ಅನುಷ್ಠಾನವಾಗುತ್ತಿದೆ. ಈ ನೀರಿನ ಯೋಜನೆ ನಾನು ತಂದಿರುವುದು ಎಂದು ಹೇಳಿದರು.


# ಲಿಂಗಾಯತ ಸಮುದಾಯಕ್ಕೆ ಕೊಟ್ಟ ಸಂದೇಶವೇನು?

## ವೀರಶೈವ ಪಂಚ ಪೀಠಾಧೀಶ್ವರರು 16 ವರ್ಷ ಬಳಿಕ ದಾವಣಗೆರೆಯಲ್ಲಿ ಸಮಾಗಮ

• ಉದಯವಾಹಿನಿ, ದಾವಣಗೆರೆ

ನಗರದ ಅಭಿನವ ರೇಣುಕ ಮಂದಿರ ಸೋಮವಾರ ಐತಿಹಾಸಿಕ ವೀರಶೈವ ಪೀಠಾಚಾರ್ಯರ, ಶಿವಾಚಾರ್ಯರ ಶೃಂಗ ಸಮ್ಮೇಳನಕ್ಕೆ ಸಾಕ್ಷಿಯಾಯಿತು. 16 ವರ್ಷಗಳ ಸುದೀರ್ಘ ಅಗಲಿಕೆಯ ಬಳಿಕ ಪಂಚ ಪೀಠಾಚಾರ್ಯರು ಒಂದೇ ವೇದಿಕೆಯಲ್ಲಿಸೇರಲು ಮಧ್ಯ ಕರ್ನಾಟಕದ ದಾವಣಗೆರೆ ಸಾಕ್ಷಿಯಾಯಿತು. ಕೇದಾರ, ಕಾಶಿ, ಉಜ್ಜಯಿನಿ, ಬಾಳೆಹೊನ್ನೂರು ಹಾಗೂ ಶ್ರೀಶೈಲ ಪೀಠಗಳ ಪೀಠಾಚಾರ್ಯರ ಜತೆಗೆ ರಾಜ್ಯದ ಉದ್ದಗಲಕ್ಕೂ ಇರುವ ಗುರು, ವಿರಕ್ತ ಪರಂಪರೆಯ ಮಠಗಳ ಮಠಾಧೀಶರು ಈ ಐತಿಹಾಸಿಕ ಸಮಾರಂಭಕ್ಕೆ ಸಾಕ್ಷಿಯಾದರು. ಹಿರಿಯ ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷಶಾಮನೂರು ಶಿವಶಂಕರಪ್ಪ ಸಂಕಲ್ಪ ಹಾಗೂ ಜಿಲ್ಲಾಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಮುತುವರ್ಜಿಯಿಂದಾಗಿ ನಡೆದ ಸಮಾರಂಭದಲ್ಲಿ ರಾಜಕೀಯ ಮುಖಂಡರು ಪಕ್ಷಭೇದ ಮರೆತು ವೇದಿಕೆ ಹಂಚಿಕೊಂಡರು. ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯಿಂದ ನಡೆದ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ ಕೇದಾರ ಪೀಠದ ಶ್ರೀ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ, ನಾವು ಪರಂಪರೆಯನ್ನು ಭದ್ರವಾಗಿಸಿಕೊಂಡು ಸಮಾಜವನ್ನು ರಕ್ಷಣೆ ಮಾಡಬೇಕು. ಪರಂಪರೆಯನ್ನು ಕಡೆಗಣಿಸಿದರೆ ಯಾವ ಕಾರಣಕ್ಕೂ ಸಮಾಜ ಭದ್ರವಾಗುವುದಿಲ್ಲ, ಎಂದು ಹೇಳಿದರು.

**ದೇಶವೇ ನೋಡುತ್ತದೆ:** ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ನವ ಕರ್ನಾಟಕದ ನಿರ್ಮಾಣದಲ್ಲಿಅಮೋಘ ಕೊಡುಗೆ ನೀಡಿರುವುದು ವೀರಶೈವ ಲಿಂಗಾಯತರ ಹೆಗ್ಗಳಿಕೆ. ಈಗ ಸಮಾಜದಲ್ಲಿಹಲವು ಸಮಸ್ಯೆಗಳಿವೆ. ವರ್ತಮಾನದಲ್ಲಿಸಮಾಜ ಸಂಘಟನೆಗೆ ಶ್ರಮಿಸಬೇಕಿದೆ. ಸಮಾಜ ಛಿದ್ರವಾಗಿ, ದಿನೇ ದಿನೇ ದುರ್ಬಲವಾಗುತ್ತಿದೆ. ವೀರಶೈವ ಮತ್ತು ಲಿಂಗಾಯತ ಎರಡೂ ಸಮಾನಾರ್ಥಕವಾಗಿದ್ದು, ನಾವೆಲ್ಲರೂ ಇಂದು ವಿಘಟನೆಯಿಂದ


ಉದಯವಾಹಿನಿ ಚಿತ್ರ

> ಈ ಹಿಂದೆ ರಂಭಾಪುರಿ ಶ್ರೀಗಳು ನಮ್ಮ ಮನೆಯಲ್ಲಿ ಇಷ್ಟಲಿಂಗ ಮಹಾಪೂಜೆ ನೆರವೇರಿಸಿದ ಸಂದರ್ಭದಲ್ಲಿ ಸಮಾಜದ ಒಳಿತಿಗಾಗಿ ಶೃಂಗ ಸಮ್ಮೇಳನ ನಡೆಸುವ ಇಂಗಿತ ವ್ಯಕ್ತಪಡಿಸಿದ್ದರು. ಅಪ್ಪಾಜಿಯವರು (ಎಸ್‌ಎಸ್) ಶ್ರೀಗಳ ಆಶಯ ಈಡೇರಿಸುವ ಪ್ರಯತ್ನಗಳನ್ನು ಆಗಿನಿಂದಲೇ ಆರಂಭಿಸಿದರು. ಇಂದು ಶೃಂಗ ಸಮ್ಮೇಳನ ನಡೆಯುತ್ತಿದೆ.
>
> -ಡಾ.ಪ್ರಭಾ ಮಲ್ಲಿಕಾರ್ಜುನ್ ಸಂಸದೆ.

ಒಗ್ಗಟ್ಟಿನ ಕಡೆ ಹೋಗಬೇಕಿದೆ. ನಾವೆಲ್ಲಒಗ್ಗಟ್ಟಾದರೆ ಇಡೀ ದೇಶ ನಮ್ಮ ಕಡೆ ನೋಡುತ್ತದೆ ಎಂದು ಹೇಳಿದರು.

**ಗುರು-ವಿರಕ್ತರ ಸೇರಿಸಲಿ:** ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ ಮಾತನಾಡಿ, ಇಡೀ ವೀರಶೈವ ಲಿಂಗಾಯತ ಸಮಾಜ ಒಂದಾಗಬೇಕು ಎಂಬುದು ಎಲ್ಲರ ಕಳಕಳಿ. ಅದರಂತೆ ಮುಂದಿನ ದಿನಗಳಲ್ಲಿಎಲ್ಲಗುರು-ವಿರಕ್ತ ಮಠಾಧೀಶರೂ ಒಂದೇ ವೇದಿಕೆಯಲ್ಲಿ ಸೇರುವಂತಹ ಕಾರ್ಯವಾಗಬೇಕು ಶಾಮನೂರು ಶಿವಶಂಕರಪ್ಪ ಹಾಗೂ ರಂಭಾಪುರಿ ಶ್ರೀಗಳು ಇದರ ನೇತೃತ್ವ ವಹಿಸಬೇಕು. ಮಹಾರಾಷ್ಟ್ರದಲ್ಲಿ12 ವರ್ಷಗಳ ಕೆಳಗೆ 1 ಕೋಟಿ 10 ಲಕ್ಷ ವೀರಶೈವ ಲಿಂಗಾಯತರಿದ್ದರು. ರಾಜ್ಯದಲ್ಲಿನಮ್ಮ ಸಮಾಜದವರ ಸಂಖ್ಯೆ ಮಹಾರಾಷ್ಟ್ರಕ್ಕಿಂತ ದುಪ್ಪಟ್ಟಿದೆ. ಆದರೆ, ಇಂದು ರಾಜ್ಯದಲ್ಲಿನಮ್ಮ ಸಂಖ್ಯೆ ಕಡಿಮೆ ತೋರಿಸುವ ಷಡ್ಯಂತ್ರ ನಡೆಯುತ್ತಿದೆ, ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಲಿಂಗಾಯತ ಪರಂಪರೆ ರಕ್ಷಿಸಿ**

ಪರಂಪರೆಯನ್ನು ರಕ್ಷಣೆ ಮಾಡುವುದಾಗಿ ಕೇದಾರ ಪೀಠದಲ್ಲಿನಾವು ಸಂಕಲ್ಪ ಮಾಡಿದ್ದೇವೆ. ಅದೇ ಪ್ರಕಾರ ನಾವು ನಡೆಯಬೇಕಾಗುತ್ತದೆ. ಒಂದು ವೇಳೆ ಮಾತಿಗೆ ತಕ್ಕಂತೆ ನಡೆಯದೇ ಇದ್ದರೆ ಮೋಕ್ಷ ಕಟ್ಟಿಟ್ಟ ಬುತ್ತಿ. ಸಮಾಜ ಪರಿವರ್ತನೆ ಆಗುತ್ತಿದೆ. ಆದರೆ, ಪರಂಪರೆ ಪರಿವರ್ತನೆ ಆಗುತ್ತಿಲ್ಲ. ಪೀಠದ ಮೇಲೆ ಕೂರುವ ವ್ಯಕ್ತಿಗಳು ಪರಿವರ್ತನೆ ಆಗುತ್ತಿದ್ದಾರೆ. ಆದರೆ, ಪೀಠ ಮಾತ್ರ ಶಾಶ್ವತವಾಗಿದೆ. ಅದರಂತೆ ಪರಂಪರೆಯೂ ಶಾಶ್ವತ. ಇಲ್ಲಿವ್ಯಕ್ತಿ ಪ್ರಧಾನವಲ್ಲ, ಪರಂಪರೆ ಮತ್ತು ಶಕ್ತಿ ಪ್ರಧಾನವಾಗುತ್ತದೆ ಎಂದರು.

**ತಂದೆಯವರ ಬಯಕೆ ಫಲಿಸಿದೆ:** ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ಮಾತನಾಡಿ, ಪಂಚ ಪೀಠಾಚಾರ್ಯರನ್ನು ಒಂದೇ ವೇದಿಕೆಯಲ್ಲಿ ಸೇರಿಸಬೇಕು ಎಂಬುದು ನನ್ನ ತಂದೆಯವರ ಬಹು ವರ್ಷಗಳ ಬಯಕೆ. ಆ ಬಯಕೆ ಇಂದು ಫಲಿಸಿದೆ. ನಮ್ಮ ತಂದೆ ಶಾಮನೂರು ಶಿವಶಂಕರಪ್ಪನವರು ಯಾವತ್ತೂ ಗುರು -ವಿರಕ್ತ ಪರಂಪರೆಯ ಆರಾಧಕರಾಗಿದ್ದು, ವೀರಶೈವ ಲಿಂಗಾಯತ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಸಂಕಲ್ಪ ಮಾಡಿದ್ದಾರೆ. ಕರ್ನಾಟಕದಲ್ಲಿ ಕೋಟಿ ಕೋಟಿ ವೀರಶೈವ ಲಿಂಗಾಯತರಿದ್ದೇವೆ. ಆದರೆ ನಮ್ಮ ಆಚಾರ, ವಿಚಾರಗಳಿಗೆ ಅನುಗುಣವಾಗಿ ಒಳಪಂಗಡಗಳನ್ನು ಮಾಡಿಕೊಂಡಿದ್ದೇವೆ. ಆದರೆ, ಇಂದು ವೀರಶೈವ ಲಿಂಗಾಯತರ ಅಖಂಡತೆ ಪ್ರದರ್ಶಿಸುವ ಸಮಯ ಬಂದಿದೆ ಎಂದರು.

# ಮಲ್ಲಿಕಾರ್ಜುನ ಖರ್ಗೆಅವರಿಗೆ ಮುಂದೆ ಪ್ರಧಾನಮಂತ್ರಿ ಹುದ್ದೆ ಖಚಿತ

• ಉದಯವಾಹಿನಿ, ಚಿಂಚೋಳಿ

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಬುದ್ಧ ಬಸವ ಅಂಬೇಡ್ಕರ್ ತತ್ವ ಸಿದ್ಧಾಂತದ ಮೇಲೆ ನಂಬಿಕೆವುಳ್ಳವರಾಗಿದ್ದು ಬರುವ ದಿನಗಳಲ್ಲಿ ಭಾರತ ದೇಶದ ಪ್ರಧಾನಮಂತ್ರಿ ಹುದ್ದೆ ಅಲಂಕರಿಸುತ್ತಾರೆ ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಹೇಳಿದರು.

ಪಟ್ಟಣದ ಚಂದಾಪೂರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ 83ನೇ ಹುಟ್ಟುಹಬ್ಬದ ಅಂಗವಾಗಿ ತಾಲ್ಲೂಕಾ ಬ್ಲಾಕ್ ಕೈ ಸಮಿತಿ ವತಿಯಿಂದ ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ನೇತೃತ್ವದಲ್ಲಿ ಬಡರೋಗಿಗಳಿಗೆ ಹಣ್ಣುಹಂಪಲು ವಿತರಿಸಿ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ರಾಜಕೀಯ ಇತಿಹಾಸದಲ್ಲಿ ರಾಜ್ಯ ಸರ್ಕಾರದ ವಿವಿಧ ಖಾತೆಗಳ ಸಚಿವರಾಗಿ ಕೇಂದ್ರದಲ್ಲಿ ಸಚಿವರಾಗಿ ದೇಶಕ್ಕೆ, ವಿಶೇಷವಾಗಿ ರಾಜ್ಯಕ್ಕೆ ಮಾಡಿರುವ ಕೆಲಸಗಳು ಯಾರು ಮರೆಯುವಂತ್ತಿಲ್ಲ, ಕಲ್ಯಾಣ ಕರ್ನಾಟಕಕ್ಕೆ


ಉದಯವಾಹಿನಿ ಚಿತ್ರ

371ಜೆ ಕೊಟ್ಟು ಕಲ್ಯಾಣ ಕರ್ನಾಟಕದ ಚಿತ್ರಣವೇ ಬದಲಾಯಿಸಿದ್ದಾರೆ ಅನೇಕರಿಗೆ ಉದ್ಯೋಗ, ಮೀಸಲಾತಿ, ಸರ್ಕಾರಿ ನೌಕರರಿಗೆ ಸೌವಲತ್ತುಗಳು ಸಿಗುತ್ತಿವೆ, ಇಎಸ್ಐ ಆಸ್ಪತ್ರೆ ಹೀಗೆ ಹತ್ತಾರು ಕೆಲಸಗಳು ಮಾಡಿ ದೇಶದ ಸಾರ್ವಜನಿಕರ ಮನದಲ್ಲಿದ್ದಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ, ಬಾಬುರಾವ ಪಾಟೀಲ, ಲಕ್ಷ್ಮಣ ಆವುಂಟಿ, ಶಬ್ಬೀರ ಅಹೇಮದ್, ಮಸೂದ್ ಸೌದಾಗಾರ, ಮತೀನ ಸೌದಾಗಾರ, ರಾಮಶೇಟ್ಟಿ ಪವ್ಹಾರ, ಹಾಫೀಜ್ ಅಬ್ದುಲ್ ಹಮೀದ್, ಶೇಕ್ ಫರೀದ್, ಜಗನ್ನಾಥ ಕಟ್ಟಿ, ನಾಗೇಶ ಗುಣಾಜೀ, ಸಂತೋಷ ಗುತ್ತೇದಾರ, ಜಗನ್ನಾಥ ಗುತ್ತೇದಾರ, ಮಸ್ತಾನ ಪಟೇಲ ಹೋಸಳ್ಳಿ, ಆರ್.ಗಣಪತರಾವ, ನಾಗರಾಜ ಕಟ್ಟಿ, ಮಹ್ಮುದ್ ಹಾದಿಸಾಬ, ವಿಶ್ವನಾಥ ಬೀರನಳ್ಳಿ, ಸೋಮಶೇಖರ್ ಅನೇಕರಿದ್ದರು.

> ದೇಶದಲ್ಲಿ ಮಲ್ಲಿಕಾರ್ಜುನ ಖರ್ಗೆಯವರ ಅಭಿವೃದ್ಧಿ ಅವರು ಮಾಡಿರುವ ಕೆಲಸಗಳೆ ಸಾಕ್ಷಿಯಾಗಿವೆ 09ಬಾರಿ ಶಾಸಕರಾಗಿ, ಸಂಸದರಾಗಿ, ರಾಜ್ಯಸಭಾ ಸದಸ್ಯರಾಗಿ, ವಿರೋಧ ಪಕ್ಷದ ನಾಯಕರಾಗಿ ಅನೇಕ ಹುದ್ದೆಗಳು ಅಲಂಕರಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದಾರೆ ಅವರಿಗೆ ಮುಖ್ಯಮಂತ್ರಿ, ಪ್ರಧಾನ ಮಂತ್ರಿ ಆಗುವ ಎಲ್ಲಾ ಅರ್ಹತೆಗಳಿವೆ ಬರುವ ದಿನಗಳಲ್ಲಿ ದೇಶದ ಪ್ರಧಾನ ಮಂತ್ರಿ ಆಗುತ್ತಾರೆ.
>
> -ಆನಂದಕುಮಾರ ಟೈಗರ್, ಅಧ್ಯಕ್ಷ

# ಯಮಕನಮರಡಿ ಗ್ರಾ.ಪಂಗೆ ಜಿ.ಪಂ ಸಿಇಒ ಭೇಟಿ

• ಉದಯವಾಹಿನಿ, ಹುಕ್ಕೇರಿ

ತಾಲ್ಲೂಕಿನ ಯಮಕನಮರಡಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಾಹುಲ್ ಶಿಂಧೆ ಅವರು ಗ್ರಾಮಠಾಣಾ ಆಸ್ತಿಗಳಿಗೆ ಇ-ಸ್ವತ್ತು ನಮೂನೆ 9 ವಿತರಿಸುವ ಕುರಿತು ಮಾಹಿತಿ ನೀಡಿದರು.

**ಆ್ಯಪ್‌ನಲ್ಲಿ ಆಸ್ತಿ ಸರ್ವೆ ಪರಿಶೀಲನೆ**

ಇ-ಸ್ವತ್ತು ನಮೂನೆ 9 ಕೋರಿ ಗ್ರಾಮ ಪಂಚಾಯಿಗೆ ಅರ್ಜಿ ಸಲ್ಲಿಸಿದ್ದ ಅರ್ಜಿದಾರರ ಮನೆಗೆ ಖುದ್ದು ಭೇಟಿ ನೀಡಿ, ದಿಶಾಂಕ ಮೊಬೈಲ್ ಫೋನ್ ಆ್ಯಪ್ ಮೂಲಕ ಆಸ್ತಿಯ ಸರ್ವೆ ಮಾಡುವುದನ್ನು ಪರಿಶೀಲಿಸಿದರು. ಇ-ಸ್ವತ್ತು ಉತಾರ ಪಡೆದ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸುಲಭವಾಗಿ ಸಾಲ ಸೌಲಭ್ಯ ದೊರೆಯುತ್ತದೆ ಎಂದು ತಿಳಿಸಿದರು. ಹರಗಾಪೂರ ಗ್ರಾಮದಲ್ಲಿರುವ ಕಣಗಲಾ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಘಟಕಕ್ಕೆ ಭೇಟಿ ನೀಡಿ, ನೀರಿನ ಗುಟಮಟ್ಟ ಕುರಿತ ವರದಿ ಪರಿಶೀಲಿಸಿದರು.


ಉದಯವಾಹಿನಿ ಚಿತ್ರ


**ಮತಗಟ್ಟೆಗೆ ಭೇಟಿ**

ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಅವರು ತಾಲ್ಲೂಕಿನ ಗೋಟೂರ ಗ್ರಾಮ ಪಂಚಾಯಿತಿ ಸೂಕ್ಷ್ಮ ಮತಗಟ್ಟೆ ಸಂಖ್ಯೆ 10ಕ್ಕೆ ಭೇಟಿ ನೀಡಿದರು. ನಂತರ ಹೆಬ್ಬಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಶಾಲೆಯ ಮತಗಟ್ಟೆ ಸಂಖ್ಯೆ 14ಕ್ಕೆ ಭೇಟಿ ನೀಡಿ, ಮೂಲಸೌಕರ್ಯ ಪರಿಶೀಲಿಸಿದರು. ಬಿ.ಎಲ್.ಒ.ಗಳಿಗೆ ಬಿಇಎಂಪಿ ಬಗ್ಗೆ ವಿಚಾರಿಸಿದರು.

# ಗೋಡೆ ಕುಸಿದು ಕೃಷಿ ಕಾರ್ಮಿಕ ಸಾವು

• ಉದಯವಾಹಿನಿ, ಬ್ಯಾಡಗಿ

ತಾಲ್ಲೂಕಿನ ಗುಡ್ಡದ ಮಲ್ಲಾಪುರ ಗ್ರಾಮದಲ್ಲಿ ನಿರಂತರ ಮಳೆಯಿಂದಾಗಿ ಶಿಥಿಲಗೊಂಡಿದ್ದ ಗೋಡೆ ಕುಸಿದು ಕೃಷಿ ಕಾರ್ಮಿಕ ಗದಿಗೆಪ್ಪ ಮಲ್ಲಪ್ಪ ಕೊಪ್ಪದ (65) ಎಂಬುವವರು ಮೃತಪಟ್ಟಿದ್ದಾರೆ. ಗುಡ್ಡದ ಮಲ್ಲಾಪುರದ ನಿವಾಸಿ ಗದಿಗೆಪ್ಪ, ಗ್ರಾಮದಲ್ಲಿರುವ ಹುಚ್ಚಯ್ಯಸ್ವಾಮಿ ದಾಸೋಹ ಮಠದಲ್ಲಿರುವ ದನಗಳ ಆರೈಕೆ ಮಾಡುತ್ತಿದ್ದರು. ಇವರ ಸಾವಿನ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ ಎಂದು ಕಾಗಿನೆಲೆ ಠಾಣೆ ಪೊಲೀಸರು ತಿಳಿಸಿದರು. ಗದಿಗೆಪ್ಪ ಅವರು ಸುಮಾರು 25 ವರ್ಷಗಳಿಂದ ಮಠದಲ್ಲಿ ಕೆಲಸ ಮಾಡುತ್ತಿದ್ದರು. ಜಾನುವಾರುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಅವರದ್ದಾಗಿತ್ತು. ಶನಿವಾರ ಎಂದಿನಂತೆ ದನದ ಕೊಟ್ಟಿಗೆಯಲ್ಲಿ ಗದಿಗೆಪ್ಪ ಅವರು ಕೆಲಸ ಮಾಡುತ್ತಿದ್ದರು. ಗುಡ್ಡದ ಮಲ್ಲಾಪುರ ಗ್ರಾಮದಲ್ಲಿ ಕೆಲ ದಿನಗಳಿಂದ ಬಿಡುವು ನೀಡುತ್ತಲೇ ಮಳೆ ಸುರಿಯುತ್ತಿದೆ. ಈ ಮಳೆಯಿಂದಾಗಿ ಗೋಡೆ ಶಿಥಿಲಗೊಂಡಿತ್ತು. ಏಕಾಏಕಿ ಕುಸಿದ ಗೋಡೆ, ಗದಿಗೆಪ್ಪ


ಉದಯವಾಹಿನಿ ಚಿತ್ರ

ಹಾಗೂ ಆಕಳುಗಳ ಮೇಲೆ ಬಿದ್ದಿತ್ತು. ಅವಶೇಷಗಳಡಿ ಸಿಲುಕಿ ತೀವ್ರ ಗಾಯಗೊಂಡಿದ್ದ ಗದಿಗೆಪ್ಪ ಅವರನ್ನು ಸ್ಥಳೀಯರೇ ಜಿಲ್ಲಾಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಗದಿಗೆಪ್ಪ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು ಎಂದು ಮಾಹಿತಿ ನೀಡಿದರು.

**5 ಲಕ್ಷ ಪರಿಹಾರದ ಆದೇಶ ಪ್ರತಿ:** ಗೋಡೆ ಕುಸಿದು ಮೃತಪಟ್ಟ ಗದಿಗೆಪ್ಪ ಅವರ ಅವಲಂಬಿತರಿಗೆ 5 ಲಕ್ಷ ಪರಿಹಾರ ಘೋಷಿಸಲಾಗಿದ್ದು, ಇದರ ಆದೇಶ ಪ್ರತಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ವಿತರಿಸಿದರು. ಪ್ರತಿ ವಿತರಿಸಿ ಮಾತನಾಡಿದ ಸಚಿವ, ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುತ್ತಿದೆ. ಶಿಥಿಲಾವಸ್ಥೆಯಲ್ಲಿರುವ ಮನೆಗಳಲ್ಲಿ ವಾಸಿಸುವ ಜನರು ಜಾಗೃತಿಯಿಂದ ಇರಬೇಕು ಎಂದರು.

# ಈಡೇರದ ಮಹದಾಯಿ: ರೈತರ ಬೇಸರ

• ಉದಯವಾಹಿನಿ, ನರಗುಂದ

ರೈತರ ಬೇಡಿಕೆಗಳು ಹಲವು ವರ್ಷಗಳಿಂದ ಈಡೇರದ ಮಧ್ಯೆಯೂ ಈ ವರ್ಷದ ಹುತಾತ್ಮ ರೈತ ದಿನಾಚರಣೆಯನ್ನು ಜುಲೈ 21ರಂದು ಆಚರಿಸಲು ರೈತ ಸಂಘಟನೆಗಳು ಮುಂದಾಗಿದ್ದು, ಸಂಘಟನೆಗಳಲ್ಲಿನ ಒಡಕು ನಿಜವಾದ ರೈತರಿಗೆ ಬೇಸರ ತರಿಸಿದೆ.

**ರೈತ ಬಂಡಾಯ ಹಿನ್ನೆಲೆ:** ಬಂಡಾಯ ಶಬ್ದ ಕೇಳಿದಾಗೆಲ್ಲಾ ನರಗುಂದ ಹೆಸರು ಥಟ್ ಅಂತ ಮನಸ್ಸಿಗೆ ಬರುತ್ತದೆ. ಇದಕ್ಕೆ ಕಾರಣ 1858ರಲ್ಲಿ ನಡೆದ ಭಾಸ್ಕರರಾವ್ ಭಾವೆಯವರ ಬ್ರಿಟಿಷರ ವಿರುದ್ಧದ ಬಂಡಾಯ, 1980ರಲ್ಲಿ ನಡೆದ ರೈತ ಬಂಡಾಯ. ಅದರಲ್ಲೂ 1980 ಜುಲೈ 21ರಂದು ನಡೆದ ರೈತ ಬಂಡಾಯ ದೇಶವೇ ನರಗುಂದದತ್ತ ನೋಡುವಂತಾಯಿತು. ಕರ್ನಾಟಕದಾದ್ಯಂತ ರೈತ ಚಳವಳಿಗಳಿಗೆ ನಾಂದಿ ಹಾಡಿತು.

**ರೈತ ಬಂಡಾಯಕ್ಕೆ 45 ವರ್ಷ:** ಅವಿಭಜಿತ ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳ ಮಲಪ್ರಭೆ ಅಚ್ಚುಕಟ್ಟು ಪ್ರದೇಶದ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯಕ್ಕಾಗಿ ಮಲಪ್ರಭಾ ನದಿಗೆ ಸವದತ್ತಿ ಬಳಿಯ ನವಿಲುತೀರ್ಥದಲ್ಲಿ ಆಣೆಕಟ್ಟು ನಿರ್ಮಾಣವಾಯಿತು.



ಆದರೆ, ಪ್ರತಿಯಾಗಿ ರೈತರ ಮೇಲೆ ಸರ್ಕಾರ ಅಭಿವೃದ್ಧಿ ಕರ ವಿಧಿಸಿದ್ದು, ಕಾಲುವೆಗಳಿಗೆ ನೀರು ಹರಿಯದಿದ್ದರೂ ಕರ ತುಂಬಬೇಕಿತ್ತು. ಭರಿಸದಿದ್ದಾಗ ರೈತರ ಪಹಣಿ ಪತ್ರಿಕೆ ಮೇಲೆ ಸರ್ಕಾರಿ ಎಂದು ನಮೂದಿಸಿತು.

**ಸ್ಮಾರಕ ನಿರ್ಮಾಣವಾದೀತೆ ?:** 45ವರ್ಷವಾದರೂ ದಿ.ವೀರಪ್ಪ ಕಡ್ಲಿಕೊಪ್ಪರ ವೀರಗಲ್ಲು ಖಾಸಗಿಯವರ ಜಾಗೆಯಲ್ಲಿಯೇ ಇದೆ. ಅವರ ಹೆಸರಲ್ಲಿ ಇಲ್ಲಿಯವರೆಗೂ ಒಂದು ಸ್ಮಾರಕವಿಲ್ಲ. ಆದರೆ, ಕರ್ನಾಟಕ ರೈತ ಸೇನೆ, ರೈತ ಸಂಘ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಒತ್ತಡ ತಂದಿದ್ದು ಸಚಿವ ಎಚ್.ಕೆ.ಪಾಟೀಲ ಭೂಮಿಪೂಜೆ ನೆರವೇರಿಸಲಿದ್ದಾರೆ.

**ರೈತ ಸಂಘಟನೆ ಕಿಚ್ಚು**

ರೈತ ಬಂಡಾಯದ ಪರಿಣಾಮ ಕರ್ನಾಟಕದಲ್ಲಿ ರೈತ ಹೋರಾಟ, ರೈತ ಸಂಘ ಉಗಮವಾಗಲು ಕಾರಣವಾಯಿತು. ರೈತ ಬಂಡಾಯ ಅನೇಕ ದಾಖಲೆಗಳಿಗೆ ಸಾಕ್ಷಿಯಾಯಿತು. ಅನೇಕ ರೈತ ಸಂಘಗಳು, ಸಮಿತಿಗಳು ಹುಟ್ಟಿಕೊಂಡು ಹೋರಾಟ ನಡೆಸುತ್ತಲಿವೆ. ಆದರೆ, ಈ ಭಾಗದ ರೈತರ ಕನಸು ನನಸಾಗುತ್ತಿಲ್ಲ. ಕಳಸಾ ಬಂಡೂರಿ, ಮಹದಾಯಿ ಹೋರಾಟ ನಡೆಯುತ್ತಲೇ ಇದೆ. ಸಮಸ್ಯೆ ಬಗೆಹರಿಯದ ಕಾರಣ ಮತ್ತೊಮ್ಮೆ ಬಂಡಾಯ ನಡೆಯಬೇಕೆಂಬ ಧ್ವನಿ ಮೂಡುತ್ತಿದ್ದು, ಇದುವರೆಗೂ ಮಹದಾಯಿ ಅನುಷ್ಠಾನ ಗೊಳ್ಳುತ್ತಿಲ್ಲ.

## 25 ವರ್ಷದ ಮಹಿಳೆಗೆ ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬುದು ಆರೋಪ

# ಪ್ರಭು ಚೌಹಾಣ್ ಪುತ್ರನ ವಿರುದ್ಧ ಎಫ್ಐಆರ್ ದಾಖಲು

• ಉದಯವಾಹಿನಿ, ಬೀದರ್

ಬಿಜೆಪಿ ಶಾಸಕ ಪ್ರಭು ಚೌಹಾಣ್ ಅವರ ಪುತ್ರ ಪ್ರತೀಕ್‌ಚೌಹಾಣ್ ವಿರುದ್ಧ ಬೀದರ್ ಮಹಿಳಾ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರದ ಪ್ರಕರಣ ದಾಖಲಾಗಿದೆ. 25 ವರ್ಷದ ಮಹಿಳೆಗೆ ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬುದು ಆರೋಪ ಮಾಡಲಾಗಿದೆ. ಮಹಾರಾಷ್ಟ್ರ ಮೂಲದ ಮಹಿಳೆಯು ದೂರು ದಾಖಲಿಸಿದ್ದಾರೆ. 2023ರ ಡಿಸೆಂಬರ್‌ನಿಂದ 2024ರ ಮಾರ್ಚ್ ವರೆಗೆ ಹಲವು ಬಾರಿ ಅತ್ಯಾಚಾರ ಎಸಗಿದ್ದಾರೆ ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಇನ್ನು ಎಫ್ಐಆರ್ ಪ್ರಕಾರ, ಎರಡು ವರ್ಷಗಳ ಹಿಂದೆ ಪ್ರತೀಕ್ ಚೌಹಾಣ್, ಮಹಿಳೆ ಪ್ರೀತಿ ಮಾಡಿದ್ದಾರೆ. ಮದುವೆಯಾಗುವುದಾಗಿ ಪ್ರತೀಕ್ ಭರವಸೆ ನೀಡಿದ್ದ. ಆ ಭರವಸೆಯ ಮೇರೆಗೆ ಆಕೆ ಆತನೊಂದಿಗೆ ಹಲವು ಸ್ಥಳಗಳಿಗೆ ಹೋಗಿದ್ದಳು. ಈ ವೇಳೆ ಆತ ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಹೇಳಲಾಗಿದೆ. ಮೊದಲ ಅತ್ಯಾಚಾರ ಬೆಂಗಳೂರಿನ ಹೋಟೆಲ್ ರೂಮ್‌ನಲ್ಲಿ ಸೆಪ್ಟೆಂಬರ್ 2023ರಲ್ಲಿ ನಡೆಯಿತು ಎಂದು ಮಹಿಳೆ ಆರೋಪಿಸಿದ್ದಾರೆ. ಡಿಸೆಂಬರ್ 25, 2023ರಂದು

**ಠಾಣೆಗೆ ಹೋದರೆ ದೂರು ಸ್ವೀಕರಿಸಿಲ್ಲ**


ಉದಯವಾಹಿನಿ ಚಿತ್ರ

ಚೌಹಾಣ್ ಅವರ ಕುಟುಂಬದ ನಿವಾಸದಲ್ಲಿ ನಿಶ್ಚಿತಾರ್ಥ ಸಮಾರಂಭ ನಡೆಯಿತು. ಎರಡೂ ಕುಟುಂಬಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮ ಜರುಗಿತು. ಆ ನಂತರ ಮದುವೆಯ ದಿನಾಂಕವನ್ನು ನಿಗದಿಪಡಿಸುವಂತೆ ಸಂತ್ರಸ್ತೆ ಮತ್ತು ಆಕೆಯ ಕುಟುಂಬದವರು ಪದೇ ಪದೇ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಬದಲಿಗೆ, ಲಾತೂರ್, ಶಿರಡಿಗೆ ಧಾರ್ಮಿಕ ಭೇಟಿಗಳ ನೆಪದಲ್ಲಿ ಕರೆದೊಯ್ದು ಮತ್ತೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಸಂತ್ರಸ್ತ ಯುವತಿ ಹೇಳಿದ್ದಾಳೆ. ಪ್ರತೀಕ್ ಚೌಹಾಣ ಎಂಬಾತನು ನನಗೆ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡಿದ್ದಾರೆಂದು ದೂರಿದ್ದಾರೆ. ನನ್ನ ಪಾಲಕರು ಮದುವೆ ಸಂಬಂಧ ಮಾತನಾಡಲು ಹೋಧಿದಾಗ ಆಧಿತಧಿನ ಕುಟುಂಬದವರು ಜಗಳವಾಡಿದ್ದಾರೆ. ಈ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ಹೋದರೆ ದೂರು ಸ್ವೀಕರಿಸಿಲ್ಲವೆಂದು ದೂರಿದ್ದಾರೆ ಎಂದು ಗೊತ್ತಾಗಿದೆ. ಯುವತಿ ತಂದೆ, ಸಹೋದರ ಜತೆಗಿದ್ದರು.

**ಬ್ಲೇಡ್‌ನಿಂದ ಕೈಗೆ ಗಾಯ ಮಾಡಿ ಹಲ್ಲೆ**

ಚೌಹಾಣ್ ತನ್ನ ಪ್ರೀತಿಯನ್ನು ಸಾಬೀತುಪಡಿಸಲು ಸ್ವಯಂ ಹಾನಿ ಮಾಡಿಕೊಳ್ಳುವಂತೆ ಒತ್ತಾಯಿಸಿದನು. ಆಕೆ ಹಿಂಜರಿದಾಗ, ಬ್ಲೇಡ್‌ನಿಂದ ಆಕೆಯ ಕೈಗೆ ಆಳವಾದ ಗಾಯ ಮಾಡಿದನು. ಗಾಯಕ್ಕೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಜುಲೈ 5, 2025ರಂದು ಮಹಿಳೆಯ ಕುಟುಂಬ ಮದುವೆಯ ದಿನಾಂಕವನ್ನು ಕೇಳಲು ಆರೋಪಿಯ ಮನೆಗೆ ಭೇಟಿ ನೀಡಿತು. ಆಗ ಚೌಹಾಣ್ ಮತ್ತು ಆತನ ತಂದೆಯು ನೀವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

**ಎಸ್‌ಪಿ ಕಚೇರಿಗೆ ಭೇಟಿಯಾಗಿ ಮಾಹಿತಿ**

ಔರಾದ್ ಶಾಸಕ ಪ್ರಭು ಚವ್ಹಾಣ ಪುತ್ರನ ವಿರುದ್ಧ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ ಮಹಾರಾಷ್ಟ್ರ ಮೂಲದ ಯುವತಿ ಮತ್ತು ಆಕೆಯ ಕುಟುಂಬದ ಸದಸ್ಯರು ಭಾನುವಾರ ನಗರದ ಎಸ್ಪಿ ಕಚೇರಿಗೆ ಭೇಟಿ ನೀಡಿದರು. ಬೆಂಗಳೂರಿನಲ್ಲಿ ಮಹಿಳಾ ಆಯೋಗಕ್ಕೆ ದೂರು ನೀಡಿದ ನಂತರ ಯುವತಿ ಇಂದು ಬೆಳಗ್ಗೆ ನೇರವಾಗಿ ಎಸ್ಪಿ ಪ್ರದೀಪ ಗುಂಟಿ ಅವರಿಗೆ ಭೇಟಿಯಾಗಿ ದೌರ್ಜನ್ಯ ಕುರಿತು ಮಾಹಿತಿ ನೀಡಿದ್ದಾರೆ. ಸುಮಾರು ಒಂದು ಗಂಟೆ ಗಳ ಕಾಲ ಸುದೀರ್ಘವಾಗಿ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

## ಮಿನಿ ನ್ಯೂಸ್

### ಫೀಜಿಯೋಥೆರಪಿಸ್ಟ್ ನೇಮಕಾತಿ : ಅರ್ಜಿ ಆಹ್ವಾನ

• ಉದಯವಾಹಿನಿ, ಚಿತ್ರದುರ್ಗ

ಸಮನ್ವಯ ಶಿಕ್ಷಣ ಯೋಜನೆಯಾಡಿಯಲ್ಲಿ ಗೃಹಧಾರಿತ ಶಿಕ್ಷಣ ಮತ್ತು ಶಾಲಾಧಾರಿತ ಶಿಕ್ಷಣ ಪಡೆಯುತ್ತಿರುವ 52 ಮಕ್ಕಳಿಗೆ ಚಿತ್ರದುರ್ಗ ತಾಲ್ಲೂಕು ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಈ ಮಕ್ಕಳಿಗೆ ವಾರದಲ್ಲಿ ಮೂರು ದಿನ ಫೀಜಿಯೋಥೆರಪಿ ಸೇವೆಯನ್ನು ಪೂರೈಸಲು ಅರ್ಹ ವಿದ್ಯಾರ್ಹತೆ (ಡಿ.ಪಿ.ಟಿಬಿ.ಪಿ.ಟಿ) ಹೊಂದಿರುವ ವ್ಯಕ್ತಿಗಳಿಂದ ತಾತ್ಕಾಲಿಕವಾಗಿ ನೇಮಕಾತಿ ಮಾಡಿಳ್ಳುವ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಹತೆ, ತತ್ಸಬಂಧ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಇದೇ ಜುಲೈ 28ರೊಳಗೆ ತಮ್ಮ ಪೂರ್ಣ ಮಾಹಿತಿಯೊಂದಿಗೆ ಚಿತ್ರದುರ್ಗ ಬಿಆರ್‌ಸಿ ಅವರಿಗೆ ಮಾಹಿತಿ ನೀಡಬೇಕು ಎಂದು ಚಿತ್ರದುರ್ಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

### ವಿಪಕ್ಷಗಳ ಅಪಪ್ರಚಾರಕ್ಕೆ ಅಭಿವೃದ್ಧಿ ಮೂಲಕ ಉತ್ತರ: ಎಚ್.ವೈ.ಮೇಟಿ

• ಉದಯವಾಹಿನಿ, ರಾಂಪುರ

ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ವಿಪಕ್ಷಗಳ ಆರೋಪಕ್ಕೆ ತಕ್ಕ ಉತ್ತರ ನೀಡಲಿದೆ ಎಂದು ಬಾಗಲಕೋಟೆ ಶಾಸಕ ಎಚ್.ವೈ.ಮೇಟಿ ಹೇಳಿದರು. ಎನ್.ಎಚ್ 367ರ ಬಾಗಲಕೋಟೆ-ಆಲಮಟ್ಟಿ ರಸ್ತೆಯಲ್ಲಿ ಅಚನೂರ ಕ್ರಾಸ್ ನಿಂದ ಆಲಮಟ್ಟಿ ಡ್ಯಾಮ್ ವರೆಗಿನ 16.15 ಕಿ.ಮೀ ರಸ್ತೆ ಅಭಿವೃದ್ಧಿಗೊಳಿಸುವ 27.70 ಕೋಟಿ ರೂ.ಗಳ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಬಹಳ ದಿನಗಳಿಂದ ಆಲಮಟ್ಟಿ ರಸ್ತೆ ಹಾಳಾಗಿ ಪ್ರಯಾಣಿಕರು, ವಾಹನ ಸವಾರರಿಗೆ ತೊಂದರೆಯಾಗಿತ್ತು.

ಈಗ ಕಾಮಗಾರಿ ಪ್ರಾರಂಭವಾಗುತ್ತದೆ ಎಂದ ಶಾಸಕರು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಮಾಡಬೇಕು. ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಸುರೇಶ ಹಳ್ಳಿ ಮಾತನಾಡಿ, ಅಚನೂರ ಕ್ರಾಸ್ ನಿಂದ ನಡೆಯಲಿರುವ ರಸ್ತೆ ಕಾಮಗಾರಿ ಸಂದರ್ಭದಲ್ಲಿ 5 ಮೀಟರ್ ರಸ್ತೆಯನ್ನು 7 ಮೀಟರಿಗೆ ಅಗಲೀಕರಣಗೊಳಿಸಲಾಗುವುದು. ಇದಕ್ಕೆ ಸಾರ್ವಜನಿಕರು ಮತ್ತು ಸ್ಥಳೀಯ ಮುಖಂಡರ ಸಹಕಾರ ಅಗತ್ಯ ಎಂದು ಹೇಳಿದರು.

### ಕಡಿಮೆ ಗೊಬ್ಬರ ಪೂರೈಕೆ: ಆಕ್ರೋಶ

• ಉದಯವಾಹಿನಿ, ಮುಂಡರಗಿ

ಯುರಿಯಾ ಗೊಬ್ಬರ ರೈತರ ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸಿ ರೈತರು ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಪಟ್ಟಣದ ಕೊಂಬಳಿ ಕೃಷಿ ಪರಿಕರಗಳ ಮಾರಾಟ ಮಳಿಗೆಗೆ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಗೊಬ್ಬರ ಬಂದಿರುವುದನ್ನು ತಿಳಿದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಾಲ್ಲೂಕಿನ ರೈತರಿಗೆ ಮುಂಗಾರು ಹಂಗಾಮಿನಲ್ಲಿ 270ಟನ್ ಯುರಿಯಾ ಗೊಬ್ಬರ ಬರಬೇಕಿತ್ತು. ಆದರೆ, ಕೇವಲ 70ಟನ್ ಗೊಬ್ಬರ ಮಾತ್ರ ಪೂರೈಕೆಯಾಗಿದೆ. ತಾಲ್ಲೂಕಿನಾದ್ಯಂತ ಉತ್ತಮ ಮಳೆ ಸುರಿಯುತ್ತಿದ್ದು, ಸರ್ಕಾರ ರೈತರ ಅಗತ್ಯಕ್ಕೆ ತಕ್ಕಷ್ಟು ಗೊಬ್ಬರ ಪೂರೈಸಬೇಕು ಎಂದು ರೈತರು ಆಗ್ರಹಿಸಿದರು. ಬೆಳೆಗಳಿಗೆ ಯುರಿಯಾ ಗೊಬ್ಬರ ಅವಶ್ಯಕವಾಗಿದೆ. ಸರ್ಕಾರ ರೈತರ ಅಗತ್ಯಕ್ಕೆ ತಕ್ಕಷ್ಟು ಯುರಿಯಾ ಗೊಬ್ಬರ ಪೂರೈಸಬೇಕು.

> ಸರ್ಕಾರ ಈಗ ನ್ಯಾನೋ ಯುರಿಯಾ ಗೊಬ್ಬರ ಪರಿಚಯಿಸಿದೆ. ಯುರಿಯಾ ರಸಗೊಬ್ಬರದ ಬದಲು ರೈತರು ನ್ಯಾನೊ ಯುರಿಯಾ ಬಳಸಬೇಕು. ಇದರಿಂದ ಖರ್ಚು ಕಡಿಮೆಯಾಗಿ ಅಧಿಕ ಇಳುವರಿ ಪಡೆದುಕೊಳ್ಳಬಹುದು.
>
> -ಪ್ರಾಣೇಶ ಸಹಾಯಕ ಕೃಷಿ ನಿರ್ದೇಶಕ ಮುಂಡರಗಿ

ಇಲ್ಲದಿದ್ದರೆ ಬೆಳೆಗಳು ಹಾಳಾಗುತ್ತವೆ ಎಂದು ರಾಜ್ಯ ರೈತ ಸಂಘದ ಕಾರ್ಯದರ್ಶಿ ಶಿವಾನಂದ ಇಟಗಿ ಒತ್ತಾಯಿಸಿದರು. ಗೊಬ್ಬರಕ್ಕೆ ಬೇಡಿಕೆ ಹೆಚ್ಚಾಗಿದ್ದು, 170ಟನ್ ಯುರಿಯಾ ಬಂದಿದ್ದು, ಸೋಮವಾರ 100ಟನ್ ಗೊಬ್ಬರ ಬರಲಿದೆ. ಮೂರು ದಿನಗಳ ಬಳಿಕ ಪುನಃ 300ಟನ್ ಗೊಬ್ಬರ ಬರಲಿದೆ. ಎಲ್ಲಾ ರೈತರಿಗೂ ಸಾಕಷ್ಟು ಗೊಬ್ಬರ ದೊರೆಯಲಿದ್ದು, ರೈತರು ಆತಂಕಕ್ಕೆ ಒಳಗಾಗಬೇಕಿಲ್ಲ ಎಂದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಪ್ರಾಣೇಶ ತಿಳಿಸಿದರು.

### ಕಾಮಗಾರಿಗೆ ತಂದಿಟ್ಟಿದ ಪೈಪ್ ಕಳವು ಮಾಡಿದ ಮೂವರ ಬಂಧನ

• ಉದಯವಾಹಿನಿ, ಕಡೂರು

ತಾಲ್ಲೂಕಿನ ಸಿಂಗಟಗೆರೆ ಸಮೀಪದ 9ನೇ ಮೈಲಿಕಲ್ಲು ಸಮೀಪದಲ್ಲಿ ಪೈಪ್ ಲೈನ್ ಕಾಮಗಾರಿ ಜಾಗದಲ್ಲಿದ್ದ 40ಸಾವಿರ ಮೌಲ್ಯದ 400 ಮೀಟರ್ ಪೈಪ್ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಸಿಂಗಟಗೆರೆ ಪೊಲೀಸರು ಬಂಧಿಸಿ, ಪೈಪ್ ಅನ್ನು ವಶಪಡಿಸಿಕೊಂಡಿದ್ದಾರೆ. ತುಮಕೂರು ನಗರದ ಬೋವಿ ಕಾಲೋನಿಯ ವೆಂಕಟೇಶ್, ಗಿರೀಶ್ ಮತ್ತು ಮಂಜುನಾಥ್ ಬಂಧಿತ ಆರೋಪಿಗಳು. ಜುಲೈ 14ರಂದು ಪೈಪ್ ಕಳವು ಮಾಡಿದ್ದು, ಖಚಿತ ಮಾಹಿತಿ ಮೇರೆಗೆ ಆರೋಪಿಗಳನ್ನು ಸಿಂಗಟಗೆರೆ ಪೊಲೀಸರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

### ಮಳೆಗೆ ಕಟ್ಟಡ ಕುಸಿದು ಅಪಾರ ಹಾನಿ

• ಉದಯವಾಹಿನಿ, ಮೂಡಿಗೆರೆ

ತಾಲ್ಲೂಕಿನಾದ್ಯಂತ ಮಳೆ ಚುರುಕಾಗಿದ್ದು, ಇಡೀ ದಿನ ಬಿಡುವಿಲ್ಲದೇ ಸುರಿದು ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು. ಮಳೆಯಿಂದ ತಾಲ್ಲೂಕಿನ ಗಂಗನಮಕ್ಕಿ ಗ್ರಾಮದಲ್ಲಿ ಹಳೆಯ ಕಟ್ಟಡವೊಂದು ಕುಸಿದಿದ್ದು, ಅಪಾರ ಪ್ರಮಾಣದ ಹಾನಿ ಸಂಭವಿಸಿದೆ. ಮಂಜುನಾಥ್ ಹಾಗೂ ಗಿರೀಶ್ ಎಂಬುವರ ಒಡೆತನದಲ್ಲಿದ್ದ ಕಟ್ಟಡವು ಮಧ್ಯಾಹ್ನ 3ರ ಸುಮಾರಿಗೆ ಏಕಾಏಕಿ ಕುಸಿದು ಬಿಟ್ಟಿದ್ದು, ಕಟ್ಟಡದಲ್ಲಿದ್ದ ಅಕ್ಬಲ್ ಖಾನ್ ಎಂಬುವರಿಗೆ ಸೇರಿದ ಎಲೆಕ್ಟ್ರಿಕಲ್ ಅಂಗಡಿಯು ಸಂಪೂರ್ಣವಾಗಿ ಹಾನಿಯಾಗಿದೆ. ಕಟ್ಟಡದ ಬಳಿ ನಿಲ್ಲಿಸಿದ್ದ ಕಾರು, ಎರಡು ಬೈಕ್ ಗಳು ಕೂಡ ಜಖಂಗೊಂಡಿದ್ದು ನಷ್ಟ ಉಂಟಾಗಿದೆ. ಕಟ್ಟಡದಲ್ಲಿ ಸುಮಾರು 10 ಕ್ಕೂ ಹೆಚ್ಚು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಘಟನೆ ಸಂಭವಿಸುವ ವೇಳೆ ಊಟಕ್ಕಾಗಿ ಹೊರ ಹೋಗಿದ್ದರಿಂದ ಜೀವ ಹಾನಿ ತಪ್ಪಿದಂತಾಗಿದೆ. ಮಳೆಯಿಂದ ಗೆಂಡೆಹಳ್ಳಿ ಬೇಲೂರು ರಸ್ತೆಯಲ್ಲಿ ಮರಬಿದ್ದು ಸಂಚಾರಕ್ಕೆ ಅಡ್ಡಿಯಾಗಿದ್ದು, ಸ್ಥಳೀಯರು ಮರವನ್ನು ತೆರವುಗೊಳಿಸಿದ ಬಳಿಕ ಸಂಚಾರ ಸುಗಮವಾಗಿತ್ತು. ಮಳೆಯ ನಡುವೆಯೇ ತಾಲ್ಲೂಕಿಗೆ ಭಾನುವಾರ ಪ್ರವಾಸಿಗರ ದಂಡು ಹರಿದು ಬಂದಿದ್ದು, ಭೈರಾಪುರ, ದೇವರಮನೆ, ರಾಣಿಝರಿ ಪ್ರದೇಶಗಳಲ್ಲಿ ಪ್ರವಾಸಿಗರಿಂದ ವಾಹನ ದಟ್ಟಣೆ ಉಂಟಾಗಿತ್ತು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಬೆಳಿಗ್ಗೆ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಕಳೆದ ಉದ್ಯಮಗಳ ಯಶಸ್ಸು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ನೀವು ಬಾಕಿಯಿರುವ ಎಲ್ಲಾ ಕುಟುಂಬದ ಸಾಲಗಳನ್ನು ತೀರಿಸಲು ಸಾಧ್ಯವಾಗುತ್ತದೆ.

**ವೃಷಭ** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

**ಮಿಥುನ** ನೀವು ಚೈತನ್ಯದಿಂದ ತುಂಬಿರುತ್ತೀರಿ, ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ, ಪೋಷಕರೊಂದಿಗೆ ಮಾತನಾಡಿ.

**ಕರ್ಕಾಟಕ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣ ಗಳಿಸುವಿರಿ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು.

**ಸಿಂಹ** ನಿಮ್ಮ ದಿಟ್ಟ, ನಿರ್ಭಯ ಅಭಿಪ್ರಾಯಗಳು ನಿಮ್ಮ ಸ್ನೇಹಿತನ ಅತ್ಮಗೌರವವನ್ನು ಹಾನಿ ಮಾಡಬಹುದು. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ನಿಮ್ಮ ಬಿಡುವಿನ ವೇಳೆಯನ್ನು ನಿಮ್ಮ ಮನೆಯ ಸೌಂದರ್ಯ ಹೆಚ್ಚಿಸಲು ಬಳಸಿ. ನೀವು ಕುಟುಂಬಕ್ಕೆ ಇದರಿಂದ ಸಂತೋಷವಾಗುತ್ತದೆ. ಯಾರೂ ನಿಮ್ಮ ಪ್ರೀತಿಯನ್ನು ಬೇರ್ಪಡಿಸಲಾಗದು.

**ಕನ್ಯಾ** ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು.

**ತುಲಾ** ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ಕಳೆದ ದಿನಗಳನ್ನು ಹೋಲಿಸಿದರೆ ಇಂದು ಆರ್ಥಿಕ ಉತ್ತಮವಾಗಲಿದೆ, ನೀವು ಹೆಚ್ಚಿನ ಹಣವನ್ನು ಪಡೆಯುತ್ತೀರಿ . ಕೌಟುಂಬಿಕ ಅಗತ್ಯಗಳಿಗೆ ತಕ್ಷಣದ ಗಮನ ನೀಡಬೇಕು.

**ವೃಶ್ಚಿಕ** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ, ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದಿನವರೆಗೂ ಅಗತ್ಯವಿಲ್ಲದೆ ಹಣ ಖರ್ಚುಮಾಡುತ್ತಿದ್ದ ಜನರು, ಇಂದು ಅವರು ತನ್ನನ್ನು ನಿಯಂತ್ರಿಸಬೇಕು, ಹಣಉಳಿಸಬೇಕು. ಅಂಚೆಯ ಮೂಲಕ ಬಂದ ಪತ್ರ ಸಂತೋಷದ ಸುದ್ದಿ ತರುತ್ತದೆ.

**ಧನಸ್ಸು** ಮಕ್ಕಳ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳುವುದಿಲ್ಲ, ಇದು ನಿಮಗೆ ಕೋಪ ತರುತ್ತದೆ. ಅನಿಯಂತ್ರಿತ ಕೋಪ ಸಾಮಾನ್ಯವಾಗಿ ಎಲ್ಲರನ್ನೂ, ವಿಶೇಷವಾಗಿ ಕೋಪಗೊಂಡವರನ್ನು ಹೆಚ್ಚು ಘಾಸಿಗೊಳಿಸುತ್ತದೆ. ಏಕೆಂದರೆ ಇದು ಶಕ್ತಿಯನ್ನು ಕುಂಠಿತಗೊಳಿಸುತ್ತದೆ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಕಡಿಮೆಯಾಗಿಸುತ್ತದೆ.

**ಮಕರ** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ತ್ಯರಾಗಿರುತ್ತೀರಿ. ಸಾಮಾಜಿಕ ಸಮಾರಂಭಗಳು ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ.

**ಕುಂಭ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ಮನೆಯಲ್ಲಿನ ಹಬ್ಬದ ವಾತಾವರಣ ನಿಮ್ಮ ಉದ್ವೇಗವನ್ನು ಶಮನಗೊಳಿಸುತ್ತದೆ. ನೀವು ಇದರಲ್ಲಿ ಭಾಗವಹಿಸುತ್ತೀರಿ.

**ಮೀನ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು , ಅವರು ಬರುವುದರಿಂದಾಗಿ ನೀವು ಬರುವ ತಿಂಗಳಿಗೆ ಮುಂದೂಡಲಾಯಿಸಿರುವ ಮನೆಯ ಆ ವಸ್ತುಗಳ ಮೇಲು ಖರ್ಚು ಮಾಡಬಹುದು .

# ದಲಿತ ಸಂಘಟನೆಗಳಿಂದ ಪುರಸಭೆ ಅಧ್ಯಕ್ಷರ ವಿರುದ್ಧ ತಮಟೆ ಚಳವಳಿ

## 5 ಲಕ್ಷ ಬೇಡಿಕೆ ಆರೋಪ ಸಾಬೀತುಪಡಿಸಿ, ರಾಜೀನಾಮೆ ನೀಡಿ: ಹರೀಶ ನಾಟಿಕಾರ

• **ಉದಯವಾಹಿನಿ, ಮುದ್ದೇಬಿಹಾಳ**

ಪಟ್ಟಣದ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ ಅವರು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಹರೀಶ ನಾಟಿಕಾರ ವಿರುದ್ಧ ಗ್ರಾಮ ದೇವತೆ ಜಾತ್ರಾ ಸಮಿತಿಯಿಂದ ಐದು ಲಕ್ಷ ಹಣ ಬೇಡಿಕೆ ಇಟ್ಟಿದ್ದಾರೆ ಎಂಬ ಸುಳ್ಳು ಆರೋಪ ಮಾಡಿದ್ದಾರೆಂದು. ಇದರ ವಿರೋಧವಾಗಿ ವಿವಿಧ ದಲಿತಪರ ಸಂಘಟನೆಗಳ ಒಕ್ಕೂಟ ಸೋಮವಾರ ತಾಪಂ ಕಚೇರಿ ಆವರಣದಿಂದ ಪುರಸಭೆ ಕಚೇರಿವರೆಗೆ ಅರೆ ಬೆತ್ತಲೆಯಾಗಿ ತಮಟೆ ಚಳವಳಿ ನಡೆಸಿ ಪ್ರತಿಭಟನೆ ನಡೆಸಿದರು . ಈ ಸಂದರ್ಭದಲ್ಲಿ ಮಾತನಾಡಿದ ಹರೀಶ ನಾಟಿಕಾರ, ನನ್ನ 35 ವರ್ಷದ ಹೋರಾಟದ ಬದುಕಿನಲ್ಲಿ ನಾನು ಯಾವತ್ತೂ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ಪುರಸಭೆ ಅಧ್ಯಕ್ಷರ ಆರೋಪ ನಿಷ್ಪಕ್ಷಪಾತ ತನಿಖೆಗೆ ಒಳಪಡಬೇಕು, ಅವರು ತಕ್ಷಣ ಪದವಿ ತ್ಯಜಿಸಬೇಕು. ಸುಳ್ಳು ಆರೋಪಗಳಿಂದ ನನ್ನ ತೇಜೋವಧೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ಇಂದಿರಾ ನಗರದಲ್ಲಿನ ದಲಿತರ ಶೆಡ್ ತೆರವು ಮಾಡುವ ಮೂಲಕ ದೌರ್ಜನ್ಯ ಎಸಗಿರುವುದನ್ನೂ ಅವರು ಖಂಡಿಸಿದರು.

**ದಲಿತರ ಶೆಡ್ ತೆರವು**



ಉದಯವಾಹಿನಿ ಚಿತ್ರ

> ನ್ಯಾಯಾಂಗ ನಿಂದನೆ ಸೇರಿದಂತೆ ಅನೇಕ ಕೇಸ್‌ಗಳಲ್ಲಿ ಗೊಳಸಂಗಿ ಹೆಸರು ಮಹಿಬೂಬ ಗೊಳಸಂಗಿ ಅವರ ಮೇಲೆ ಈಗಾಗಲೇ ಹಲವು ಪ್ರಕರಣಗಳು ದಾಖಲಾಗಿವೆ. ನ್ಯಾಯಾಂಗ ನಿಂದನೆ ಕೇಸ್ ಕೂಡ ಇದೆ. ಪೌರ ಕಾರ್ಮಿಕರಿಗೆ ಜಾತಿಯ ಆಧಾರದ ಮೇಲೆ ಕಿರುಕುಳ ನೀಡುತ್ತಿರುವ ಬಗ್ಗೆ ಪರಿಶೀಲನೆ ಅಗತ್ಯವಿದೆ.
>
> – ಹರೀಶ ನಾಟಿಕಾರ
> ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ

**ಇದು ಕೇವಲ ಮೊದಲ ಹಂತದ ಹೋರಾಟ;** ಮುಂದಿನ ಹಂತವು ಉಗ್ರವಾಗಲಿದೆ ಎಂದು ಎಚ್ಚರಿಕೆ ನೀಡಿದರು. ಮನವಿ ಪತ್ರವನ್ನು ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಅವರಿಗೆ ನೀಡಲಾಯಿತು. ಪ್ರತಿಭಟನೆಯಲ್ಲಿ ಮಹಾಂತೇಶ ಬಾಗಲಕೋಟ, ಬಸವರಾಜ ಸರೂರ, ಪ್ರಶಾಂತ ಕಾಳೆ, ಮುತ್ತು ಚಲವಾದಿ, ಶಂಕರ ಅಜಮನಿ,ಬಸವರಾಜ ಚಲವಾದಿ,ಆನಂದ ಹೂಸಮನಿ, ಬಲಭೀಮ ನಾಯಕಮಕ್ಕಳ, ಪರಶುರಾಮ ನಾಲತವಾಡ, ಸಂಜು ಬಾಗೇವಾಡಿ, ಶರತ್ ಚೂಂಡಿ, ಸಿದ್ದು ತಳ್ಳಳ್ಳಿ, ಅಮರೇಶ ಉಪ್ಪಲದಿನ್ನಿ, ಪುನಿತ ಹಿಪ್ಪರಗಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

### ಅಂಬೇಡ್ಕರ್ ಹೆಸರಿನಲ್ಲಿ ಹಪ್ತಾ ವಸೂಲಿ ಆರೋಪ ಖಂಡನೆ

**ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರಾದ ಪ್ರಕಾಶ ಚಲವಾದಿ ಸರೂರ, ಶಿವು ಕನ್ನೊಳ್ಳಿ, ನ್ಯಾಯವಾದಿ ಆನಂದ ಮುದೂರ, ಬಾಲಚಂದ್ರ ಹುಲ್ಲೂರ, ಪರಶುರಾಮ ಬಸರಕೋಡ ಇವರುಗಳು, ಹರೀಶ ನಾಟಿಕಾರ ಅವರು ಹಣ ಬೇಡಿದ್ದಾರೆ ಎಂಬ ಪುರಸಭೆ ಅಧ್ಯಕ್ಷರ ಸುಳ್ಳು ಆರೋಪ, ದಲಿತ ಸಮುದಾಯದ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಈ ಆರೋಪಕ್ಕೆ ಪುರಸಭೆ ಅಧ್ಯಕ್ಷರು ಸಾಬೀತು ನೀಡದಿದ್ದರೆ, ಅವರ ವಿರುದ್ಧ ಕಾನೂನು ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.**

# ಶಿಕ್ಷಣ, ಆಧ್ಯಾತ್ಮ ಸಾರಿದ ಬಸವಂತರಾಯ: ಮಂಗೊಂಡ


• **ಉದಯವಾಹಿನಿ, ತಿಕೋಟಾ**

ಆಧ್ಯಾತ್ಮಕವಾಗಿ ಶಿಕ್ಷಣಕ್ಕಾಗಿ ಅತೀ ಹೆಚ್ಚು ಮಹತ್ವ ನೀಡಿದಂತ ಶ್ರೇಷ್ಠ ವ್ಯಕ್ತಿ ಬಸವಂತರಾಯ ಮಹಾರಾಜರು ಎಂದು ನಿವೃತ್ತ ಪ್ರಾಧ್ಯಾಪಕ ಎಸ್.ಎನ್. ಮಂಗೊಂಡ ಹೇಳಿದರು. ತಾಲ್ಲೂಕಿನ ಹೊನವಾಡದ ವಿದ್ಯಾವರ್ಧಕ ಸಂಘದ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಬಸವಂತರಾಯ ಮಹಾರಾಜರ 102ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತಾರುಣ್ಯದಲ್ಲಿ ಸಾಮಾಜಿಕ ಕುಂದು ಕೊರತೆಗಳ ನಿವಾರಣೆಗಾಗಿ ಬಂಡೇಳುವ ಮೌನ ಕ್ರಾಂತಿಯ ಚಟುವಟಿಕೆಗಳನ್ನು ಅವರಲ್ಲಿ ನಮ್ಮೂರ ಜನರೊಂದಿಗೆ ನಾನು ಕಂಡಿದ್ದೆ. ಎಲ್ಲಿ ಇದ್ದರೂ ಎತ್ತ ಹೋದರೂ ಪ್ರೀತಿ ವಿಶ್ವಾಸ ಅವರ ಭಾವನೆಯನ್ನು ವ್ಯಕ್ತಪಡಿಸುವ ಆದರ್ಶ ಗುಣಗಳಿಂದಾಗಿ ಬಸವಂತರಾಯರು ಜನರ ದೃಷ್ಟಿಯಲ್ಲಿ ಸಂತರೆನಿಸಿದರು, ಶರಣರಾದರು, ಮಹಾರಾಜರೆನಿಸಿದರು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್‌ನ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಜಿ. ಲಕ್ಕುಂಡಿಮಠ ಮಾತನಾಡಿ, ಮಹಾರಾಜರು ಒಬ್ಬ ಸಂಘ ಜೀವಿ ಆಗಿದ್ದರು. ತಮ್ಮ ಜೀವನದುದ್ದಕ್ಕೂ ಹಸನ್ಮುಖಿಗಳಾಗಿದ್ದರು. ಮಗುವಿನಂತ ಮನಸುಳ್ಳವರಾಗಿದ್ದರು. ಶ್ರೇಷ್ಠರು, ಕನಿಷ್ಠರು, ಸಣ್ಣವರು ದೊಡ್ಡವರು ಎಂಬ ತಾರತಮ್ಯ ಇರಲಿಲ್ಲ ಎಂದರು.

# ವಸತಿ ಶಾಲೆಗಳ 6ನೇ ತರಗತಿ ಪ್ರವೇಶಾತಿ

• **ಉದಯವಾಹಿನಿ, ಚಿತ್ರದುರ್ಗ**



ಉದಯವಾಹಿನಿ ಚಿತ್ರ

**5ನೇ ಸುತ್ತಿನ ಸೀಟು ಹಂಚಿಕೆ**

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೈಸ್ ವ್ಯಾಪ್ತಿಯ ಮೊರಾರ್ಜಿ ದೇಸಾಯಿ, ಇಂದಿರಾಗಾಂಧಿ, ಕಿತ್ತೂರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಐದನೇ ಸುತ್ತಿನ ಸೀಟುಗಳನ್ನು ಹಂಚಿಕೆ ಮಾಡಲಾಯಿತು. ಕ್ರೈಸ್ ವಸತಿ ಶಾಲೆಗಳ ಆಡಳಿತಾಧಿಕಾರಿ, ಚಿತ್ರದುರ್ಗ ಉಪವಿಭಾಗದ ಉಪವಿಭಾಗಾಧಿಕಾರಿ ಮಹೆಬೂಬ್ ಜಿಲಾನಿ ಖುರೇಷಿ ಅವರು, ವಿದ್ಯಾರ್ಥಿಗಳಿಗೆ ದಾಖಲಾತಿ ಆದೇಶದೊಂದಿಗೆ ಗುಲಾಬಿ ಹೂವು ನೀಡಿ ಶುಭ ಹಾರೈಸಿದರು. ಸರ್ಕಾರವು ಎಲ್ಲಾ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿರುವ ಎಲ್ಲಾ ವಸತಿ ಶಾಲೆಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು 6ನೇ ತರಗತಿಯಿಂದ 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಪಡೆದು, ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಜಿಲ್ಲಾ ಸಮನ್ವಯಾಧಿಕಾರಿ ಆರ್.ರಮೇಶ್, ತಾಲ್ಲೂಕು ಸಹಾಯಕ ನಿರ್ದೇಶಕರಾದ ಚನ್ನಬಸಪ್ಪ, ಮಂಜಣ್ಣ, ದೇವಲ ನಾಯಕ್, ಪ್ರಾಂಶುಪಾಲರಾದ ನಾಗರಾಜ್, ಮಹೇಶ್, ಅಂಗಡಿ ಪ್ರಕಾಶ್, ಮಂಜುನಾಥ್ ರೆಡ್ಡಿ ಸೇರಿದಂತೆ ಇತರರು ಇದ್ದರು.

# ಇ.ಡಿ ನಡೆಸಿರುವ ದಾಳಿಗಳಲ್ಲಿ ಶೇ 0.1 ರಷ್ಟೂ ಗುರಿ ಮುಟ್ಟಿಲ್ಲ: ಸಂತೋಷ್ ಲಾಡ್

• **ಉದಯವಾಹಿನಿ, ಧಾರವಾಡ**

ಜಾರಿ ನಿರ್ದೇಶನಾಲಯವು ಈವರೆಗೆ ನಾಲ್ಕು ಸಾವಿರಕ್ಕೂ ಹೆಚ್ಚು ದಾಳಿಗಳನ್ನು ನಡೆಸಿದ್ದು, ಈ ಪೈಕಿ ಶೇ 95ರಷ್ಟು ವಿರೋಧ ಪಕ್ಷಗಳವರ ಮೇಲೆ ನಡೆದಿವೆ. ಇ.ಡಿ ಯಶಸ್ಸಿನ ಪ್ರಮಾಣ ಶೇ 0.1ರಷ್ಟೂ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಪ್ರತಿಕ್ರಿಯಿಸಿದರು.

ಮುಡಾ ನಿವೇಶನ ಹಂಚಿಕೆ ವಿಚಾರದಲ್ಲಿ ಸಿ.ಎಂ ಸಿದ್ದರಾಮಯ್ಯ ಪತ್ನಿ ವಿರುದ್ಧ ತನಿಖೆ ನಡೆಸಲು ಇ.ಡಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿರುವ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾನಸಿಕವಾಗಿ ತೊಂದರೆ ಕೊಡಲಾಯಿತು.

ಬಿಜೆಪಿಯವರು ಇ.ಡಿ, ಐ.ಟಿ, 'ಫೆಮಾ' ಮೊದಲಾದವನ್ನು ಕಳೆದ 11 ವರ್ಷಗಳಿಂದ ರಾಜಕೀಯ ಲಾಭಕ್ಕೆ ಬಳಸಿಕೊಂಡಿದ್ದಾರೆ ಎಂದು ದೂರಿದರು. ಈಚೆಗೆ ಮುಂಬೈನಲ್ಲಿ ಇ.ಡಿ ಕಚೇರಿಯಲ್ಲಿ ಬೆಂಕಿ ಹೊತ್ತಿತ್ತು. 35 ಸಾವಿರ ಕೋಟಿ ವಂಚನೆ ಪ್ರಕರಣ ಎದುರಿಸುತ್ತಿದ್ದವರ ಫೈಲುಗಳು ಈ ಅವಘಡದಲ್ಲಿ ನಾಶವಾಗಿವೆ. ಐ.ಟಿ, 'ಫೆಮಾ', 'ಫೆರಾ', ಸಿಬಿಐ ದಾಳಿ ನಡೆದಿದ್ದ, ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದ ಕಾಂಗ್ರೆಸ್‌ನ ಸುಮಾರು 25 ನಾಯಕರು ಬಿಜೆಪಿ ಸೇರಿದ್ದಾರೆ. ಈಗ ಅವರ ವಿರುದ್ಧ ಕೇಸುಗಳು ಇಲ್ಲ ಎಂದು ಕುಟುಕಿದರು.

# 40 ಕ್ವಿಂಟಲ್ ಪಡಿತರ ಅಕ್ಕಿ ವಶ: ಮೂವರ ಬಂಧನ

• **ಉದಯವಾಹಿನಿ, ಶಿರಸಿ**

ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದು, ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ನರೇಬೈಲಿನ ಮಹ್ಮದ್ ಉಬೇದ ಮಹ್ಮದ್ ಸಲೀಂ ಜವಳಿ, ಇಸಳೂರಿನ ಸುನೀಲ ಮಹಾದೇವಪ್ಪ ನಡಗಿ, ಕಸ್ತೂರ ಬಾ ನಗರದ ಅಲ್ತಾಫ್ ರೆಹಮತ್ ಉಲ್ಲಾ ಬಂಧಿತರು. ಶಿರಸಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ ಮಹ್ಮದ್ ಉಬೇದ ಮಹ್ಮದ್ ಸಲೀಂ ಜವಳಿ, ಪಡಿತರ ಚೀಟಿದಾರರಿಂದ ಕಡಿಮೆ ಬೆಲೆಗೆ ಖರೀದಿಸಿದ್ದ ಒಟ್ಟು 40 ಕ್ವಿಂಟಲ್ ಅಕ್ಕಿಯನ್ನು ತಮ್ಮ ಗಿರಣಿಯಲ್ಲಿ ಇಟ್ಟಿದ್ದರು. ಅದನ್ನು ಸುನೀಲ ಮಹಾದೇವಪ್ಪ ನಡಗಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಲು ಹುಬ್ಬಳ್ಳಿಯತ್ತ ಅಲ್ತಾಫ್ ರೆಹಮತ್ ಉಲ್ಲಾ ಜತೆಗೂಡಿ ಸಾಗಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಅಂದಾಜು 1.36 ಲಕ್ಷ ಮೌಲ್ಯದ 40 ಕ್ವಿಂಟಲ್ ಪಡಿತರ ಅಕ್ಕಿ, ಸಾಗಣೆಗೆ ಬಳಸುತ್ತಿದ್ದ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

# ದಿ.ಶಾಮಣ್ಣ 02ನೇ ಪುಣ್ಯಸ್ಮರಣೆ

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ಪಾಲ್ತ್ಯ ತಾಂಡದ ಆಶ್ರಮ ಶಾಲೆಯಲ್ಲಿ ದಿ.ಶಾಮಣ್ಣ ಕೆರೋಳ್ಳಿ ಸುಮಾರು 26ವರ್ಷಗಳ ಕಾಲ ನಿಷ್ಠಾವಂತರಾಗಿ ಸೇವೆಸಲ್ಲಿಸಿ 2023 ಜುಲೈ ತಿಂಗಳಲ್ಲಿ ಅನಾರೋಗ್ಯದ ಹಿನ್ನಲೆಯಲ್ಲಿ ಮೃತಪಟ್ಟಿದ್ದು ಅವರ ಆತ್ಮಕ್ಕೆ ಶಾಂತಿಗಾಗಿ ಅವರ 02ನೇ ವರ್ಷದ ಪುಣ್ಯಸ್ಮರಣೆ ನೆನಪಿನಗೋಸ್ಕರ ಆಶ್ರಮ ಶಾಲಾಮಕ್ಕಳಿಗೆ ನೋಟ್ ಬುಕ್ ಪೆನ್ನು ಅನ್ನಸಂತರ್ಪಣೆ ಹಾಗೂ ಸಿಬ್ಬಂದಿ ವರ್ಗದವರಿಗೆ ಸೀರೆ ವಿತರಣೆ ಮಾಡಲಾಯಿತು ಎಂದು ದಿ.ಶಾಮಣ್ಣ ಪುತ್ರ ಉಲ್ಲಾಸಕುಮಾರ ಕೆರೋಳ್ಳಿ ತಿಳಿಸಿದ್ದಾರೆ. ತಾಪಂ.ನರೇಗಾ ಯೋಜನೆ ಎಡಿ ನಾಗೇಂದ್ರಪ್ಪಾ ಮಾತನಾಡಿದ ಅವರು,ದಿ. ಶಾಮಣ್ಣ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದಲ್ಲಿ ಸುಮಾರು 26ವರ್ಷಗಳ ಕಾಲ ನಿಷ್ಠಾವಂತರಾಗಿ ಸೇವೆಸಲ್ಲಿಸಿದ್ದು ಅತ್ಯಂತ ಒಳ್ಳೆಯ ಸ್ವಭಾವುಳ್ಳವರಾಗಿದರು ತಂದೆಯ ಹಾದಿಯಲ್ಲಿ ಅವರ ಮಗ ಉಲ್ಲಾಸಕುಮಾರ ಕೆರೋಳ್ಳಿ ಅವರು ತಂದೆಯ ಸವಿನೆನಪಿಗಾಗಿ ಪಾಲ್ತ್ಯ ತಾಂಡದ ಆಶ್ರಮ ಶಾಲೆಯ ಮಕ್ಕಳಿಗೆ ಮಕ್ಕಳಿಗೆ ನೋಟ್ ಬುಕ್ ಅನ್ನಸಂತರ್ಪಣೆ ಹಾಗೂ ಅಡುಗೆ ಸಿಬ್ಬಂದಿ ವರ್ಗದವರಿಗೆ ಸೀರೆ ವಿತರಿಸಿದ್ದಾರೆ. ಪ್ರತಿವರ್ಷವು ತಂದೆಯ ಪುಣ್ಯಸ್ಮರಣೆ ಅಂಗವಾಗಿ ಶಾಲಾಮಕ್ಕಳಿಗೆ ನೋಟ್ ಬುಕ್ ಪೆನ್ನು ಅನ್ನಸಂತರ್ಪಣೆ ಸೀರೆ ವಿತರಣೆ ಮಾಡಲಾಗುವುದು ಎಂದು ಹೇಳಿದ್ದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ ಎಂದರು. ಈ ಸಂದರ್ಭದಲ್ಲಿ ಆರ್.ಗಣಪತರಾವ,ಮುಖ್ಯಗುರು ಮಾರುತಿ ಚವ್ಹಾಣ,ರಾಜೇಂದ್ರ ಪ್ರಸಾದ್,ಅನೀಲಕುಮಾರ ಬಿರಾದಾರ,ಗೋಪಾಲ ಪೂಜಾರಿ,ಮೋಹನ ಚವ್ಹಾಣ,ದಿಲೀಪ ರಾಠೋಡ್,ಅನೇಕರಿದ್ದರು.



ಉದಯವಾಹಿನಿ ಚಿತ್ರ

# ಕೆಂಗಾಪುರ- ಎಕ್ಕೇಗೊಂದಿ ರಸ್ತೆ ದುರಸ್ತಿಗೆ ರೈತರ ಒತ್ತಾಯ

• **ಉದಯವಾಹಿನಿ, ಬಸವಾಪಟ್ಟಣ**

ಸಮೀಪದ ಕೆಂಗಾಪುರ– ಎಕ್ಕೇಗೊಂದಿ ರಸ್ತೆ ಸಂಪೂರ್ಣ ಹಾಳಾಗಿ 15 ವರ್ಷಗಳಾಗಿದ್ದರೂ ಯಾರೂ ಈ ರಸ್ತೆ ದುರಸ್ತಿಗೆ ಮುಂದಾಗಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಗ್ರಾಮೀಣ ರಸ್ತೆಯ ಎರಡೂ ಕಡೆಗಳಲ್ಲಿ ಸುಮಾರು 400 ಎಕರೆ ನೀರಾವರಿ ಭೂಮಿ ಇದ್ದು, ಇಲ್ಲಿ ಭತ್ತ, ಅಡಿಕೆ, ತೆಂಗು ಬೆಳೆಯಲಾಗುತ್ತಿದೆ. ಪ್ರತಿದಿನ ಕೆಸರು ತುಂಬಿದ ರಸ್ತೆಯಲ್ಲಿ ಕೃಷಿ ಕೆಲಸಕ್ಕೆ ಸಂಚರಿಸಲು ರೈತರು ಮತ್ತು ಕೂಲಿಕಾರರು ಹರಸಾಹಸ ಮಾಡಬೇಕಿದೆ. ಮಳೆಗಾಲದ ಭತ್ತದ ನಾಟಿ, ಅಡಿಕೆ ಕೊಯ್ಲು, ಕೃಷಿ ಉತ್ಪನ್ನಗಳ ಸಾಗಾಟ ನರಕ ಸದೃಶವಾಗಿದೆ. ಸಂಪೂರ್ಣ ಗುಂಡಿ ಬಿದ್ದಿರುವ ಈ ರಸ್ತೆಯಲ್ಲಿ ಟ್ರ್ಯಾಕ್ಟರ್‌ಗಳು, ದ್ವಿಚಕ್ರ, ತ್ರಿಚಕ್ರ ವಾಹನಗಳು, ಕೊಯ್ಲಿನ ಬೃಹತ್ ಯಂತ್ರಗಳು, ಲಾರಿಗಳ ಸಂಚಾರ ದುಸ್ತರವಾಗಿದೆ. ಮಾಯಕೊಂಡ ಶಾಸಕರು ಈ ರಸ್ತೆ ದುರಸ್ತಿಗೆ ಅನುದಾನ ಬಿಡುಗಡೆ ಮಾಡಿ ಉತ್ತಮ ರಸ್ತೆ ನಿರ್ಮಿಸಿ ರೈತರಿಗೆ ಸಹಾಯ ಮಾಡಬೇಕು ಎಂದು ಕೆಂಗಾಪುರದ ರೈತ ಕೆ.ಪಿ.ಓಂಕಾರ ನಾಯ್ಕ ಒತ್ತಾಯಿಸಿದ್ದಾರೆ. ವಾಹನಗಳು ಈ ರಸ್ತೆಯ ಕೆಸರಿನಲ್ಲಿ ಸಿಲುಕಿಕೊಂಡು ಮುಂದಕ್ಕೆ ಚಲಿಸಲಾರದೇ ನಡೆದುಕೊಂಡು ಹೋಗುವ ಸ್ಥಿತಿ ಉಂಟಾಗಿದೆ. ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಿರಿಯ ಅಧಿಕಾರಿಗಳಿಗೆ ಮತ್ತು ಶಾಸಕರಿಗೆ ವರದಿ ಸಲ್ಲಿಸಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಎಸ್. ಅಷ್ಟೋಜಿರಾವ್ ಮನವಿ ಮಾಡಿದ್ದಾರೆ. ಮಳೆಗಾಲದಲ್ಲಿ ಗೊಬ್ಬರ, ಬೀಜ, ನಾಟಿ ಮಾಡುವ ಸಸಿಗಳು, ಕೂಲಿಕಾರರನ್ನು ವಾಹನಗಳಲ್ಲಿ ಸಾಗಿಸಲು ರೈತರು ಪಡುತ್ತಿರುವ ಶ್ರಮವನ್ನು ಅಧಿಕಾರಿಗಳು ಇತ್ತ ಗಮನಹರಿಸಿ ದುರಸ್ತಿಗೆ ಶೀಘ್ರವೇ ಮುಂದಾಗಬೇಕು' ಎಂದು ಡಿ.ಎಸ್.ಎಸ್. ಮುಖಂಡ ಅಣ್ಣಪ್ಪ ಆಗ್ರಹಿಸಿದ್ದಾರೆ.



# ಧರ್ಮಸ್ಥಳ ಸತ್ಯಾಸತ್ಯ ಬಯಲಾಗಲಿ:ಯು ಟಿ ಖಾದರ್

• **ಉದಯವಾಹಿನಿ, ಮಂಗಳೂರು**

**ವಿಶೇಷ ತನಿಖಾ ತಂಡ**

ಧರ್ಮಸ್ಥಳ ಗ್ರಾಮದಲ್ಲಿ ಹಲವಾರು ಶವಗಳನ್ನು ಹೂತಿದ್ದೇನೆ ಎಂದು ವ್ಯಕ್ತಿಯೊಬ್ಬರು ಪೊಲೀಸರಿಗೆ ದೂರು ನೀಡಿರುವ ಪ್ರಕರಣಕ್ಕೆ ಸಂಭದಿಸಿದಂತೆ ಸರಕಾರ ವಿಶೇಷ ತನಿಖಾ ತಂಡ ರಚಿಸಿದ್ದು, ತನಿಖೆ ಮೂಲಕ ಸತ್ಯಾಸತ್ಯ ಬಯಲಾಗಲಿ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು. ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಶಿಕ್ಷೆಯಾಗಲಿ.

ಆದರೆ, ತನಿಖೆಗೆ ಪೂರ್ವದಲ್ಲೇ ಊಹಾಪೋಹ ಹಬ್ಬಿಸಿ ಸ್ವತಃ ತೀರ್ಪು ನೀಡುವವರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರವಾಗಿ ಅವರು ಪ್ರತಿಕ್ರಿಯಿಸಿದರು. ಒಂದು ಪವಿತ್ರ ಕ್ಷೇತ್ರ ಕಟ್ಟಲು ಬಹಳಷ್ಟು ಶ್ರಮವಿದೆ. ಆ ಸಂಸ್ಥೆಯಿಂದ ಹಲವರಿಗೆ ಪ್ರಯೋಜನವಾಗಿದೆ. ಇಲಾಖೆಯ ತನಿಖೆಗೆ ಎಲ್ಲರೂ ಸಹಕಾರ ಕೊಡಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಅಷ್ಟರ ತನಕ ಸಮಾಧಾನದಿಂದ ಕಾಯೋಣ. ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆಯಾಗಬಾರದು. ಕಪ್ಪು ಚುಕ್ಕೆ ತರುವುದು ಸರಿಯಲ್ಲ ಎಂದು ಅವರು ಹೇಳಿದರು.



**ಸರಕಾರದ ನಿರ್ಧಾರ ಸ್ವಾಗತಿಸಿದ ಸೌಜನ್ಯ ಪ್ರಕರಣದ ಹೋರಾಟಗಾರರು:** ಬೆಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಸುತ್ತಮುತ್ತ ನಡೆದಿವೆ ಎನ್ನಲಾದ ಅಸಹಜ ಸಾವು ಪ್ರಕರಣಗಳ ಸಮಗ್ರ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಸರಕಾರದ ಈ ಕ್ರಮವನ್ನು ಸೌಜನ್ಯ ಪ್ರಕರಣದ ತನಿಖೆಗಾಗಿ ಹೋರಾಟ ನಡೆಸುತ್ತಿದ್ದ ಸಂಘಟನೆಗಳು ಸ್ವಾಗತಿಸಿವೆ. ಈ ನಡುವೆ, ಧರ್ಮಸ್ಥಳ ಶ್ರೀಕ್ಷೇತ್ರವೂ ತನಿಖೆಯನ್ನು ಸ್ವಾಗತಿಸಿದ್ದು, ಆದಷ್ಟು ಬೇಗ ಸತ್ಯ ಹೊರಬರಲಿ ಎಂದು ಆಶಿಸಿದೆ. ಧರ್ಮಸ್ಥಳ ಗ್ರಾಮದಲ್ಲಿ ನೂರಾರು ಶವಗಳನ್ನು ತಾನು ಹೂತು ಹಾಕಿರುವುದಾಗಿ ವ್ಯಕ್ತಿಯೊಬ್ಬರು ಇತ್ತೀಚೆಗೆ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದರು ಅಲ್ಲದೆ, ಹೇಳಿಕೆ ಹಿನ್ನೆಲೆ, ದೂರು ದಾಖಲಾಗಿತ್ತು. ಧರ್ಮಸ್ಥಳ ಠಾಣೆ, ಈ ಸಂಬಂಧ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ, ದಾಖಲಾಗುವ ಇತರೆ ಎಲ್ಲಾ ಕ್ರಿಮಿನಲ್ ಪ್ರಕರಣಗಳ ತನಿಖೆಯನ್ನು ಪೊಲೀಸ್ ಮಹಾ ನಿರ್ದೇಶಕರು ಈ ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸಬೇಕು ಎಂದು ಆದೇಶ ಹೊರಡಿಸಲಾಗಿದೆ.

ಎಸ್‌ಐಟಿ, ತನಿಖೆಗೆ ಸಂಬಂಧಿಸಿದಂತೆ ಪ್ರತೀ ಹಂತದ ತನಿಖಾ ಪ್ರಗತಿಯನ್ನು ಆಗಾಗ್ಗೆ ಡಿಜಿ–ಐಜಿಪಿ ಅವರಿಗೆ ವರದಿ ಮಾಡಬೇಕು, ಶೀಘ್ರದಲ್ಲೇ ಸರ್ಕಾರಕ್ಕೆ ಒಪ್ಪಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಧರ್ಮಸ್ಥಳದಲ್ಲಿ ಶವಗಳ ವಿಲೇವಾರಿ ಪ್ರಕರಣ ಸಂಬಂಧ ಸಮಗ್ರ ತನಿಖೆಯಾಗಬೇಕೆಂದು ಹೋರಾಟಗಾರರು, ಮಹಿಳಾ ಆಯೋಗ, ಸಾರ್ವಜನಿಕರು ಹಾಗೂ ರಾಜ್ಯದೆಲ್ಲೆಡೆ ಒತ್ತಾಯ ಕೇಳಿ ಬಂದಿದ್ದರಿಂದ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ.

- **ತನಿಖೆಗೆ ಪೂರ್ವದಲ್ಲೇ ಊಹಾಪೋಹ ಹಬ್ಬಿಸಿ ಸ್ವತಃ ತೀರ್ಪು ನೀಡುವವರು ಆತ್ಮಾವಲೋಕನ ಮಾಡಿಕೊಳ್ಳಲಿ**
- **ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಶಿಕ್ಷೆಯಾಗಲಿ.**
- **ಒಂದು ಪವಿತ್ರ ಕ್ಷೇತ್ರ ಕಟ್ಟಲು ಬಹಳಷ್ಟು ಶ್ರಮವಿದೆ. ಆ ಸಂಸ್ಥೆಯಿಂದ ಹಲವರಿಗೆ ಪ್ರಯೋಜನವಾಗಿದೆ.**

# ಬಸವಜಯ ಮೃತ್ಯುಂಜಯ ಸ್ವಾಮೀಜಿಯನ್ನು ಮುಗಿಸಲು ಸಂಚು ನಡೆದಿದೆ: ಅರವಿಂದ ಬೆಲ್ಲದ ಆರೋಪ

• **ಉದಯವಾಹಿನಿ, ಹುಬ್ಬಳ್ಳಿ**

ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಮುಗಿಸಿದರೆ ಪಂಚಮಸಾಲಿ ಸಮಾಜದ 2ಎ ಮೀಸಲಾತಿ ಬೇಡಿಕೆಯ ಹೋರಾಟ ಅಂತ್ಯವಾಗಲಿದೆ ಎಂದು ಕಾಂಗ್ರೆಸ್ ಸರ್ಕಾರ ಭಾವಿಸಿದಂತಿದೆ ಎಂದು ವಿಧಾನಸಭೆ ವಿ. ಪ. ಉಪನಾಯಕ ಅರವಿಂದ ಬೆಲ್ಲದ ಅಭಿಪ್ರಾಯಪಟ್ಟಿದ್ದಾರೆ.

ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿ ಸ್ವಾಮೀಜಿ ಅವರು ವಿಷಪೂರಿತ ಆಹಾರ ಸೇವನೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು. ತಿನ್ನುವ ಆಹಾರದಲ್ಲಿ ವಿಷ ಬೆರೆಸಿರುವುದಾಗಿ ಸ್ವಾಮೀಜಿಯವರೇ ಸಂಶಯ ವ್ಯಕ್ತಪಡಿಸಿದ್ದು, ಇದು ಸತ್ಯವಾಗಿದ್ದರೆ ದೊಡ್ಡ ದುಷ್ಕೃತ್ಯವಾಗಿದೆ. ಕೆಲ ದಿನಗಳ ಹಿಂದೆ ಪಂಚಮಸಾಲಿ ಮಠಕ್ಕೆ ಬೀಗ ಹಾಕಲಾಗಿತ್ತು. ಭಕ್ತರು ಅಸಮಾಧಾನ ವ್ಯಕ್ತಪಡಿಸಿದ್ದರಿಂದ ಸ್ವಾಮೀಜಿ ಮಠಕ್ಕೆ ಮರಳಿದ್ದರು. ಅಲ್ಲಿ ನಡೆಯುವ ಬೆಳವಣಿಗೆ ಗಮನಿಸಲು ಕೆಲವರು ಮುಸ್ಲಿಂ ಯುವಕರನ್ನು ಬಿಟ್ಟಿದ್ದರು. ಅವರು ಅಡುಗೆ ಮನೆಗೆ ಹೋಗಿದ್ದ ದಿನವೇ, ಸ್ವಾಮೀಜಿ ಅವರ ಆರೋಗ್ಯ ಹದಗೆಟ್ಟಿತ್ತು ಎಂದು ಆರೋಪಿಸಿದರು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡಿಸಲು ಸ್ವಾಮೀಜಿ ನಿರಂತರವಾಗಿ ಹೋರಾಡುತ್ತಿದ್ದಾರೆ. ಇತ್ತೀಚಿಗೆ ನಡೆಯುತ್ತಿರುವ ಎಲ್ಲಾ ಬೆಳವಣಿಗೆಗಳನ್ನು ಲಿಂಗಾಯತ ಪಂಚಮಸಾಲಿ ಸಮಾಜ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸ್ವಾಮೀಜಿಗೆ ತೊಂದರೆ ಕೊಟ್ಟು, ಹೋರಾಟ ಹತ್ತಿಕ್ಕುವ ಷಡ್ಯಂತ್ರ ನಡೆಯುತ್ತಿದೆ. ಅದು ಅಸಾಧ್ಯವಾಗಿದ್ದು, ಸೂಕ್ತ ಸಮಯದಲ್ಲಿ ಸಮಾಜ ತಕ್ಕ ಉತ್ತರ ನೀಡಲಿದೆ ಎಂದರು.



> ಬಸವಜಯ ಮೃತ್ಯುಂಜಯ ಸ್ವಾಮೀಜಿ ಯಾವ ಪಕ್ಷಕ್ಕೂ, ಮಠಕ್ಕೂ ಸೀಮಿತವಾಗಿಲ್ಲ. ಅವರು ಸಮಾಜದ ಅಭ್ಯುದಯಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಹಿಂದೆ ನಮ್ಮ ಬಿಜೆಪಿ ಸರ್ಕಾರ 2ಎ ಮೀಸಲಾತಿ ನೀಡುವುದಾಗಿ ಘೋಷಿಸಿತ್ತು. ಈಗಿನ ಕಾಂಗ್ರೆಸ್ ಸರ್ಕಾರ ಅದನ್ನು ಜಾರಿಗೆ ತರುತ್ತಿಲ್ಲ .
>
> – ಅರವಿಂದ ಬೆಲ್ಲದ

# ಮಲ್ಲಿಕಾರ್ಜುನ ಖರ್ಗೆ ಪಿಎಂ ಆಗಬಹುದು ಭವಿಷ್ಯ ನುಡಿದ ಬಸವರಾಜ ರಾಯರಡ್ಡಿ

• **ಉದಯವಾಹಿನಿ, ಹುಬ್ಬಳ್ಳಿ**

ಎಐಸಿಸಿ ಅಧ್ಯಕ್ಷ, ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಲಿ ನೋಡೋಣ ಎಂದು ಬಿಜೆಪಿ ವ್ಯಂಗ್ಯವಾಡುತ್ತಿದೆ. ರಾಜಕೀಯದಲ್ಲಿ ಸಾಕಷ್ಟು ಬೆಳವಣಿಗೆಗಳು ನಡೆಯುತ್ತಿದ್ದು, ಆ ವ್ಯಂಗ್ಯವೇ ಸತ್ಯವಾದರೂ ಅಚ್ಚರಿಯಿಲ್ಲ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅಭಿಪ್ರಾಯಪಟ್ಟರು. ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 75ವರ್ಷ ಮೀರಿದವರು ರಾಜಕೀಯ ನಿವೃತ್ತಿಯಾಗಲಿ ಎಂದು ಆರ್‌ಎಸ್‌ಎಸ್ ಮುಖಂಡ ಮೋಹನ ಭಾಗವತ್ ಅವರು ಇತ್ತೀಚಿಗೆ ಹೇಳಿದ್ದಾರೆ.



ಬರುವ ಸೆಪ್ಟೆಂಬರ್‌ನಲ್ಲಿ 75 ವರ್ಷ ಪೂರ್ಣಗೊಳಿಸಲಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದರೆ, ಆಗ ಜೆಡಿಯು, ಟಿಡಿಪಿ ಬಿಜೆಪಿಗೆ ನೀಡಿದ್ದ ಬೆಂಬಲ ವಾಪಸ್ ಪಡೆಯಬಹುದು. ಆಗ ಕಾಂಗ್ರೆಸ್ ನೇತೃತ್ವದಲ್ಲಿ ಇತರ ಪಕ್ಷಗಳು ಸೇರಿ ಕೇಂದ್ರದಲ್ಲಿ ಸರ್ಕಾರ ರಚಿಸಿದರೆ, ಆಗ ಖರ್ಗೆ ಪ್ರಧಾನಿಯಾಗಬಹುದು ಎಂದರು. ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್‌ನ ಧೀಮಂತ ನಾಯಕ. ಅವರ ಬಗ್ಗೆ ಬಿಜೆಪಿಯವರು ಹಗುರವಾಗಿ ಮಾತನಾಡುತ್ತಿದ್ದಾರೆ. ದಲಿತರ ಬಗ್ಗೆ ಕಾಳಜಿ ಇದ್ದರೆ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಮಾಡಿ ಎಂದು ಹೇಳುತ್ತಿದ್ದಾರೆ. ಗಾಂಧಿ ಮನೆತನ ಅಧಿಕಾರ ತ್ಯಾಗಕ್ಕೆ ಹೆಸರಾಗಿದೆ. ಈ ಹಿಂದೆ ಸೋನಿಯಾ ಗಾಂಧಿ ಅವರು ಪ್ರಧಾನಿ ಸ್ಥಾನ ತ್ಯಾಗ ಮಾಡಿದಂತೆ, ರಾಹುಲ್ ಗಾಂಧಿಯೂ ತ್ಯಾಗ ಮಾಡಿದರೆ ನಿಸ್ಸಂದೇಹವಾಗಿ ಖರ್ಗೆ ಅವರು ಪ್ರಧಾನಿಯಾಗುತ್ತಾರೆ ಎಂದು ಹೇಳಿದರು. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯಾಗುತ್ತಾರೆ, ಸಾಧನಾ ಸಮಾವೇಶದಲ್ಲಿ ಡಿ.ಕೆ. ಶಿವಕುಮಾರ್ ಅವರ ಹೆಸರು ಪ್ರಸ್ತಾಪಿಸಿಲ್ಲ ಎನ್ನುವ ಚಿಲ್ಲರೆ ಆರೋಪಗಳಲ್ಲಿಯೇ ವಿರೋಧ ಪಕ್ಷದ ನಾಯಕರು ಕಾಲ ಕಳೆಯುತ್ತಿದ್ದಾರೆ. ಅಭಿವೃದ್ಧಿ ಹಾಗೂ ಆರ್ಥಿಕತೆ ಕುರಿತು ಮಾತನಾಡಲು ಸಾಕಷ್ಟು ವಿಷಯಗಳಿವೆ' ಎಂದು ರಾಯರಡ್ಡಿ ಕಿಡಿಕಾರಿದರು.

## ಹು–ಧಾ ಪಾಲಿಕೆಯ 300ಕ್ಕೂ ಹೆಚ್ಚು ಆಟೋ ಟಿಪ್ಪರ್‌ಗಳ ಸ್ಥಿತಿಗತಿ ಪರಿಶೀಲಿಸಿದ ಅಧಿಕಾರಿಗಳು

# 27 ಟಿಪ್ಪರ್‌ಗಳಿಗೆ ಮೇಜರ್ ದುರಸ್ತಿ ಅಗತ್ಯ

• **ಉದಯವಾಹಿನಿ, ಹುಬ್ಬಳ್ಳಿ**

ಸಣ್ಣ–ಪುಟ್ಟ ದುರಸ್ತಿಯನ್ನೇ ಗಂಭೀರ ಸಮಸ್ಯೆ ಎಂಬಂತೆ ಬಿಂಬಿಸಿ ನೂರಕ್ಕೂ ಹೆಚ್ಚು ಟಿಪ್ಪರ್‌ಗಳನ್ನು ಗುಜರಿಗೆ ಕಳಿಸುವ ಆಟೋ ಟಿಪ್ಪರ್ ಚಾಲಕರ ಹಾಗೂ ನಿರ್ವಾಹಕರ ಹುನ್ನಾರ ಹುಸಿಗೊಳಿಸಿರುವ ಪಾಲಿಕೆ ಅಧಿಕಾರಿಗಳು, ಆ ಮೂಲಕ ಕೆಲಸದಿಂದ ನುಣುಚಿಕೊಳ್ಳುವ ಚಾಲಕರ ಪ್ರಯತ್ನಕ್ಕೆ ಬಿಸಿ ಮುಟ್ಟಿಸಿದ್ದಾರೆ. ಹೌದು, ಪಾಲಿಕೆಯಲ್ಲಿರುವ 300ಕ್ಕೂ ಹೆಚ್ಚು ಆಟೊ ಟಿಪ್ಪರ್‌ಗಳಲ್ಲಿ100ಕ್ಕೂ ಹೆಚ್ಚು ಟಿಪ್ಪರ್ ಸಂಪೂರ್ಣ ಹಾಳಾಗಿವೆ. ಅವನ್ನು ಸ್ಕ್ರ್ಯಾಪ್‌ಗೆ ಹಾಕಬೇಕು ಎಂದು ಆಟೊ ಟಿಪ್ಪರ್ ಚಾಲಕರು ಮತ್ತು ನಿರ್ವಾಹಕರು, ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

**ಗುಜರಿ ಹುನ್ನಾರಕ್ಕೆ ಬ್ರೇಕ್**

ಇದರಿಂದ ಗಾಬರಿಗೊಂಡಿದ್ದ ಅಧಿಕಾರಿಗಳು ಒಂದೇ ಸಮಯಕ್ಕೆ ಇಷ್ಟೊಂದು ವಾಹನಗಳು ಹೇಗೆ ಹಾಳಾಗುತ್ತವೆ ಎಂಬ ಸಂಶಯ ವ್ಯಕ್ತಪಡಿಸಿದ್ದರು. ಚಾಲಕರ ಮಾತಿನ ಸತ್ಯಾಸತ್ಯತೆ ಅರಿಯಲು ಇತ್ತೀಚೆಗೆ ನಗರದ ನೆಹರು ಮೈದಾನದಲ್ಲಿ ಎಲ್ಲ ಟಿಪ್ಪರ್‌ಗಳನ್ನು ಪಾಲಿಕೆ ಅಧಿಕಾರಿಗಳು ಖುದ್ದು ಪರಿಶೀಲಿಸಿದ್ದಾರೆ. ಆಗ ಬೆರಳೆಣಿಕೆಯಷ್ಟು ಟಿಪ್ಪರ್‌ಗಳಲ್ಲಿ ಮಾತ್ರ ಸಮಸ್ಯೆ ಇದ್ದು, ಉಳಿದ ಟಿಪ್ಪರ್‌ಗಳು ಸಣ್ಣ ಪುಟ್ಟ ದುರಸ್ತಿಯಲ್ಲಿವೆ ಮತ್ತು ಚಾಲಕರು ಕುಂಟು ನೆಪ ಹೇಳುತ್ತಿದ್ದಾರೆ ಎನ್ನುವ ಸಂಗತಿ ಬೆಳಕಿಗೆ ಬಂದಿದೆ.




ಉದಯವಾಹಿನಿ ಚಿತ್ರ

**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಅಧಿಕಾರಿಗಳು ಆಟೊ ಟಿಪ್ಪರ್ ಚಾಲಕರ ಹುನ್ನಾರವನ್ನು ಬಯಲಿಗೆಳೆದಿದ್ದಾರೆ. 300ಕ್ಕೂ ಹೆಚ್ಚು ಟಿಪ್ಪರ್‌ಗಳಲ್ಲಿ ಕೇವಲ 27 ವಾಹನಗಳು ಮಾತ್ರ ದುರಸ್ತಿಯಲ್ಲಿದ್ದು, ಉಳಿದವು ಸಣ್ಣಪುಟ್ಟ ರಿಪೇರಿಗಳನ್ನು ಹೊಂದಿವೆ. ಚಾಲಕರು ಕೆಲಸ ತಪ್ಪಿಸಿಕೊಳ್ಳಲು ಸುಳ್ಳು ಮಾಹಿತಿ ನೀಡುತ್ತಿದ್ದರು ಎಂದು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ದುರಸ್ತಿ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.**

**ಅಧಿಕಾರಿಗಳಿಗೆ ಶಾಕ್....!:** ಹುಬ್ಬಳ್ಳಿ ನೆಹರೂ ಮೈದಾನದಲ್ಲಿ ಬುಧವಾರ ಎಲ್ಲಾ ಟಿಪ್ಪರ್ ಚಾಲಕರು ಮತ್ತು ನಿರ್ವಾಹಕರನ್ನು ಸೇರಿಸಿದ ಪಾಲಿಕೆ ಅಧಿಕಾರಿಗಳು ಮಹಾನಗರದ 303 ಆಟೊ ಟಿಪ್ಪರ್‌ಗಳ ಕಾರ್ಯದಕ್ಷತೆ ಪರಿಶೀಲಿಸಿದರು. ಕೆಲವು ಸಣ್ಣ–ಪುಟ್ಟ ದುರಸ್ತಿಯಲ್ಲಿದ್ದರೆ, ಉಳಿದವು ಗಟ್ಟಿಮುಟ್ಟಾಗಿದ್ದು, ಸಶಕ್ತವಾಗಿದ್ದವು. ಆದಾಗ್ಯೂ ಚಾಲಕರು ಅದನ್ನು ಬಳಸದಿರುವುದನ್ನು ಕಂಡು ಅಧಿಕಾರಿಗಳೇ ಶಾಕ್ ಆದರು. ಹು–ಧಾ ಮಹಾನಗರ ಪಾಲಿಕೆಯ 82 ವಾರ್ಡ್‌ಗಳಲ್ಲಿ ಆಯಾ ವಾರ್ಡ್ ವ್ಯಾಪ್ತಿಗೆ ಅನುಗುಣವಾಗಿ (2–3) ಒಟ್ಟು 303ಕ್ಕೂ ಹೆಚ್ಚು ಆಟೊ ಟಿಪ್ಪರ್ ವಿತರಿಸಲಾಗಿದೆ.

> **ಮಹಾನಗರ ಪಾಲಿಕೆಯ ಆಟೊ ಟಿಪ್ಪರ್ ಚಾಲಕರು ಹಾಗೂ ನಮ್ಮ ಸಿಬ್ಬಂದಿ ಹೇಳುವ ಪ್ರಕಾರ 85ಕ್ಕೂ ಹೆಚ್ಚು ಟಿಪ್ಪರ್‌ಗಳು ಸಂಪೂರ್ಣ ಹಾಳಾಗಿರಬಹುದು ಎಂದು ನಾವು ಅಂದಾಜಿಸಿದ್ದೆವು. ಆದರೆ ವಾಹನಗಳ ಪರಿಶೀಲನೆ ವೇಳೆ ಅವರು ನೀಡಿದ ಮಾಹಿತಿ ಸಂಪೂರ್ಣ ಸುಳ್ಳು ಎಂಬುದು ಗೊತ್ತಾಗಿದೆ. ದುರಸ್ತಿಯಲ್ಲಿರುವ ವಾಹನಗಳಿಗೆ 2–3 ದಿನ ಕಾಲಾವಕಾಶ ನೀಡಲಾಗಿದೆ. ಕೆಲವೇ ದಿನಗಳಲ್ಲಿಎಲ್ಲಆಟೊ ಟಿಪ್ಪರ್‌ಗಳು ಉತ್ತಮ ಸೇವೆ ನೀಡಲಿವೆ.**
>
> **–ಸಂತೋಷಕುಮಾರ ಯರಂಗಳಿ, ಮುಖ್ಯ ಇಂಜಿನಿಯರ್,ಹು–ಧಾ ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗ**

### ಚಾಲಕರಿಗೆ ಕಟ್ಟುನಿಟ್ಟಿನ ಸೂಚನೆ

**ಸಣ್ಣ–ಪುಟ್ಟ ದುರಸ್ತಿ ಹಾಗೂ ನಿರ್ವಹಣೆಗೆ 5 ಲಕ್ಷ ರೂ. ಅನುದಾನವನ್ನು ಆಯಾ ವಲಯ ಕಚೇರಿಯ ಅಧಿಕಾರಿಗಳ ಖಾತೆಗೆ ಜಮೆ ಮಾಡಲಾಗಿದೆ. ಅದನ್ನು ಬಳಸಿ 2–3 ದಿನದೊಳಗೆ ದುರಸ್ತಿ ಮಾಡಿಸಿಕೊಂಡು ಸೇವೆಗೆ ಅಣಿಗೊಳಿಸಬೇಕು ಎಂದು ಟಿಪ್ಪರ್ ಚಾಲಕರಿಗೆ ಮತ್ತು ನಿರ್ವಾಹಕರಿಗೆ ಹು–ಧಾ ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗದ ಮುಖ್ಯ ಎಂಜಿನಿಯರ್ ಸಂತೋಷಕುಮಾರ ಯರಂಗಳಿ ಹಾಗೂ ವಲಯ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.**

303 ಟಿಪ್ಪರ್‌ಗಳ ಪೈಕಿ 276ಕ್ಕೂ ಹೆಚ್ಚು ಟಿಪ್ಪರ್‌ಗಳು ಸಣ್ಣ–ಪುಟ್ಟ ರಿಪೇರಿ ಹೊರತುಪಡಿಸಿ ಉತ್ತಮ ಕ್ಷಮತೆ ಹೊಂದಿದ್ದವು. ಉಳಿದ 27 ಟಿಪ್ಪರ್‌ಗಳು ಮಾತ್ರ ಎಂಜಿನ್–ಬಾಡಿವರ್ಕ್, ಆಯಿಲ್ ಮತ್ತು ಟೈರ್ ಬದಲಾವಣೆ ಸೇರಿದಂತೆ ವಿವಿಧ ಮೇಜರ್ ಕೆಲಸಕ್ಕೆ ಗ್ಯಾರೇಜ್‌ನಲ್ಲಿಇರುವುದು ಪತ್ತೆಯಾಗಿದೆ. ಕೆಲವು ಟಿಪ್ಪರ್‌ಗಳು ಬ್ರೇಕ್ ಲೈನರ್, ಬ್ಯಾಟರಿ, ಗೇರ್ ಬಾಕ್ಸ್ ನಂತಹ ಸಣ್ಣ–ಪುಟ್ಟ ಕಾರಣಕ್ಕೆ ಮೂಲೆಗೆ ಸೇರುವಂತಾಗಿದ್ದನ್ನು ಕಂಡು ಅಧಿಕಾರಿಗಳು ಚಾಲಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

# ಕಿರಾನ ಬೆಟ್ಟದ ಮೇಲೆ ಭಾರತದ ವಾಯುಪಡೆಯ ದಾಳಿ ಸಾಕ್ಷಿ ಬಹಿರಂಗ




**ಬೆಟ್ಟದ ಕಡೆಗೂ ಹೋಗಿದೆ**

**ಹೊಸದಿಲ್ಲಿ:** ಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ವೇಳೆ, ಭಾರತದ ವಾಯುಸೇನೆಯು, ಪಾಕಿಸ್ತಾನದ ಪರಮಾಣು ಶಸ್ತ್ರಾಸ್ತ್ರ ಕಾರ್ಯಕ್ರಮಕ್ಕೆ ಸಂಬಂಧಿಸಿದ, ಅತಿಸೂಕ್ಷ್ಮ ಪ್ರದೇಶ ಕಿರಾನ ಬೆಟ್ಟದ ಮೇಲೆ ದಾಳಿ ಮಾಡಿದೆ ಎನ್ನುವುದಕ್ಕೆ ಸಂಬಂಧಿಸಿದಂತೆ ಕೆಲವೊಂದು ಉಪಗ್ರಹ ಚಿತ್ರಗಳು ಲಭ್ಯವಾಗಿವೆ.


ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆಯುತ್ತಿದ್ದ ವೇಳೆ, ಭಾರತದ ರಕ್ಷಣಾ ಅಧಿಕಾರಿಗಳು, ಕಿರಾನ ಬೆಟ್ಟದ ಮೇಲಿನ ದಾಳಿಯನ್ನು ನಿರಾಕರಿಸಿತ್ತು. ಆದರೆ, ಜೂನ್ 2025ರಲ್ಲಿ, ಗೂಗಲ್ ಅರ್ಥ್ ಮೂಲಕ ತೆಗೆದ ಉಪಗ್ರಹ ಚಿತ್ರಗಳು ಇನ್ನೊಂದು ಕಥೆಯನ್ನು ಹೇಳುತ್ತಿವೆ. ಕಿರಾನ ಪ್ರದೇಶದಲ್ಲಿ ಕ್ಷಿಪಣಿಗಳು ಬಿದ್ದ ಗುರುತುಗಳು ಕಾಣಸಿಕ್ಕಿವೆ, ಇದು ಬೆಟ್ಟದ ಮೇಲೆ ಆಗಿರುವ ದಾಳಿಯ ಕುರುಹುನಂತಿದೆ. ಡೇಮಿಯನ್ ಸೈಮನ್ ಎನ್ನುವ ತಜ್ಞರೊಬ್ಬರು ಈ ಉಪಗ್ರಹ ಚಿತ್ರಗಳನ್ನು ವಿಶ್ಲೇಷಿಸಿ, ದಾಳಿ ಆಗಿರುವುದನ್ನು ಖಚಿತ ಪಡಿಸಿದ್ದಾರೆ. ಕಿರಾನ ಬೆಟ್ಟದ ಮೇಲೆ ದಾಳಿ ಮಾಡಿರುವುದನ್ನು ಭಾರತ ನಿರಾಕರಿಸಿತ್ತು. ಮೇ 12ರಂದು ಭಾರತದ ರಕ್ಷಣಾ ಪಡೆಯ ಅಧಿಕಾರಿಗಳು, ಪತ್ರಿಕಾಗೋಷ್ಠಿಯನ್ನು ನಡೆಸಿದ್ದರು.

ಆವೇಳೆ, ಕಿರಾನ ಮೇಲಿನ ದಾಳಿಯ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. ಅದಕ್ಕೆ ಉತ್ತರಿಸುತ್ತಾ, ಕಿರಾನ ಬೆಟ್ಟದಲ್ಲಿ ಪಾಕಿಸ್ತಾನದ ಪರಮಾಣು ಅಸ್ತ್ರಗಳಿವೆ ಎಂದು ನಮ್ಮ ಗಮನಕ್ಕೆ ತಂದಿದ್ದಕ್ಕೆ ನಿಮಗೆ ಧನ್ಯವಾದಗಳು ಎಂದು ಏರ್ ಮಾರ್ಷಲ್ ಎಕೆ ಭಾರತಿ ಹೇಳಿದ್ದರು. ಇವರು, ಜಿಯೋ ಇಂಟೆಲಿಜೆನ್ಸ್ ಎಕ್ಸ್‌ಪರ್ಟ್ ಕೂಡಾ ಆಗಿದ್ದಾರೆ. ಉಪಗ್ರಹ ಚಿತ್ರದಲ್ಲಿ ಮುಷಾಫ್ ವಾಯುನೆಲೆ ಎಂದು ಕರೆಯಲ್ಪಡುವ ಸರ್ಗೋಧಾ ನೆಲೆಯ ದುರಸ್ತಿ ಮಾಡಿದ ರನ್ ವೇಗಳು ಕೂಡಾ ಕಾಣಸುತ್ತಿವೆ. ಹಲವು ವಾಯುನೆಲೆಗಳ ಮೇಲೆ ಭಾರತ ದಾಳಿ ನಡೆಸಿರುವುದನ್ನು, ಪಾಕಿಸ್ತಾನದ ಪ್ರಧಾನಿ ಕೂಡಾ ಖಚಿತ ಪಡಿಸಿದ್ದರು.

> **ಒಂದು ಸಣ್ಣ ನಗುವನ್ನು ಬೀರಿದ್ದರು. ಆ ನಗು, ಇನ್ನಷ್ಟು ಅನುಮಾನಕ್ಕೆ ಕಾರಣವಾಗಿತ್ತು. ಡೇಮಿಯನ್ ಸೈಮನ್ ಅವರ ವಿಶ್ಲೇಷಣೆಯ ಪ್ರಕಾರ, ಬೆಟ್ಟದ ಒಂದು ತುದಿಯಲ್ಲಿ ಸ್ಫೋಟದ ಗುರುತು ಕಾಣಿಸುತ್ತದೆ. ಆದರೆ, ಆ ಸ್ಫೋಟ ಭೂಮಿಯ ಆಳಕ್ಕೆ ಹೋಗಿಲ್ಲ. ಹಾಗಾಗಿ, ಇದರಿಂದ ಯಾವುದೇ ಅಡ್ಡ ಪರಿಣಾಮವಿಲ್ಲ, ಈ ರೀತಿ ದಾಳಿ ನಡೆಸಿದ್ದು ಉದ್ದೇಶಪೂರ್ವಕವಾಗಿಯೇ ಇರಬಹುದು, ಪಾಕಿಸ್ತಾನಕ್ಕೆ ಭಾರತದ ಎಚ್ಚರಿಕೆಯ ದಾಳಿ ಇದಾಗಿರಬಹುದು. ಪರಮಾಣು ಸುರಂಗಗಳು ದೂರಲ್ಲಿದ್ದು, ದಾಳಿಯಿಂದ ಇದಕ್ಕೆ ಯಾವುದೇ ಹಾನಿಯಾಗಿಲ್ಲ ಎಂದು ಸೈಮನ್ ಹೇಳಿದ್ದಾರೆ.**

ಕಿರಾನ ಬೆಟ್ಟವು ಪಾಕಿಸ್ತಾನದ ರಕ್ಷಣಾ ಸಚಿವಾಲಯದ ವ್ಯಾಪ್ತಿಗೆ ಬರುವಂತಹ, ಅತ್ಯಂತ ಸೂಕ್ಷ್ಮ ಪ್ರದೇಶವಾಗಿದೆ. ಈ ಬೆಟ್ಟದಲ್ಲಿ ಭೂಗತ ಶೇಖರಣಾ ಸೌಲಭ್ಯಗಳಿವೆ. 1980ರಲ್ಲಿ ಇಲ್ಲಿ ಸಬ್ ಕ್ರಿಟಿಕಲ್ ಪರಮಾಣು ಪರೀಕ್ಷೆಗಳನ್ನು ನಡೆಸಲಾಗಿತ್ತು. ಈ ಪ್ರದೇಶದಲ್ಲಿ, ರಾಡಾರ್ ಸ್ಥಾಪನೆಗಳು ಮತ್ತು ಮಿಲಿಟರಿ ಸುರಂಗಗಳೂ ಇವೆ. ಇದು ಪಾಕಿಸ್ತಾನದ ಸರ್ಗೋಧಾ ವಾಯುನೆಲೆಗೆ ಹತ್ತಿರದಲ್ಲಿದೆ. ಹಾಗಾಗಿ, ಇಲ್ಲಿನ ದಾಳಿಯ ಸುಳಿವು ಗಂಭೀರ ಪರಿಣಾಮಗಳು ಉಂಟು ಮಾಡುವ ಸಾಧ್ಯತೆಯಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಮೇ 9ರಂದು, ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತೀಕಾರವಾಗಿ ಭಾರತ, ಆಪರೇಷನ್ ಸಿಂಧೂರ್ ಆರಂಭಿಸಿತ್ತು. ಮಿಲಿಟರಿ ಕಾರ್ಯಾಚರಣೆಯ ವೇಳೆ, ಸುಮಾರು ಹದಿನೈದು ಬ್ರಹ್ಮೋಸ್ ಕ್ಷಿಪಣಿಗಳನ್ನು ಬಳಸಿ, ಪಾಕಿಸ್ತಾನದ ಹಲವು ಮಿಲಿಟರಿ ನೆಲೆಗಳನ್ನು ಭಾರತದ ವಾಯುಪಡೆ ನಾಶ ಮಾಡಿತ್ತು. ಈಗ ಸಿಕ್ಕಿರುವ ಉಪಗ್ರಹ ಚಿತ್ರದ ಪ್ರಕಾರ, ಭಾರತದ ಕ್ಷಿಪಣಿಗಳು ಕಿರಾನ ಬೆಟ್ಟದ ಕಡೆಗೂ ಹೋಗಿದೆ ಎನ್ನುವ ಸಾಕ್ಷಿ ತೋರಿಸುತ್ತಿದೆ.

## ಬರಾಕ್ ಒಬಾಮ ಬಂಧನವಾಗುವ ಎಐ ವಿಡಿಯೋ ಹಂಚಿಕೊಂಡ ಅಧ್ಯಕ್ಷ ಟ್ರಂಪ್



**ವಾಷಿಂಗ್ಟನ್:** ಯಾವುದಾದರೊಂದು ವಿಚಾರಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುದ್ದಿಯಾಗುತ್ತಲೇ ಇರುತ್ತಾರೆ. ಇದೀಗ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರು ಜೈಲಿನಲ್ಲಿ ಇರುವಂತೆ ಕಾಣುವ ಎಐ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಎಐ ವಿಡಿಯೋದಲ್ಲಿ, ಒಬಾಮ ಅವರು ವಿಶೇಷವಾಗಿ ಅಧ್ಯಕ್ಷರು ಕಾನೂನಿಗಿಂತ ದೊಡ್ಡವರು ಎನ್ನುತ್ತಾರೆ. ನಂತರ ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡೆನ್ ಸಹಿತ ಹಲವು ರಾಜಕೀಯ ನಾಯಕರ ಫೋಟೊವನ್ನು ತೋರಿಸಲಾಗುತ್ತದೆ, ಬೈಡನ್ ಅವರು ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ ಎನ್ನುತ್ತಾರೆ. ಮುಂದುವರಿದ ವಿಡಿಯೋದಲ್ಲಿ ಟ್ರಂಪ್ ಮತ್ತು ಒಬಾಮ ಶ್ವೇತಭವನದಲ್ಲಿ ಕುಳಿತಿರುತ್ತಾರೆ.

ಆಗ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್‌ನ ಅಧಿಕಾರಿಗಳು ಒಬಾಮ ಅವರ ಕೈಗಳಿಗೆ ಕೋಳ ಹಾಕಿ ಕರೆದೊಯ್ಯುತ್ತಾರೆ. ವಿಡಿಯೋದ ಕೊನೆಯಲ್ಲಿ ಒಬಾಮ ಕೇಸರಿ ಬಣ್ಣದ ಉಡುಗೆಯಲ್ಲಿ ಜೈಲಿನೊಳಗೆ ಇರುವಂತೆ ತೋರಿಸಲಾಗಿದೆ. ಆದರೆ ಈ ವಿಡಿಯೊ ಕುರಿತು ಟ್ರಂಪ್ ಯಾವುದೇ ಸ್ಪಷ್ಟನೆ ನೀಡಿಲ್ಲ. ಆದರೆ ವಿಡಿಯೋದ ಮೇಲೆ ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ ಎಂದು ಬರೆದುಕೊಂಡಿದ್ದಾರೆ. 2016ರಲ್ಲಿ ನಡೆದ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಗೆಲುವಿನಲ್ಲಿ ರಷ್ಯಾದ ಪ್ರಭಾವವಿದ್ದು, ಒಬಾಮ ಆಡಳಿತವನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಳಸಿ ಗಬ್ಬಾರ್ಡ್ ಈ ಹಿಂದೆ ಹೇಳಿಕೆ ನೀಡಿದ್ದರು. ತುಳಸಿ ಅವರ ಹೇಳಿಕೆ ಬಂದ ಕೆಲವೇ ದಿನಗಳಲ್ಲಿ ಟ್ರಂಪ್, ಒಬಾಮ ಅವರನ್ನು ಬಂಧಿಸುವ ರೀತಿಯ ಎಐ ವಿಡಿಯೋವನ್ನು ಹಂಚಿಕೊಂಡಿದ್ದಾರೆ.

### ಬ್ರಿಟನ್‌ಗೆ ಹಾರಲಿದೆ ಕೇರಳದಲ್ಲಿ ಸಿಲುಕಿದ್ದ ಅತ್ಯಾಧುನಿಕ ಎಫ್–35ಬಿ ಯುದ್ಧ ವಿಮಾನ

# ತನ್ನ ದೇಶಕ್ಕೆ ವಾಪಸ್ ಆಗಲು ಸಜ್ಜು

**ತಿರುವನಂತಪುರಂ:** ಒಂದೂವರೆ ತಿಂಗಳಿನಿಂದ ಕೇರಳದಲ್ಲೇ ಸಿಲುಕಿರುವ ವಿಶ್ವದ ಅತ್ಯಾಧುನಿಕ ಯುದ್ಧ ವಿಮಾನಗಳಲ್ಲಿ ಒಂದಾದ ಬ್ರಿಟನ್ ಎಫ್ – 35 ಬಿ, ಕೊನೆಗೂ ತನ್ನ ದೇಶಕ್ಕೆ ವಾಪಸ್ ಆಗಲು ಸಜ್ಜಾಗಿದೆ. ತಾಂತ್ರಿಕ ದೋಷದಿಂದಾಗಿ ಜೂನ್ 14 ರಿಂದ ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಬಾಕಿ ಆಗಿದ್ದ ಈ ಯುದ್ಧ ವಿಮಾನ ಮಂಗಳವಾರ ಬ್ರಿಟನ್‌ನತ್ತ ಹಾರಲಿದೆ. ಈ ಯುದ್ಧ ವಿಮಾನವನ್ನು ತಯಾರಿಸಿದ ಅಮೆರಿಕ ಲಾಕಿಡ್ ಮಾರ್ಟಿನ್ ಕಂಪನಿಯ ತಂತ್ರಜ್ಞರು ಸೇರಿದಂತೆ ಬ್ರಿಟನ್‌ನಿಂದ ಆಗಮಿಸಿದ ತಂತ್ರಜ್ಞರ ತಂಡವು ಕೊನೆಗೂ ಇದರ ಹೈಡ್ರಾಲಿಕ್ ವ್ಯವಸ್ಥೆಯಲ್ಲಿನ ದೋಷವನ್ನು ಸರಿಪಡಿಸುವಲ್ಲಿ ಯಶಸ್ವಿಯಾಗಿದೆ. ಸೋಮವಾರ ಸಂಜೆಯೊಳಗೆ ವಿಮಾನವನ್ನು ಹ್ಯಾಂಗರ್‌ನಿಂದ ಅಂದರೆ ದುರಸ್ತಿ ನಡೆಯುತ್ತಿದ್ದ ಜಾಗದಿಂದ ಹೊರಗೆ ತರಲಾಗುತ್ತದೆ. ಮತ್ತು ಈ ವಿಮಾನ ಇಂದು ಬ್ರಿಟನ್‌ಗೆ ಹೊರಡಲಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ವಿಮಾನದ ಸಂಕೀರ್ಣ ಸಮಸ್ಯೆಯನ್ನು ಸರಿಪಡಿಸಲು ತಂಡಕ್ಕೆ ಸುಮಾರು ಒಂದು ವಾರಗಳೇ ಬೇಕಾಯಿತು.

**ಹಡಗಲ್ಲಿ ಇಳಿಯಲು ಸಾಧ್ಯವಾಗದೇ ಕೇರಳಕ್ಕೆ ಬಂದಿದ್ದ ವಿಮಾನ:** ಯುಕೆ ನೌಕಾಪಡೆಯ ವಿಮಾನವಾಹಕ ನೌಕೆ ಎಚ್‌ಎಂಎಸ್ ಪ್ರಿನ್ಸ್ ಆಫ್ ವೇಲ್ಸ್‌ನ ಭಾಗವಾಗಿದ್ದ ಈ ಎಫ್–35ಬಿ ಯುದ್ಧ ವಿಮಾನ ಅರಬ್ಬೀ ಸಮುದ್ರದಲ್ಲಿ ಜೂನ್ 14ರಂದು ಅಭ್ಯಾಸ ನಡೆಸುತ್ತಿತ್ತು. ಈ ವೇಳೆ ತಾಂತ್ರಿಕ ಸಮಸ್ಯೆ



- ತಾಂತ್ರಿಕ ದೋಷದಿಂದಾಗಿ ಕೇರಳದ ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಲುಕಿದ್ದ ಎಫ್–35 ಬಿ
- 14ನೇ ಜೂನ್‌ನಿಂದ ಇಲ್ಲೇ ಸಿಲುಕಿದ್ದ ಬ್ರಿಟನ್ ಎಫ್ – 35ಬಿ ಯುದ್ಧ ವಿಮಾನ
- ಹೈಡ್ರಾಲಿಕ್ ವ್ಯವಸ್ಥೆಯ ದೋಷವನ್ನು ಸರಿಪಡಿಸಲು ಯಶಸ್ವಿಯಾದ ತಜ್ಞರ ತಂಡ

ಕಾಣಿಸಿಕೊಂಡಿದ್ದಲ್ಲದೆ, ಇಂಧನವೂ ಕಡಿಮೆ ಇತ್ತು. ಹೀಗಾಗಿ ಮತ್ತೆ ಯುದ್ಧ ವಾಹಕದಲ್ಲಿ ಇಳಿಯಲು ಸಾಧ್ಯವಾಗದೇ ತಿರುವನಂತಪುರಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂ ಸ್ಪರ್ಶ ಮಾಡಿತ್ತು.


ಸುರಕ್ಷಿತವಾಗಿ ಇಳಿದ ಬ್ರಿಟನ್‌ನ ಯುದ್ಧ ವಿಮಾನವನ್ನು ಬೇ 4ರಲ್ಲಿ ನಿಲ್ಲಿಸಲಾಗಿತ್ತು. ಆದರೆ ಇದನ್ನು ರಿಪೇರಿ ಮಾಡುವ ಆರಂಭಿಕ ಯತ್ನಗಳು ಫಲ ನೀಡಿರಲಿಲ್ಲ. ತಾಂತ್ರಿಕ ತಂಡ ಎಷ್ಟೇ ಪ್ರಯತ್ನಪಟ್ಟರೂ ರಿಪೇರಿ ಸಾಧ್ಯವಾಗಲಿಲ್ಲ. ಬಳಿಕ ಬ್ರಿಟನ್‌ನಿಂದ ವಿಶೇಷ ತಜ್ಞರ ತಂಡ ಬಂದಿತ್ತು. ಈ ವೇಳೆ ಇದನ್ನು ಏರ್ ಇಂಡಿಯಾದ ಹ್ಯಾಂಗರ್‌ಗೆ ಅಂದರೆ ವಿಮಾನಗಳನ್ನು ರಿಪೇರಿ ಮಾಡುವ ಜಾಗಕ್ಕೆ ಸ್ಥಳಾಂತರಿಸಲಾಗಿತ್ತು.

ಒಂದು ಸಂದರ್ಭದಲ್ಲಿ ವಿಮಾನ ರಿಪೇರಿಯೇ ಆಗುತ್ತಿಲ್ಲ ಎಂದಾಗ, ರೆಕ್ಕೆಗಳನ್ನು ಬಿಚ್ಚಿ ದೈತ್ಯ ಸರಕು ಸಾಗಣೆ ವಿಮಾನದಲ್ಲಿ ತುಂಬಿಕೊಂಡು ಹೋಗುವ ಬಗ್ಗೆಯೂ ಚಿಂತನೆ ನಡೆದಿತ್ತು. ಆದರೆ ಕೊನೆಗೂ ಸುಮಾರು 1,000 ಕೋಟಿ ರೂ. ಮೌಲ್ಯದ ಅತ್ಯಾಧುನಿಕ ವಿಮಾನ ಹಾರಾಟಕ್ಕೆ ಸಜ್ಜಾಗಿದೆ. ವಿಮಾನ ನಿಲ್ದಾಣದ ಜಾಗವನ್ನು ತಿಂಗಳಿಗೂ ಹೆಚ್ಚು ಕಾಲ ಬಳಸಿದ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣವನ್ನು ನಿರ್ವಹಿಸುವ ಸಂಸ್ಥೆ ವಿಮಾನಕ್ಕೆ ಶುಲ್ಕ ವಿಧಿಸಬಹುದು ಎಂದೂ ಹೇಳಲಾಗಿದೆ.

**ಇಂದು ಬ್ರಿಟನ್‌ಗೆ ಪ್ರಯಾಣ**

**ಕೇರಳದಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ಸಿಲುಕಿದ್ದ ಬ್ರಿಟನ್‌ನ ಎಫ್–35 ಬಿ ಯುದ್ಧ ವಿಮಾನವು ದುರಸ್ತಿಯ ನಂತರ ತಾಯ್ನಾಡಿಗೆ ಮರಳಲು ಸಿದ್ಧವಾಗಿದೆ. ತಾಂತ್ರಿಕ ದೋಷದಿಂದಾಗಿ ತಿರುವನಂತಪುರಂ ವಿಮಾನ ನಿಲ್ದಾಣದಲ್ಲಿ ನಿಂತಿದ್ದ ವಿಮಾನವನ್ನು ಅಮೆರಿಕದ ತಜ್ಞರ ತಂಡ ಸರಿಪಡಿಸಿದೆ. ಇದು ಮಂಗಳವಾರ ಬ್ರಿಟನ್‌ಗೆ ಪ್ರಯಾಣ ಬೆಳೆಸಲಿದೆ.**

# ಆಪರೇಷನ್ ಸಿಂಧೂರ್ ಮೂಲಕ ಭಾರತದ ಮಿಲಿಟರಿ ಶಕ್ತಿ ಜಗತ್ತು ಕಂಡಿದೆ: ಮೋದಿ



**ನವದೆಹಲಿ:** ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ನಡೆದ ನರಮೇಧಕ್ಕೆ ಪ್ರತಿಕಾರವಾಗಿ ಪಾಕಿಸ್ತಾನ ಹಾಗೂ ಪಿಒಕೆ ಮೇಲೆ ನಡೆಸಿದ ಆಪರೇಷನ್ ಸಿಂಧೂರ್ ಯಶಸ್ಸಿನ ಮೂಲಕ ಭಾರತದ ಮಿಲಿಟರಿ ಶಕ್ತಿ ಮತ್ತು ನಮ್ಮ ಶಸ್ತ್ರಾಸ್ತ್ರ ಪಡೆಗಳ ಶಕ್ತಿಯನ್ನು ಜಗತ್ತು ಕಂಡಿದೆ ಎಂದು ಪ್ರಧಾನಿ ನರೇಂದ್ರಮೋದಿ, ಸೇನಾಪಡೆಗಳ ಶಕ್ತಿಯನ್ನು ಕೊಂಡಾಡಿದರು. ಸಂಸತ್ತಿನ ಮಳೆಗಾಲದ ಅಧಿವೇಶನಕ್ಕೂ ಮುನ್ನ ಮಾತನಾಡಿದ ಅವರು, ಸಂಸತ್ತಿನ ಮಳೆಗಾಲದ ಅಧಿವೇಶನವು ವಿಜಯದ ಆಚರಣೆಯಾಗಿದೆ. ಈ ಕಾರ್ಯಾಚರಣೆಯು ದೇಶದ ಶಕ್ತಿ, ಕಾರ್ಯತಂತ್ರದ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಇದು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು, ಜಾಗತಿಕ ಶಾಂತಿ, ಸ್ಥಿರತೆಗೆ ಕೊಡುಗೆ ನೀಡುವ ಭಾರತದ ಬದ್ಧತೆಯನ್ನು ಹೇಗೆ ಪ್ರದರ್ಶಿಸುತ್ತದೆ ಎಂದು ಪ್ರತಿಪಾದಿಸಿದರು. ಆಪರೇಷನ್ ಸಿಂಧೂರ್ ಅಡಿಯಲ್ಲಿ, ಭಯೋತ್ಪಾದಕರ ಮನೆಗಳನ್ನು 22 ನಿಮಿಷಗಳಲ್ಲಿ ನೆಲಸಮ ಮಾಡಲಾಯಿತು.

ಭಾರತದಲ್ಲಿ ತಯಾರಾದ ಈ ಹೊಸ ರೂಪದ ಮಿಲಿಟರಿ ಶಕ್ತಿಯತ್ತ ಜಗತ್ತು ಬಹಳ ಆಕರ್ಷಿತವಾಗಿದೆ. ಇತ್ತೀಚಿನ ದಿನಗಳಲ್ಲಿ ನಾನು ಪ್ರಪಂಚದ ಜನರನ್ನು ಭೇಟಿಯಾದಾಗಲೆಲ್ಲಾ, ಭಾರತದಿಂದ ತಯಾರಿಸಲ್ಪಡುತ್ತಿರುವ ತಯಾರಿಸಲ್ಪಟ್ಟ ಶಸಾಸಗಳ ಕಡೆಗೆ ಪ್ರಪಂಚದ ಆಕರ್ಷಣೆ ಹೆಚ್ಚುತ್ತಿದೆ ಎಂದು ಶ್ಲಾಘಿಸಿದರು. ಆಪರೇಷನ್‌ಸಿಂಧೂರ್‌ನಲ್ಲಿ ಬಳಸಲಾದ ಶಸಾಸಗಳು ಭಾರತದಲ್ಲಿಯೇ ತಯಾರಿಸಲ್ಪಟ್ಟವು ಮತ್ತು ಅಂತರರಾಷ್ಟ್ರೀಯ ಗಮನ ಸೆಳೆದವು. ದೇಶೀಯ ರಕ್ಷಣಾ ಉತ್ಪಾದನೆಯ ಮಹತ್ವವನ್ನು ಒತ್ತಿ ಹೇಳಿದ ಮೋದಿ, ಈ ಕಾರ್ಯಾಚರಣೆಯಲ್ಲಿ ಭಾರತವು ತನ್ನ ಉದ್ದೇಶಗಳನ್ನು ಸಾಧಿಸಿದೆ. ರಕ್ಷಣಾ ಸಾಮರ್ಥ್ಯ, ಸ್ವಾವಲಂಬನೆ ಎರಡರಲ್ಲೂ ಉದಯೋನ್ಮುಖ ಶಕ್ತಿಯಾಗಿ ರಾಷ್ಟ್ರದ ಖ್ಯಾತಿಯನ್ನು ಬಲಪಡಿಸಿತು ಎಂದು ವ್ಯಾಖ್ಯಾನಿಸಿದರು. ಸಂಸತ್ತು ಈ ವಿಜಯವನ್ನು ಒಂದೇ ಧ್ವನಿಯಲ್ಲಿ ಅಂಗೀಕರಿಸಿ ಆಚರಿಸಿದಾಗ, ಅದು ಭಾರತದ ಸಶಸ ಪಡೆಗಳನ್ನು ಇನ್ನಷ್ಟು ಬಲಪಡಿಸುತ್ತದೆ, ಪ್ರೋತ್ಸಾಹಿಸುತ್ತದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಮುಂಗಾರು ಅಧಿವೇಶನವು ರಾಷ್ಟ್ರೀಯ ಹೆಮ್ಮೆ ಮತ್ತು ವಿಜಯೋತ್ಸವದ ಅಧಿವೇಶನ ಎಂದು ನಾನು ಹೇಳುವಾಗ, ನಾನು ಅದನ್ನು ಹೇಳುತ್ತೇನೆ ಏಕೆಂದರೆ, ಎಲ್ಲಕ್ಕಿಂತ ಹೆಚ್ಚಾಗಿ, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಭಾರತೀಯ ತ್ರಿವರ್ಣ ಧ್ವಜವನ್ನು ಹಾರಿಸುವುದು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಅಪಾರ ಹೆಮ್ಮೆಯ ಕ್ಷಣವಾಗಿದೆ ಎಂದು ಬಣ್ಣಿಸಿದರು.

> **ಮುಂಗಾರು ಮತ್ತು ಕೃಷಿಯ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ, ಕಳೆದ 10 ವರ್ಷಗಳಲ್ಲಿ ಮೊದಲ ಬಾರಿಗೆ ದೇಶದಲ್ಲಿ ನೀರಿನ ಸಂಗ್ರಹ ಸುಮಾರು ಮೂರು ಪಟ್ಟು ಹೆಚ್ಚಾಗಿದೆ, ಇದು ಇಡೀ ದೇಶಕ್ಕೆ. ವಿಶೇಷವಾಗಿ ರೈತರು, ಹಳ್ಳಿಗಳು ಮತ್ತು ಸಾಮಾನ್ಯ ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತದೆಎಂದುಹೇಳಿದರು.**

**ರಾಷ್ಟ್ರೀಯ ಹೆಮ್ಮೆಯ ಮೂಲ**

**ಜಾಗತಿಕ ವೇದಿಕೆಯಲ್ಲಿ ಭಾರತದ ಸಾಧನೆಗಳನ್ನು ಎತ್ತಿ ತೋರಿಸುವ ಮೂಲಕ, ಮುಂಗಾರು ಅಧಿವೇಶನವನ್ನು ರಾಷ್ಟ್ರಕ್ಕೆ ಹೆಮ್ಮೆಯ ಕ್ಷಣವಾಗಿದೆ. ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಐತಿಹಾಸಿಕ ಹೆಜ್ಜೆ ಇಟ್ಟಿದ್ದು, ಭಾರತದ ಮುಂದುವರಿದ ಬಾಹ್ಯಾಕಾಶ ಸಾಮರ್ಥ್ಯಗಳ ಸಂಕೇತ ಮತ್ತು ರಾಷ್ಟ್ರೀಯ ಹೆಮ್ಮೆಯ ಮೂಲವಾಗಿದೆ ಎಂದು ಅವರು ಉಲ್ಲೇಖಿಸಿದರು.**

**ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆಯ ಕ್ಷಣ**

## ಜಗನ್ ಮೋಹನ್ ರೆಡ್ಡಿ ಅಕ್ರಮ ಮದ್ಯ ಹಗರಣದಲ್ಲಿ ಕಿಕ್‌ಬ್ಯಾಕ್ ಫಲಾನುಭವಿ



**ಅಮರಾವತಿ:** ಆಂಧ್ರಪ್ರದೇಶದ ಮಾಜಿ ಸಿಎಂ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು 3,500 ಕೋಟಿ ಮೌಲ್ಯದ ಅಕ್ರಮ ಮದ್ಯ ಹಗರಣದಲ್ಲಿ ಕಿಕ್‌ಬ್ಯಾಕ್‌ಗಳ ಫಲಾನುಭವಿ ಎಂದು ಆರೋಪಿಸಲಾಗಿದೆ. ಆಂಧ್ರಪ್ರದೇಶ ಸಿಐಡಿ ಪೊಲೀಸರು ಸ್ಥಳೀಯ ನ್ಯಾಯಾಲಯಕ್ಕೆ ಆಂಧ್ರಪ್ರದೇಶದಲ್ಲಿ ನಡೆದ ಅಬಕಾರಿ ಹಗರಣ ಕುರಿತಂತೆ 305 ಪುಟಗಳ ದಾಖಲೆಯನ್ನು ಸಲ್ಲಿಸಿದೆ. ಆದಾಗ್ಯೂ ಜಗನ್ ಮೋಹನ್ ರೆಡ್ಡಿ ಚಾರ್ಜ್‌ಶೀಟ್‌ನಲ್ಲಿ ಅವರನ್ನು ನೇರವಾಗಿ ಆರೋಪಿ ಎಂದು ಹೆಸರಿಸಿಲ್ಲ.

ನ್ಯಾಯಾಲಯವು ಇನ್ನೂ ಚಾರ್ಜ್‌ಶೀಟ್ ಅನ್ನು ಪರಿಗಣಿಸಬೇಕಿದೆ. 2019–2024ರ ವೈಎಸ್ ಆರ್ ಕಾಂಗ್ರೆಸ್ ಪಕ್ಷ ಆಡಳಿತದ ಅವಧಿಯಲ್ಲಿ ಪ್ರತಿ ತಿಂಗಳು 50–60 ಕೋಟಿ ಅಕ್ರಮವಾಗಿ ಸಂಗ್ರಹಿಸಲಾಗುತ್ತಿತ್ತು ಎಂದು ಚಾರ್ಜ್‌ಶೀಟ್‌ನಲ್ಲಿ ಹೇಳಿದೆ. ಈ ಹಣವನ್ನು ಕೇಶಿರೆಡ್ಡಿ ರಾಜಶೇಖರ್ ರೆಡ್ಡಿ (ಎ–1) ಅವರಿಗೆ ಹಸ್ತಾಂತರಿಸಲಾಗುತ್ತಿತ್ತು. ನಂತರ ರಾಜಶೇಖರ್ ರೆಡ್ಡಿ ಈ ಹಣವನ್ನು ವಿಜಯ್‌ಸಾಯಿ ರೆಡ್ಡಿ (ಎ–5), ಮಿಥುನ್ ರೆಡ್ಡಿ (ಎ–4) ಮತ್ತು ಬಾಲಾಜಿ (ಎ–33) ಅವರ ಮೂಲಕ ಜಗನ್‌ಮೋಹನ್ ರೆಡ್ಡಿಗೆ ತಲುಪಿಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಚಾರ್ಜ್ ಶೀಟ್ ಪ್ರಕಾರ, ರಾಜಶೇಖರ್ ರೆಡ್ಡಿ ಈ ಹಗರಣದ ಮಾಸ್ಟರ್‌ಮೈಂಡ್, ಸಹ–ಪಿತೂರಿಗಾರ ಎಂದು ಹೇಳಲಾಗಿದೆ. ಅಬಕಾರಿ ನೀತಿಯನ್ನು ಬದಲಾಯಿಸುವುದು, ಸ್ವಯಂಚಾಲಿತ ಆರ್ಡರ್ – ಸಪ್ಲೆ ವ್ಯವಸ್ಥೆಯನ್ನು ಹಸ್ತಚಾಲಿತ ಪ್ರಕ್ರಿಯೆಗಳೊಂದಿಗೆ ಬದಲಾಯಿಸುವುದು, ಎಪಿಎಸ್‌ಬಿಸಿಎಲ್‌ನಲ್ಲಿ ತಮ್ಮ ನಿಷ್ಠಾವಂತರನ್ನು ನೇಮಿಸುವುದರ ಮೂಲಕ ಅವರು ಈ ಅಕ್ರಮಗಳನ್ನು ನಡೆಸಿದ್ದಾರೆ ಎಂದು ಹೇಳಲಾಗಿದೆ. ಅಲ್ಲದೆ 250–300 ಕೋಟಿ ನಗದನ್ನು ವೈಎಸ್‌ಆರ್‌ಸಿಪಿ ಪಕ್ಷದ ಚುನಾವಣಾ ವೆಚ್ಚಗಳಿಗಾಗಿ ಬಳಸಲಾಗಿದ್ದು, ಇದನ್ನು ರಾಜಶೇಖರ್ ರೆಡ್ಡಿ ಮತ್ತು ಮಾಜಿ ಶಾಸಕ ಚೆವಿರೆಡ್ಡಿ ಭಾಸ್ಕರ್ ರೆಡ್ಡಿ ಸಂಘಟಿಸಿದ್ದಾರೆ ಎಂದು ಚಾರ್ಜ್‌ಶೀಟ್ ಹೇಳಿದೆ.

ಈ ಅಕ್ರಮ ಹಣವನ್ನು 30ಕ್ಕೂ ಹೆಚ್ಚು ನಕಲಿ ಕಂಪನಿಗಳ ಮೂಲಕ ಭೂಮಿ, ಚಿನ್ನ, ದುಬೈ, ಆಫ್ರಿಕಾದಲ್ಲಿ ಐಷಾರಾಮಿ ಆಸ್ತಿಗಳಲ್ಲಿ ಹೂಡಿಕೆ ಮಾಡಲಾಗಿದೆ ಎಂದು ಸಿಐಡಿ ತನಿಖೆಯಿಂದ ತಿಳಿದುಬಂದಿದೆ. ವೈಎಸ್‌ಆರ್‌ಸಿಪಿ ಈ ಆರೋಪಗಳನ್ನು ರಾಜಕೀಯ ಕುತಂತ್ರ ಎಂದು ತಳ್ಳಿಹಾಕಿದ್ದು ಪ್ರಸ್ತುತ ಟಿಡಿಪಿ ಸರ್ಕಾರದ ರಾಜಕೀಯ ಸೇಡು ಎಂದು ಬಣ್ಣಿಸಿದೆ.

**ಮಾಲೀಕರಿಗೆ ಬೆದರಿಕೆ**

**2019ರ ಕೊನೆಯಲ್ಲಿ ಹೈದರಾಬಾದ್‌ನ ಪಾರ್ಕ್ ಹಯಾತ್ ಹೋಟೆಲ್‌ನಲ್ಲಿ ಡಿಸ್ಟಿಲರಿ ಮಾಲೀಕರೊಂದಿಗೆ ಪ್ರಮುಖ ಸಭೆ ನಡೆಸಲಾಗಿದ್ದು, ಈ ಸಭೆಯನ್ನು ಸಜ್ಜಾಲ ಶ್ರೀಧರ್ ರೆಡ್ಡಿ (ಎ–6) ಆಯೋಜಿಸಿದ್ದರು. ಹಸ್ತಚಾಲಿತ ಒಎ–ಎಸ್ ಪ್ರಕ್ರಿಯೆಗೆ ಸಹಕರಿಸದಿದ್ದರೆ ಮತ್ತು ಶೇ.12–20ರಷ್ಟು ಕಿಕ್‌ಬ್ಯಾಕ್ ನೀಡದಿದ್ದರೆ ಆದೇಶಗಳನ್ನು ನಿರಾಕರಿಸುವುದಾಗಿ ಮಾಲೀಕರಿಗೆ ಬೆದರಿಕೆ ಹಾಕಲಾಗಿತ್ತು ಎಂದು ಹೇಳಲಾಗಿದೆ.**

## ಅಮರನಾಥ ಯಾತ್ರಾರ್ಥಿಗಳಲ್ಲಿ ಗಣನಿಯ ಇಳಿಕೆ



**ಜಮ್ಮು:** ದಕ್ಷಿಣ ಕಾಶ್ಮೀರ ಹಿಮಾಲಯದಲ್ಲಿರುವ ಅಮರನಾಥ ಗುಹಾ ದೇವಾಲಯದ ಅವಳಿ ಮೂಲ ಶಿಬಿರಗಳಿಗೆ ಸೋಮವಾರ ಬೆಳಿಗ್ಗೆ 3,700 ಕ್ಕೂ ಹೆಚ್ಚು ಯಾತ್ರಿಕರ ಹೊಸ ತಂಡ ಪ್ರಯಾಣ ಬೆಳೆಸಿದೆ. ಈ ತಂಡ ಬಿಗಿ ಭದ್ರತಾ ವ್ಯವಸ್ಥೆಗಳ ನಡುವೆ ಜಮ್ಮುವಿನಿಂದ ಹೊರಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜು.3ರಂದು ಯಾತ್ರೆ ಪ್ರಾರಂಭದಿಂದ ಇಲ್ಲಿಯವರೆಗೆ, 3,880 ಮೀಟರ್ ಎತ್ತರದ ದೇವಾಲಯದಲ್ಲಿರುವ ಶಿವನ ಹಿಮಲಿಂಗಕ್ಕೆ 3 ಲಕ್ಷಕ್ಕೂ ಹೆಚ್ಚು ಯಾತ್ರಿಕರು ಪೂಜೆ ಸಲ್ಲಿಸಿದ್ದಾರೆ. ಸಿಆರ್‌ಪಿಎಫ್, ಪೊಲೀಸ್ ಸಿಬ್ಬಂದಿಯ ಬೆಂಗಾವಲಿನಲ್ಲಿ, 3,067 ಪುರುಷರು, 522 ಮಹಿಳೆಯರು, ಒಂಬತ್ತು ಮಕ್ಕಳು, 192 ಸಾಧುಗಳು, ಸಾಧ್ವಿಗಳು, ಒಬ್ಬ ಟ್ರಾನ್ಸ್ ಜೆಂಡರ್ ಸೇರಿದಂತೆ 3,791 ಯಾತ್ರಿಕರ ತಂಡವು ಬೆಳಗಿನ ಜಾವ 3.33 ರಿಂದ 4.06 ರ ನಡುವೆ 148 ವಾಹನಗಳಲ್ಲಿ ಇಲ್ಲಿನ ಭಗವತಿ ನಗರ ಮೂಲ ಶಿಬಿರದಿಂದ ಹೊರಟಿದೆ ಎಂದು ಅವರು ಹೇಳಿದರು. 52 ವಾಹನಗಳಲ್ಲಿ 1,208 ಯಾತ್ರಿಕರನ್ನು ಹೊತ್ತ ಮೊದಲ ಯಾತ್ರಿಕ ಬೆಂಗಾವಲು ಗಂದೇರ್ಬಲ್ ಜಿಲ್ಲೆಯಲ್ಲಿ ಕಡಿಮೆ ಆದರೆ ಕಡಿದಾದ 14 ಕಿಮೀ ಬಾಲ್ಟಾಲ್ ಮಾರ್ಗಕ್ಕೆ ಹೊರಟಿತು, ನಂತರ ಅನಂತ್‌ನಾಗ್ ಜಿಲ್ಲೆಯಲ್ಲಿ 48 ಕಿಮೀ ಸಾಂಪ್ರದಾಯಿಕ ಪಹಲ್ಗಾಮ್ ಮಾರ್ಗದ ಮೂಲಕ ಯಾತ್ರೆ ಕೈಗೊಳ್ಳುತ್ತಿರುವ 96 ವಾಹನಗಳಲ್ಲಿ 2,583 ಯಾತ್ರಿಕರ ಎರಡನೇ ಬೆಂಗಾವಲು ಯಾತ್ರೆಯನ್ನು ಕೈಗೊಂಡಿದೆ ಎಂದು ಅವರು ಹೇಳಿದರು.

ಸಂಖ್ಯೆಯ ಪ್ರಕಾರ, ಕಳೆದ ಕೆಲವು ದಿನಗಳಿಂದ ಯಾತ್ರೆ ಕೈಗೊಳ್ಳುವ ಯಾತ್ರಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಜುಲೈ 18 ರಂದು ಅಮರನಾಥಕ್ಕೆ 7,908 ಯಾತ್ರಿಕರು ಹೊರಟಿದ್ದರೆ, ಜುಲೈ 19 ರಂದು 6,365, ಜುಲೈ 20 ರಂದು 4,388, ಇಂದಿನ 3,791 ಯಾತ್ರಿಕರ ತಂಡವು ಇದುವರೆಗಿನ ಅತ್ಯಂತ ಕಡಿಮೆಯಾಗಿದೆ.

ಕಳೆದ ಕೆಲವು ದಿನಗಳಲ್ಲಿ ಸ್ಥಳದಲ್ಲೇ ನೋಂದಣಿಗಾಗಿ ಕೌಂಟರ್‌ಗಳಲ್ಲಿ ಜನರ ಸಂಖ್ಯೆಯೂ ಕಡಿಮೆಯಾಗಿದೆ. ಈವರೆಗೆ ಯಾತ್ರೆಗೆ 4 ಲಕ್ಷಕ್ಕೂ ಹೆಚ್ಚು ಜನರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ವರ್ಷ, 5.10 ಲಕ್ಷಕ್ಕೂ ಹೆಚ್ಚು ಯಾತ್ರಿಕರು ಗುಹಾ ದೇಗುಲದಲ್ಲಿ ಪೂಜೆ ಸಲ್ಲಿಸಿದರು.38 ದಿನಗಳ ತೀರ್ಥಯಾತ್ರೆ ಆಗಸ್ಟ್ 9 ರಂದು ಮುಕ್ತಾಯಗೊಳ್ಳಲಿದೆ

# ಚೀನಾ ನಿರ್ಮಿತ ಎಫ್–7 ಬಿಜಿಐ ಯುದ್ಧ ವಿಮಾನ ಪತನ

### ಚೀನಾ ನಿರ್ಮಿತ ವಿಮಾನ ಪತನ, ಢಾಕಾ ಶಾಲೆಯ 19 ಮಕ್ಕಳು, ಶಿಕ್ಷಕರು ಸಾವು; 100 ಜನರಿಗೆ ಗಾಯ



**ಕಟ್ಟಡಕ್ಕೆ ಡಿಕ್ಕಿ ಹೊಡೆದು ಸ್ಫೋಟ**

**ಢಾಕಾ:** ಅಹಮದಾಬಾದ್‌ನಲ್ಲಿ ನಡೆದ ಏರ್ ಇಂಡಿಯಾ ದುರಂತ ಮಾಸುವ ಮುನ್ನವೇ ಅಂಥಹದ್ದೇ ದುರಂತಕ್ಕೆ ಪಕ್ಕದ ಬಾಂಗ್ಲಾದೇಶ ಸಾಕ್ಷಿಯಾಗಿದೆ. ಚೀನಾ ನಿರ್ಮಿತ ಬಾಂಗ್ಲಾದೇಶ ವಾಯುಪಡೆಯ ತರಬೇತಿ ವಿಮಾನವು ಉತ್ತರ ಢಾಕಾದ ಜನನಿಬಿಡ ಪ್ರದೇಶದಲ್ಲಿ ಶಾಲಾ ಆವರಣದಲ್ಲಿ ಪತನಗೊಂಡಿದೆ. ಈ ಘಟನೆಯಲ್ಲಿ ಕನಿಷ್ಠ 19 ಜನರು ಸಾವನ್ನಪ್ಪಿದ್ದು, 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮೃತರಲ್ಲಿ 16 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಸೇರಿದ್ದಾರೆ. ಬಾಂಗ್ಲಾದೇಶವು ತರಬೇತಿ ಉದ್ದೇಶಗಳಿಗಾಗಿ ಬಳಸುತ್ತಿದ್ದ ಎಫ್ –7 ಬಿಜಿಐ ಯುದ್ಧ ವಿಮಾನವು ಮಧ್ಯಾಹ್ನ ಸುಮಾರು 1:06ಕ್ಕೆ ಆಕಾಶಕ್ಕೇರಿದ ಕೆಲವೇ ಹೊತ್ತಲ್ಲಿ ವಸತಿ ಪ್ರದೇಶದಲ್ಲಿ ಪತನಗೊಂಡಿದೆ. ಮೈಲ್‌ಸ್ಟೋನ್ ಕಾಲೇಜ್ ಕ್ಯಾಂಟೀನ್‌ನ ಛಾವಣಿಗೆ ರಭಸದಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಭಾರಿ ಸ್ಫೋಟ ಸಂಭವಿಸಿದ್ದು, ಬೆಂಕಿ ಕಾಣಿಸಿಕೊಂಡಿದೆ.

ಶಾಲಾ ಆವರಣದಾದ್ಯಂತ ವಿಮಾನದ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಪಘಾತದ ನಂತರದ ವಿಡಿಯೋಗಳನ್ನು ರಾಯ್ಟರ್ಸ್ ಪ್ರಕಟಿಸಿದ್ದು, ಹುಲ್ಲುಹಾಸಿನ ಬಳಿ ಭಾರಿ ಬೆಂಕಿ ಕಾಣಿಸಿಕೊಂಡಿದೆ. ಆಕಾಶದೆತ್ತರಕ್ಕೆ ದಟ್ಟವಾದ ಹೊಗೆ ಬರುವುದನ್ನು ಕಾಣಬಹುದಾಗಿದೆ. ಕಟ್ಟಡದ ಬದಿಗೆ ಡಿಕ್ಕಿ ಹೊಡೆದಿದ್ದ ವಿಮಾನದಿಂದ ಹೊತ್ತಿಕೊಂಡ ಬೆಂಕಿಯನ್ನು ಅಗ್ನಿಶಾಮಕ ದಳದವರು ಆರಿಸುತ್ತಿರುವುದನ್ನು ಕಾಣಬಹುದಾಗಿದೆ. ಕಬ್ಬಿಣದ ಗ್ರಿಲ್‌ಗಳನ್ನು ಮುರಿದು, ಶಾಲೆಯ ಒಳ ಹೋಗಲು ರಂಧ್ರವನ್ನು ಕೊರೆದು, ಗಾಯಾಳುಗಳನ್ನು ರಕ್ಷಿಸಲಾಗಿದೆ. ಈ ಅಪಘಾತದಿಂದ ಗಾಯಗೊಂಡ, ಸುಟ್ಟ ಗಾಯಗಳಿಗೆ ಗುರಿಯಾದ ವಿದ್ಯಾರ್ಥಿಗಳು, ಇತರರಿಗೆ ಢಾಕಾ ವೈದ್ಯಕೀಯ ಕಾಲೇಜು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅಪಘಾತದ ಕಾರಣವನ್ನು ನಿರ್ಧರಿಸಲು, ಎಲ್ಲಾ ರೀತಿಯ ಸಹಾಯಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಮಧ್ಯಂತರ ಪ್ರಧಾನಿ ಮುಹಮ್ಮದ್ ಯೂನಸ್ ಹೇಳಿದ್ದಾರೆ. ಈ ಅಪಘಾತದಿಂದ ವಾಯುಪಡೆಗೆ, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಸಿಬ್ಬಂದಿ, ಇತರರು ಅನುಭವಿಸಿದ ನಷ್ಟವನ್ನು ಸರಿಪಡಿಸಲಾಗದು ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

> **ಚೀನಾ ನಿರ್ಮಿತ ಬಾಂಗ್ಲಾದೇಶ ವಾಯುಪಡೆಯ ತರಬೇತಿ ವಿಮಾನ ಢಾಕಾದ ಶಾಲಾ ಆವರಣದಲ್ಲಿ ಪತನಗೊಂಡಿದೆ. ಈ ದುರಂತದಲ್ಲಿ 19 ಜನರು ಮೃತಪಟ್ಟಿದ್ದಾರೆ, ನೂರಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ. ಮೃತಪಟ್ಟವರಲ್ಲಿ 16 ವಿದ್ಯಾರ್ಥಿಗಳು ಸೇರಿದ್ದಾರೆ. ತರಬೇತಿಗಾಗಿ ಬಳಸುತ್ತಿದ್ದ ಯುದ್ಧ ವಿಮಾನ ವಸತಿ ಪ್ರದೇಶದಲ್ಲಿ ಪತನಗೊಂಡಿದೆ. ಅಪಘಾತದ ಕಾರಣವನ್ನು ಕಂಡುಹಿಡಿಯಲು ತನಿಖೆ ನಡೆಯುತ್ತಿದ್ದು, ಗಾಯಗೊಂಡವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

**ಅಪಘಾತಕ್ಕೆ ಕಾರಣ ಏನು?**

**ಈ ಅಪಘಾತದ ಹಿಂದಿನ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಸೇನಾ ಅಧಿಕಾರಿಗಳು ತನಿಖೆ ನಡೆಸುತ್ತಿದ್ದು, ಶೀಘ್ರದಲ್ಲೇ ಪ್ರಾಥಮಿಕ ವರದಿಗಳನ್ನು ಬಿಡುಗಡೆ ಮಾಡುವ ನಿರೀಕ್ಷೆ ಇದೆ. ಸೋಮವಾರ ಪತನಗೊಂಡ ಎಫ್ –7 ಬಿಜಿಐ ಚೀನಾ ನಿರ್ಮಿತ ಯುದ್ಧ ವಿಮಾನವಾಗಿದ್ದು, ತರಬೇತಿ ಮತ್ತು ಸೀಮಿತ ಯುದ್ಧ ಸಂದರ್ಭಗಳಿಗಾಗಿ ಬಾಂಗ್ಲಾದೇಶ ಇದನ್ನು ಬಳಸುತ್ತಿದೆ.**

## ಮಿನಿ ನ್ಯೂಸ್

### 20 ರೂ.ಗಾಗಿ ತಾಯಿಯನ್ನೆ ಕೊಂದ ಪಾಪಿ ಮಗ

**ನೂಹ್:** ಮಾದಕ ದ್ರವ್ಯಕ್ಕೆ ದಾಸನಾಗಿದ್ದ ವ್ಯಕ್ತಿಯೊಬ್ಬ ಹಣ ಕೊಡಲಿಲ್ಲ ಎಂದು ತನ್ನ ಹೆತ್ತ ತಾಯಿಯನ್ನೇ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಹರಿಯಾಣದಲ್ಲಿ ನಡೆದಿದೆ. ಕೇವಲ 20 ರೂಪಾಯಿಗಾಗಿ 56 ವರ್ಷದ ತಾಯಿಯನ್ನು ಮಗ ಹತ್ಯೆ ಮಾಡಿದ್ದಾನೆ. ಜೈಸಿಂಗ್‌ಪುರ ಗ್ರಾಮದಲ್ಲಿ ಈ ಆಘಾತಕಾರಿ ಘಟನೆ ನಡೆದಿದೆ. ಹೆತ್ತ ತಾಯಿಯನ್ನೇ ಕಡಿದು ಕೊಂದ ಪಾಪಿ ಮಗನನ್ನು ಜೆಮ್‌ಶೆಡ್ ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಮಗ ಮಾದಕ ವ್ಯಸನಿಯಾಗಿದ್ದು, ಬಹಳ ದಿನಗಳಿಂದ ಗಾಂಜಾ ಮತ್ತು ಅಫೀಮು ಸೇವಿಸುತ್ತಿದ್ದಾನೆ ಎಂದು ತಿಳಿಸಿದ್ದಾರೆ. ಕೊಲೆ ಮಾಡಿದ ಬಳಿಕ ರಕ್ತ ಸಿಕ್ತ ಸ್ಥಿತಿಯಲ್ಲಿದ್ದ ತಾಯಿ ಜತೆಯೇ ಒಂದೇ ಮನೆಯಲ್ಲಿ ಆತ ಇಡೀ ರಾತ್ರಿ ಕಳೆದಿದ್ದಾನೆ. ಈತ ತನ್ನ ತಾಯಿ ರಜಿಯಾ ಬಳಿ 20 ರೂ. ಕೊಡುವಂತೆ ಕೇಳಿದ್ದ. ಆದರೆ ಅವರು ನಿರಾಕರಿಸಿದ್ದರು. ಅದಕ್ಕೆ ಕೋಪಗೊಂಡ ಮಗ ತಾಯಿಯನ್ನು ಕೊಡಲಿಯಿಂದ ಕಡಿದು ಹತ್ಯೆ ಮಾಡಿದ್ದಾನೆ. ಎಫ್‌ಐಆರ್ ದಾಖಲಿಸಲಾಗಿದೆ, ಮರಣೋತ್ತರ ಪರೀಕ್ಷೆಯ ನಂತರ ರಜಿಯಾ ಅವರ ಶವವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ. ರಜಿಯಾ ಅವರ ಪತಿ ಮುಬಾರಕ್ ಕೇವಲ ನಾಲ್ಕು ತಿಂಗಳ ಹಿಂದೆ ನಿಧನರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

### ಮಹಿಳೆ ಸೇರಿ ಎಂಟು ಮತಾಂತರಿಗಳ ಬಂಧನ

**ಪ್ರತಾಪ್‌ಗಢ:** ಉತ್ತರ ಪ್ರದೇಶದಲ್ಲಿ ಧಾರ್ಮಿಕ ಮತಾಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆ ಸೇರಿದಂತೆ ಎಂಟು ಜನರನ್ನು ಬಂಧಿಸಲಾಗಿದೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ರೈ ಅವರ ಪ್ರಕಾರ, ಜೇತ್ವಾರ ಪೊಲೀಸ್ ಠಾಣೆ ವ್ಯಾಪ್ತಿಯ ಕಚ್ಚಾ ದುಬೆ ಕಾ ಪೂರ್ವಾ ಗ್ರಾಮದಲ್ಲಿ ಪೊಲೀಸ್ ತಂಡ ಶೋಧ ನಡೆಸಿ ಆರೋಪಿಗಳನ್ನು ಬಂಧಿಸಿದೆ. ಶೋಧನೆಯ ಸಮಯದಲ್ಲಿ, ಪೊಲೀಸರು ಧಾರ್ಮಿಕ ಪೋಸ್ಟರ್‌ಗಳು, ಮರದ ಶಿಲುಬೆ, ಧಾರ್ಮಿಕ ಸಾಹಿತ್ಯ, ಯೇಸುಕ್ರಿಸ್ತನ ಛಾಯಾಚಿತ್ರಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿಗಳು ಧಾರ್ಮಿಕ ಮತಾಂತರದಲ್ಲಿ ಭಾಗಿಯಾಗಿದ್ದಾರೆ, ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಅಳವಡಿಸಿಕೊಳ್ಳುವಂತೆ ಆಕರ್ಷಿಸಿದ್ದಾರೆ ಎಂಬ ಆರೋಪದ ನಂತರ ಪೊಲೀಸರು ಕ್ರಮ ಕೈಗೊಂಡಿದ್ದಾರೆ ಎಂದು ಅವರು ಹೇಳಿದರು.

ಬಂಧಿತರನ್ನು ದೂಧ್‌ನಾಥ್ ನಿವಾಸಿ ರಾಮಚಂದ್ರ ವರ್ಮಾ, ಗೆಹರಿಯ ರಾಜೇಂದ್ರ ವರ್ಮಾ, ರಾಮ್ ಸನೇಹಿ ಸರೋಜ್, ಅಶೋಕ್ ಸರೋಜ್, ಸುರೇಂದ್ರ ಅಲಿಯಾಸ್ ಕಲ್ಲು ಸರೋಜ್, ಸಂಸಾರಿಪುರದ ಮುಖೇಶ್ ಕುಮಾರ್ ಸರೋಜ್, ಧಿಂಗ್ವಾಸ್ ನಿವಾಸಿ ಸುನಿಲ್ ಸರೋಜ್ ಎಂದು ಗುರುತಿಸಲಾಗಿದೆ. ಇದಲ್ಲದೆ, ಗುರುತು ಬಹಿರಂಗಪಡಿಸದ ಮಹಿಳೆಯನ್ನು ಸಹ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತಾ, ಉತ್ತರ ಪ್ರದೇಶ ಕಾನೂನುಬಾಹಿರ ಧಾರ್ಮಿಕ ಮತಾಂತರ ನಿಷೇಧ ಕಾಯ್ದೆ, 2021 ರ ಸೆಕ್ಷನ್ 3/5(1) ರ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### 76 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶ

**ಇಂಫಾಲ:** ಮಣಿಪುರ ಪೊಲೀಸ್, ಸಿಆರ್‌ಪಿಎಫ್ ನಡೆಸಿದ ಜಂಟಿ ಕಾರ್ಯಾಚರಣೆ ಸಂದರ್ಭದಲ್ಲಿ ಬರೊಬ್ಬರಿ 76 ಕೋಟಿ ರೂ. ಮೌಲ್ಯದ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ. ಅಸ್ಸಾಂ ರೈಫಲ್ಸ್ ತಂಡ ಜಿರಿಬಮ್ ಜಿಲ್ಲೆಯಿಂದ 76 ಕೋಟಿ ರೂ. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದೆ ಎಂದು ಅರೆಸೈನಿಕ ಪಡೆಹೇಳಿಕೆಯಲ್ಲಿ ತಿಳಿಸಿದೆ. ಖಚಿತ ಸುಳಿವಿನ ಮೇರೆಗೆ ಕಾರ್ಯನಿರ್ವಹಿಸಿದ ಭದ್ರತಾ ಪಡೆಗಳು 616 ಸೋಪ್ ಬಾಕ್ಸಿನಲ್ಲಿ ಅಡಗಿಸಿಟ್ಟಿದ್ದ ಹೆರಾಯಿನ್, 50,000 ನಿಷೇಧಿತ ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಪಡಿಸಿಕೊಂಡಿವೆ ಎಂದು ಅದು ಹೇಳಿದೆ.

ಜಿರಿಬಮ್ ಜಿಲ್ಲೆಯ ಬರಾಕ್ ನದಿಯಲ್ಲಿ ದೋಣಿಯ ಮೂಲಕ ಮಾದಕ ವಸ್ತುಗಳನ್ನು ಸಾಗಿಸಲಾಗುತ್ತಿತ್ತು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.ಮಾದಕ ವಸ್ತುಗಳ ವಶಪಡಿಸಿಕೊಳ್ಳುವಿಕೆಗಾಗಿ ಅಸ್ಸಾಂ ರೈಫಲ್ಸ್ ಕಾರ್ಯವನ್ನು ಮಾಜಿ ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಶ್ಲಾಘಿಸಿದ್ದಾರೆ. ಈ ಪ್ರದೇಶದಲ್ಲಿ ಪ್ರಮುಖ ಮಾದಕವಸ್ತು ಕಳ್ಳಸಾಗಣೆ ಪ್ರಯತ್ನಗಳನ್ನು ವಿಫಲಗೊಳಿಸುವಲ್ಲಿ ಅಸ್ಸಾಂ ರೈಫಲ್ಸ್ ನಿರ್ಣಾಯಕ ಕ್ರಮಕ್ಕಾ ಅವರನ್ನು ಶ್ಲಾಘಿಸುತ್ತೇನೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಗಡಿಯಾಚೆಗಿನ ಕಳ್ಳಸಾಗಣೆ ವಿರುದ್ಧದ ಕಠಿಣ ಕ್ರಮವನ್ನು ಮುಂದುವರಿಸಲು ಸಿಂಗ್ ಅರೆಸೈನಿಕ ಪಡೆಗೆ ಒತ್ತಾಯಿಸಿದರು. ನಮ್ಮ ಗಡಿ ಪ್ರದೇಶಗಳನ್ನು ಐತಿಹಾಸಿಕವಾಗಿ ಮಾದಕವಸ್ತು ಕಳ್ಳಸಾಗಣೆ ಮಾರ್ಗಗಳಾಗಿ ಬಳಸಲಾಗುತ್ತಿರುವುದರಿಂದ, ಹೊಸ ಕಾರಿಡಾರ್ ಗಳು ಹೊರಹೊಮ್ಮುವುದನ್ನು ತಡೆಯಲು ನಿರಂತರ ತೀವ್ರವಾದ ಕಣ್ಗಾವಲು ನಿರ್ಣಾಯಕವಾಗಿದೆ ಎಂದು ಹೇಳಿದರು.

### ನ್ಯಾಯಾಂಗದ ಪ್ರಕ್ರಿಯೆ ರಾಜಕೀಯ ಗೊಳಿಸಬೇಡಿ: ಸುಪ್ರೀಂ ಎಚ್ಚರಿಕೆ

**ಶಿಕ್ಷಕರ ನೇಮಕಾತಿ ಹಗರಣ**

**ನವದೆಹಲಿ:** ನ್ಯಾಯಾಂಗಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ರಾಜಕೀಯಗೊಳಿಸುವುದರ ವಿರುದ್ಧ ಸುಪ್ರೀಂ ಕೋರ್ಟ್ ಸೋಮವಾರ ಎಚ್ಚರಿಕೆ ನೀಡಿದೆ. ಶಿಕ್ಷಕರ ನೇಮಕಾತಿ ಹಗರಣ ಪ್ರಕರಣದ ತೀರ್ಪಿನ ಕುರಿತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೀಡಿದ ಹೇಳಿಕೆಗಳಿಗೆ ಅವರ ವಿರುದ್ಧ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ಸಮಯದಲ್ಲಿ ಈ ಹೇಳಿಕೆ ನೀಡಿದೆ.

ನಿಮ್ಮ ರಾಜಕೀಯ ಹೋರಾಟವನ್ನು ದಯವಿಟ್ಟು ಈ ನ್ಯಾಯಾಲಯದ ಹೊರಗೆ ಮಾಡಿ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ, ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠ ಹೇಳಿತು. ಮಮತಾ ಅವರು ನ್ಯಾಯಾಂಗದ ಅಧಿಕಾರವನ್ನು ದುರ್ಬಲಗೊಳಿಸುವ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಆರೋಪಿಸಿ ಆತ್ಮದೀಪ್ ಚಾರಿಟಬಲ್ ಟ್ರಸ್ಟ್ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸುತ್ತಿದೆ. ಅರ್ಜಿದಾರರ ಪರ ಹಾಜರಾದ ವಕೀಲ ಮಣಿಂದರ್ ಸಿಂಗ್, ವಿಚಾರಣೆಯನ್ನು ಮುಂದೂಡುವಂತೆ ಪೀಠವನ್ನು ಒತ್ತಾಯಿಸಿದರಲ್ಲದೆ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಪ್ರಾರಂಭಿಸಲು ಒಪ್ಪಿಗೆ ನೀಡುವಂತೆ ಅಟಾರ್ನಿ ಜನರಲ್ ಅವರಿಗೆ ಮನವಿಯನ್ನು ಕಳುಹಿಸಲಾಗಿದೆ ಎಂದರು. ಅದಕ್ಕೆ ಸಿಜೆಐ, ಒಪ್ಪಿಗೆ ಸಿಗಲಿದೆ ಎಂಬುದು ನಿಮಗೆ ಖಚಿತವಾಗಿದೆಯೇ? ನ್ಯಾಯಾಲಯದ ಮುಂದೆ ರಾಜಕೀಯ ತರಲು ಪ್ರಯತ್ನಿಸಬೇಡಿ. ನಿಮ್ಮ ರಾಜಕೀಯ ಹೋರಾಟವನ್ನು ಬೇರೆ ಎಲ್ಲಾದರೂ ಮಾಡಿ ಎಂದು ತರಾಟೆಗೆ ತೆಗೆದುಕೊಂಡರು. ಪೀಠವು ವಿಚಾರಣೆಯನ್ನು ನಾಲ್ಕು ವಾರಗಳ ಅವಧಿಗೆ ಮುಂದೂಡಿತು.

# ಎಕ್ಕ ಚಿತ್ರಕ್ಕೆ ಸರಿ ಸಮಾನವಾಗಿ ಗಳಿಕೆ ಮಾಡುತ್ತಿದೆ



ಕಿರೀಟಿ ರೆಡ್ಡಿ ಅವರ ಚೊಚ್ಚಲ ಚಿತ್ರ 'ಜೂನಿಯರ್' ಬಾಕ್ಸ್ ಆಫೀಸ್‌ನಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿದೆ. ಬಾಕ್ಸ್ ಆಫೀಸ್ ಕಲೆಕ್ಷನ್ ವಿಚಾರದಲ್ಲಿ 'ಎಕ್ಕ' ಚಿತ್ರಕ್ಕೆ ಸರಿಸಮಾನವಾದ ಸ್ಪರ್ಧೆ ನೀಡುತ್ತಿದೆ. ಇದು ಕಿರೀಟಿಗೆ ಪರಿಪೂರ್ಣ ಲಾಂಚ್ ಆಗಿದೆ ಎಂದು ಹೇಳಬಹುದು. ಚಿತ್ರದಲ್ಲಿ ಅವರ ನಟನೆ ಮತ್ತು ನೃತ್ಯಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಂದು ಯುವ ಹೀರೋಗೆ ಸಿನಿಮಾ ರಂಗದಲ್ಲಿ ಯಶಸ್ಸು ಸಿಗಬೇಕು ಎಂದರೆ ಆರಂಭದ ಸಿನಿಮಾಗಳೇ ಯಶಸ್ಸು ಕಾಣಬೇಕು. ಆಗ ಚಿತ್ರರಂಗದ ಹಾದಿ ಸುಗಮ ಆಗುತ್ತದೆ. ಮುಂದಿನ ದಿನಗಳಲ್ಲಿ ಒಳ್ಳೆಯ ಆಫರ್‌ಗಳು ಬರುತ್ತಾ ಹೋಗುತ್ತವೆ.

ಈಗ 'ಜೂನಿಯರ್' ಸಿನಿಮಾದಲ್ಲಿ ನಟಿಸಿರೋ ಕಿರೀಟಿ ರೆಡ್ಡಿಗೂ ಅಂಥದ್ದೇ ಒಂದು ಪರ್ಫೆಕ್ಟ್ ಲಾಂಚ್ ಸಿಕ್ಕಿದೆ. 'ಜೂನಿಯರ್' ಚಿತ್ರವನ್ನು ಜನರು ಮೆಚ್ಚಿಕೊಂಡಿದ್ದಾರೆ. ಅದೇ ರೀತಿ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಕಲೆಕ್ಷನ್ ಮಾಡುತ್ತಿದೆ. 'ಎಕ್ಕ' ಹಾಗೂ 'ಜೂನಿಯರ್' ಸರಿ ಸಮಾನವಾಗಿ ಕಲೆಕ್ಷನ್ ಮಾಡುತ್ತಿವೆ. 'ಜೂನಿಯರ್' ಸಿನಿಮಾ ಕಿರೀಟಿ ನಟನೆಯ ನಟನೆಯ ಮೊದಲ ಚಿತ್ರ. ಜನಪ್ರಿಯ ರಾಜಕಾರಣಿ ಜನಾರ್ಧನ್ ರೆಡ್ಡಿ ಅವರ ಪುತ್ರನೇ ಕಿರೀಟಿ. ಅವರು ಪರ್ಫೆಕ್ಟ್ ಲಾಂಚ್‌ಗಾಗಿ ಕಾಯುತ್ತಿದ್ದರು. ಆ ರೀತಿಯ ಲಾಂಚ್ ಈ ಚಿತ್ರದ ಮೂಲಕ ಸಿಕ್ಕಿದೆ. ಕನ್ನಡ ಮಾತ್ರವಲ್ಲದೆ ತೆಲುಗು ಭಾಷೆಯಲ್ಲೂ ಸಿನಿಮಾ ರಿಲೀಸ್ ಆಗಿದ್ದು ಜನರು ಅಲ್ಲಿಯೂ ಚಿತ್ರವನ್ನು ಮೆಚ್ಚಿಕೊಂಡಿದ್ದಾರೆ. 'ಜೂನಿಯರ್' ಚಿತ್ರ ಮೂರು ದಿನಕ್ಕೆ 5.40 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ!

# ಮೋಟ್ವಾನಿ-ಸೊಹೈಲ್ ದಂಪತಿ ಮಧ್ಯೆ ಯಾವುದೂ ಸರಿ ಇಲ್ಲ



ದಕ್ಷಿಣ ಭಾರತದಲ್ಲಿ ಬ್ಯುಸಿ

ಹನ್ಸಿಕಾ ಮೋಟ್ವಾನಿ ಮತ್ತು ಸೊಹೈಲ್ ಖತುರಿಯಾ ಅವರ 2022ರ ವಿವಾಹ ಆದರು. ಇವರ ಸಂಬಂಧದಲ್ಲಿ ಬಿಕ್ಕಟ್ಟು ಉಂಟಾಗಿದೆ ಎಂಬ ವದಂತಿಗಳು ಹರಡುತ್ತಿವೆ. ಸೊಹೈಲ್ ಅವರು ಇದನ್ನು ನಿರಾಕರಿಸಿದ್ದಾರೆ, ಆದರೆ ಅವರ ಸ್ಪಷ್ಟೀಕರಣವು ಅಭಿಮಾನಿಗಳನ್ನು ತೃಪ್ತಿಪಡಿಸಿಲ್ಲ. ಹನ್ಸಿಕಾ ತಮ್ಮ ತಾಯಿಯ ಮನೆಗೆ ಹೋಗಿರುವುದು ಇದಕ್ಕೆ ಪುಷ್ಠಿ ನೀಡುತ್ತದೆ. ಈ ಸುದ್ದಿಯಿಂದ ಅಭಿಮಾನಿಗಳು ಆಘಾತಕ್ಕೊಳಗಾಗಿದ್ದಾರೆ.

ಹನ್ಸಿಕಾ ಮೋಟ್ವಾನಿ ಹಾಗೂ ಸೊಹೈಲ್ ಖತುರಿಯಾ ಅವರು 2022ರಲ್ಲಿ ವಿವಾಹ ಆದರು. ಇವರ ವಿವಾಹ ಆಗಿ ಮೂರು ವರ್ಷಗಳು ಕಳೆದಿವೆ.

ಆದರೆ, ಈ ದಾಂಪತ್ಯದಲ್ಲಿ ಯಾವುದೂ ಸರಿ ಇಲ್ಲ ಎಂಬ ವದಂತಿಗಳು ಹುಟ್ಟಿಕೊಂಡಿದೆ ಎಂದರೆ ನಂಬಲೇಬೇಕು. ಈ ವಿಚಾರ ಕೇಳಿ ಫ್ಯಾನ್ಸ್ ಶಾಕ್ ಆಗಿದ್ದಾರೆ. ಸೊಹೈಲ್ ಅವರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ, ಹನ್ಸಿಕಾ ಅವರ ಸ್ಪಷ್ಟನೆ ಸರಿ ಇಲ್ಲ ಎಂದು ಫ್ಯಾನ್ಸ್ ಆರೋಪಿಸುತ್ತಾ ಇದ್ದಾರೆ.

ಹನ್ಸಿಕಾ ಮೋಟ್ವಾನಿ ಅವರು ಡಿಸೆಂಬರ್ 2022ರಲ್ಲಿ ವಿವಾಹ ಆದರು. ಇವರು ಮದುವೆ ಆದ ಬಳಿಕ ಹಲವು ಕಡೆಗಳಲ್ಲಿ ಸುತ್ತಾಟ ನಡೆಸಿದ್ದಾರೆ. ಈಗ ಹನ್ಸಿಕಾ ಹಾಗೂ ಸೊಹೈಲ್ ಸಂಬಂಧದಲ್ಲಿ ಬಿರುಕು ಉಂಟಾಗಿದೆ. ಪರಿಣಾಮ ಹನ್ಸಿಕಾ ಅವರು ತಾಯಿ ಮನೆಗೆ ಶಿಫ್ಟ್ ಆಗಿದ್ದಾರಂತೆ. ಅಂದರೆ ಇಬ್ಬರೂ ಬೇರೆ ಆಗಿ ವಾಸ ಮಾಡುತ್ತಿರುವುದು ಮೂಲಗಳಿಂದ ಸ್ಪಷ್ಟವಾಗಿದೆ ಎಂದೇ ಹೇಳಬಹುದು. ಈ ಬಗ್ಗೆ ಸೊಹೈಲ್ ಅವರು ಸ್ಪಷ್ಟನೆ ನೀಡಿದ್ದಾರೆ. 'ಇದು ಸತ್ಯ ಅಲ್ಲ' ಎಂದು ಹೇಳಿದ್ದಾರೆ. ಆದರೆ, ಮುಂದೆ ಏನನ್ನೂ ಹೇಳಿಲ್ಲ. ಈ ವಿಚಾರ ಸದ್ಯ ಚರ್ಚೆಯ ಕೇಂದ್ರ ಬಿಂದು ಆಗಿದೆ. ಅದ್ದೂರಿ ವಿವಾಹ ಇವರು ಈ ರೀತಿ ಬೇರೆ ಆಗುತ್ತಿದ್ದಾರೆ ಎಂಬ ವಿಚಾರ ತಿಳಿದು ಫ್ಯಾನ್ಸ್ ಬೇಸರಗೊಂಡಿದ್ದಾರೆ. ಜೈಪುರದಲ್ಲಿ ಹನ್ಸಿಕಾ ಹಾಗೂ ಸೊಹೈಲ್ ಅವರು ವಿವಾಹ ಆದರು. ಇವರ ಮದುವೆ ಅದ್ದೂರಿಯಾಗಿ ನೆರವೇರಿತು. ಈಗ ಇವರು ಬೇರೆ ಆಗುತ್ತಿರುವುದು ಸಾಕಷ್ಟು ಶಾಕಿಂಗ್ ಎನಿಸಿದೆ. ಸೊಹೈಲ್‌ಗೆ ಇದು ಮೊದಲ ಮದುವೆ ಅಲ್ಲವೇ ಅಲ್ಲ. ಈ ಮೊದಲು ಅವರು ರಿಂಕಿ ಎಂಬುವವರನ್ನು ಮದುವೆ ಆಗಿದ್ದರು. ನಂತರ ವಿಚ್ಛೇದನ ಆಯಿತು.

# 3 ವರ್ಷದ ಸಿನಿ ಪಯಣದ ಒಂದು ಝಲಕ್



ರಾಜಕುಮಾರ, ಕೆಜಿಎಫ್, ಸಲಾರ್, ಕಾಂತಾರಾದಂತಹ ಬ್ಲಾಕ್ ಬಸ್ಟರ್ ಚಿತ್ರಗಳನ್ನು ನೀಡಿದ ಹೊಂಬಾಳೆ ಫಿಲ್ಮ್ಸ್, ಇಂದು ನಟ ಮತ್ತು ನಿರ್ದೇಶಕ ರಿಷಬ್ ಶೆಟ್ಟಿ ಅವರ 'ಕಾಂತಾರ ಚಾಪ್ಟರ್ 1' ಸಿನಿಮಾದ ಮೇಕಿಂಗ್ ವಿಡಿಯೋವನ್ನು ರಿಲೀಸ್ ಮಾಡಿದೆ. ಈ ವಿಡಿಯೋ, ಸಿನಿಮಾಕ್ಕಾಗಿ ಹಾಕಿದ ಭಾರಿ ಶ್ರಮ ಮತ್ತು ಅದರ ಅದ್ದೂರಿತನವನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ಪ್ರೇಕ್ಷಕರಿಗೆ ನೀಡಿದೆ. ಚಿತ್ರೀಕರಣ ಮುಗಿದ ಸಂಭ್ರಮದಲ್ಲಿ ಬಿಡುಗಡೆಯಾಗಿರುವ ಈ ವಿಡಿಯೋ, 250 ದಿನಗಳಿಗೂ ಹೆಚ್ಚು ಕಾಲ ನಡೆದ ಶೂಟಿಂಗ್ ಪಯಣವನ್ನು ತೋರಿಸುತ್ತದೆ. ಮೂರು ವರ್ಷಗಳ ನಿರಂತರ ಶ್ರಮದ ಫಲವೇ ಈ ಸಿನಿಮಾ. ಸಾವಿರಾರು ಸಿಬ್ಬಂದಿ ಪ್ರತಿ ಹಂತದಲ್ಲೂ ಹಗಲಿರುಳು ಕೆಲಸ ಮಾಡಿದ್ದಾರೆ. ಈ ಮೇಕಿಂಗ್ ವಿಡಿಯೋ ರಿಷಬ್ ಶೆಟ್ಟಿ ಅವರ ಕಥೆ ಹೇಳುವ ಶೈಲಿ ಮತ್ತು ಅವರ ನಿಖರತೆಗೆ ಒಂದು ಗೌರವವಾಗಿದೆ. 'ಕಾಂತಾರ ಚಾಪ್ಟರ್ 1' ಹೊಂಬಾಳೆ ಫಿಲ್ಮ್ಸ್‌ನ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿದೆ. ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್, ಛಾಯಾಗ್ರಾಹಕ ಅರವಿಂದ್ ಕಶ್ಯಪ್ ಮತ್ತು ಪ್ರೊಡಕ್ಷನ್ ಡಿಸೈನರ್ ವಿನೇಶ್ ಬಂಗ್ಲನ್ ಸೇರಿದಂತೆ ಇಡೀ ತಂಡ ಸಿನಿಮಾಗೆ ಅದ್ಭುತ ದೃಶ್ಯ ಮತ್ತು ಭಾವನಾತ್ಮಕ ಸ್ಪರ್ಶ ನೀಡಿದ್ದಾರೆ.



ಟೈಟ್ ಶೆಡ್ಯೂಲ್ ಶೂಟಿಂಗ್

# ಪ್ರಣಂ ಸಿನಿಮಾ ಹಾಡಿಗೆ ಸಂಜಿತ್ ದನಿ

ಪುರಾತನ ಫಿಲಂಸ್ ನಿರ್ಮಾಣದ, ಶ್ರೀಕಾಂತ್ ಹುಣಸೂರು ನಿರ್ದೇಶನದ ಹಾಗೂ ಡೈನಾಮಿಕ್ ಸ್ಟಾರ್ ದೇವರಾಜ್ ಅವರ ದ್ವಿತೀಯ ಪುತ್ರ ಪ್ರಣಂ ದೇವರಾಜ್ ನಾಯಕನಾಗಿ ಹಾಗೂ 'ದಿಯಾ' ಖ್ಯಾತಿಯ ಖುಷಿ ರವಿ ನಾಯಕಿಯಾಗಿ ನಟಿಸಿರುವ 's/o ಮುತ್ತಣ್ಣ' ಚಿತ್ರಕ್ಕಾಗಿ ಯೋಗರಾಜ್ ಭಟ್ ಅವರು ಬರೆದಿರುವ, ಸಂಜಿತ್ ಹೆಗ್ಡೆ ಹಾಡಿರುವ ಹಾಗೂ ಸಚಿನ್ ಬಸ್ರೂರ್ ಸಂಗೀತ ನೀಡಿರುವ 'ಮಿಡ್ ನೈಟ್ ರಸ್ತೆಯಲ್ಲಿ' ಎಂಬ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು. ಬಿಡುಗಡೆಯಾದ ಬೆನ್ನಲ್ಲೇ ಹಾಡಿಗೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ಅಲ್ಲದೇ ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ. ಹಾಡು ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.

ನಮ್ಮ ಚಿತ್ರದಲ್ಲಿ ನಾಲ್ಕು ಹಾಡುಗಳಿದೆ. ಎರಡನೇ ಹಾಡು ಬಿಡುಗಡೆಯಾಗಿದೆ. ಮೊದಲು ಹಾಡು 'ಕಮ್ಮಂಗಿ ನನ್ ಮಗನೇ' ಸಹ ಮೆಚ್ಚುಗೆ ಪಡೆದುಕೊಂಡಿದೆ. ಬಿಡುಗಡೆಯಾಗಿರುವ 'ಮಿಡ್ನೈಟ್ ರಸ್ತೆಯಲ್ಲಿ' ಹಾಡನ್ನು ಸಂಜಿತ್ ಹೆಗ್ಡೆ ಹಾಡಿದ್ದಾರೆ. ಯೋಗರಾಜ್ ಭಟ್ ಅವರು ಬರೆದಿದ್ದಾರೆ. ಉಳಿದ 2 ಹಾಡುಗಳು ಸಹ ಸದ್ಯದಲ್ಲೇ ಬಿಡುಗಡೆಯಾಗಲಿದೆ.

# 3 ದಿನಕ್ಕೆ 100 ಕೋಟಿ ಗಳಿಸಿದ ಸೈಯಾರ



ಬಾಲಿವುಡ್‌ನಲ್ಲಿ ಹಿರಿಯ ನಟರ ಚಿತ್ರಗಳು ನಿರೀಕ್ಷಿತ ಯಶಸ್ಸು ಕಾಣದಿರುವಾಗ, ಯುವ ನಟ ಅಹಾನ್ ಪಾಂಡೆ ಅವರ 'ಸೈಯಾರ' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಮಟ್ಟದ ಗೆಲುವು ಕಂಡಿದೆ. ಮೂರು ದಿನಗಳಲ್ಲಿ 100 ಕೋಟಿ ರೂಪಾಯಿಗೂ ಅಧಿಕ ಕಲೆಕ್ಷನ್ ಮಾಡಿರುವ ಈ ಚಿತ್ರವು, ಆಶಿಕಿ 2 ಶೈಲಿಯಲ್ಲಿದೆ. ಅಹಾನ್ ಪಾಂಡೆ ಅವರ ಅಭಿನಯ ಹಾಗೂ ಚಿತ್ರದ ಕಥಾವಸ್ತು ಪ್ರೇಕ್ಷಕರನ್ನು ಸೆಳೆದಿದೆ ಎಂದು ಹೇಳಬಹುದು. 2025ರಲ್ಲಿ ಸ್ಟಾರ್ ಹೀರೋಗಳು ದೊಡ್ಡ ಮಟ್ಟದಲ್ಲಿ ಗೆಲುವು ಕಂಡಿಲ್ಲ. ಆದರೆ, ಯುವ ಹೀರೋಗಳು ಅಬ್ಬರಿಸುತ್ತಿದ್ದಾರೆ. ಕನ್ನಡದಲ್ಲಿ ಯುವ ಹಾಗೂ ಕಿರೀಟಿ ನಟನೆಯ 'ಎಕ್ಕ' ಹಾಗೂ 'ಜೂನಿಯರ್' ಸಿನಿಮಾಗಳು ಯಶಸ್ಸು ಕಂಡಿವೆ. ಕಾಕತಾಳೀಯ ಎಂಬಂತೆ ಹಿಂದಿಯ ಹೊಸ ಹೀರೋ ಅಹಾನ್ ಪಾಂಡೆ ಕೂಡ ಗೆಲುವು ಕಂಡಿದ್ದಾರೆ. ಅವರ ಅಭಿನಯದ ಹಿಂದಿಯ 'ಸೈಯಾರ' ಸಿನಿಮಾ ಜುಲೈ 18ರಂದು ರಿಲೀಸ್ ಆಗಿ ಬಾಕ್ಸ್ ಆಫೀಸ್‌ನಲ್ಲಿ ಹಬ್ಬ ಮಾಡುತ್ತಿದೆ. ಸ್ಟಾರ್ ಹೀರೋಗಳ ಚಿತ್ರವನ್ನೂ ಮೀರಿದೆ. ಮೂರೇ ದಿನಕ್ಕೆ ಸಿನಿಮಾ 100 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. 'ಆಶಿಕಿ 2' ರಿತೀಯ ಚಿತ್ರಗಳನ್ನು ನೀಡಿರೋ ಮೋಹಿತ್ ಸೂರಿ ಅವರು 'ಸೈಯಾರ' ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಚಿತ್ರ ಕೂಡ 'ಆಶಿಕಿ 2' ಸ್ಟೈಲ್‌ನಲ್ಲಿಯೇ ಮೂಡಿ ಬಂದಿದೆ. ಈ ಚಿತ್ರದ ಮೂಲಕ ಅಹಾನ್ ಪಾಂಡೆ ಬಣ್ಣದ ಲೋಕಕ್ಕೆ ಕಾಲಿಟ್ಟಿದ್ದಾರೆ. ಅಹಾನ್ ಬಾಲಿವುಡ್ ಹಿರಿಯ ನಟ ಚಂಕಿ ಪಾಂಡೆ ಸಹೋದರ ಚಿಕ್ಕಿ ಪಾಂಡೆ ಮಗ. ಅಹಾನ್ ಬಾಕ್ಸ್ ಆಫೀಸ್ ಆಳುವ ಕೆಲಸ ಮಾಡುತ್ತಿದ್ದಾರೆ.

# ಟಿ10 ಪಂದ್ಯದಲ್ಲಿ ತೂಫಾನ್ ಸೆಂಚುರಿ



ಬರೋಬ್ಬರಿ 13 ಸಿಕ್ಸ್


ಆಸ್ಟ್ರೇಲಿಯಾದ ಸ್ಫೋಟಕ ದಾಂಡಿಗ ಜೋಶ್ ಬ್ರೌನ್ ಅಕ್ಷರಶಃ ಅಬ್ಬರಿಸಿದ್ದಾರೆ. ಅದು ಕೂಡ ಟಿ10 ಲೀಗ್‌ನಲ್ಲಿ ಭರ್ಜರಿ ಸೆಂಚುರಿ ಸಿಡಿಸುವ ಮೂಲಕ ಎಂಬುದೇ ಅಚ್ಚರಿ. ವೆಸ್ಟ್ ಇಂಡೀಸ್‌ನಲ್ಲಿ ನಡೆಯುತ್ತಿರುವ ಮ್ಯಾಕ್ಸ್60 ಟಿ10 ಲೀಗ್‌ನ 11ನೇ ಪಂದ್ಯದಲ್ಲಿ ಜೋಶ್ ಸ್ಫೋಟಕ ಶತಕ ಬಾರಿಸಿದ್ದಾರೆ. ಈ ಪಂದ್ಯದಲ್ಲಿ ಕೆರಿಬಿಯನ್ ಟೈಗರ್ಸ್ ಹಾಗೂ ಗ್ರ್ಯಾಂಡ್ ಕೇಮನ್ ಫಾಲ್ಕನ್ಸ್ ತಂಡಗಳು ಮುಖಾಮುಖಿಯಾಗಿದ್ದವು.

ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕೆರಿಬಿಯನ್ ಟೈಗರ್ಸ್ ಪರ ಆರಂಭಿಕನಾಗಿ ಕಣಕ್ಕಿಳಿದ ಜೋಶ್ ಬ್ರೌನ್ ವಿಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರು. ಮೊದಲ ಓವರ್‌ನಿಂದಲೇ ಸಿಡಿಲಬ್ಬರ ಶುರು ಮಾಡಿದ ಬ್ರೌನ್ ಮೈದಾನದ ಮೂಲೆ ಮೂಲೆಗೂ ಸಿಕ್ಸ್-ಫೋರ್‌ಗಳ ಸುರಿಮಳೆಗೈದರು. ಈ ಮೂಲಕ ಕೇವಲ 32 ಎಸೆತಗಳಲ್ಲಿ ಶತಕ ಪೂರೈಸಿದರು.

ಭರ್ಜರಿ ಸೆಂಚುರಿ ಪೂರೈಸಿದ ಬಳಿಕ ಮೂರು ಎಸೆತಗಳನ್ನು ಎದುರಿಸಿದ ಜೋಶ್ ಬ್ರೌನ್ ಮತ್ತೆರಡು ಸಿಕ್ಸ್ ಸಿಡಿಸಿದರು. ಈ ಮೂಲಕ ಕೇವಲ 35 ಎಸೆತಗಳಲ್ಲಿ 13 ಭರ್ಜರಿ ಸಿಕ್ಸ್ ಹಾಗೂ 4 ಫೋರ್‌ಗಳೊಂದಿಗೆ 115 ರನ್ ಚಚ್ಚಿದರು. ಈ ಶತಕದ ನೆರವಿನೊಂದಿಗೆ ಕೆರಿಬಿಯನ್ ಟೈಗರ್ಸ್ ತಂಡವು 10 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 147 ರನ್ ಕಲೆಹಾಕಿತು. 60 ಎಸೆತಗಳಲ್ಲಿ 148 ರನ್‌ಗಳ ಗುರಿ ಪಡೆದ ಗ್ರ್ಯಾಂಡ್ ಕೇಮನ್ ಫಾಲ್ಕನ್ಸ್ ತಂಡವು 10 ಓವರ್‌ಗಳಲ್ಲಿ ಕಲೆಹಾಕಿದ್ದು ಕೇವಲ 58 ರನ್‌ಗಳು ಮಾತ್ರ. ಈ ಮೂಲಕ ಕೆರಿಬಿಯನ್ ಟೈಗರ್ಸ್ ತಂಡವು 88 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಸ್ಫೋಟಕ ಶತಕ ಸಿಡಿಸಿದ ಜೋಶ್ ಬ್ರೌನ್ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಪಡೆದರು.

ಅಂದಹಾಗೆ ಜೋಶ್ ಬ್ರೌನ್ ಈ ಹಿಂದೆ ಬಿಗ್ ಬ್ಯಾಷ್ ಲೀಗ್‌ನಲ್ಲಿ 41 ಎಸೆತಗಳಲ್ಲಿ ಶತಕ ಸಿಡಿಸಿದ್ದರು. ಈ ವೇಳೆ ಅವರ ಬ್ಯಾಟ್‌ನಿಂದ ಸಿಡಿದ ಸಿಕ್ಸ್‌ಗಳ ಸಂಖ್ಯೆ 12. ಅಷ್ಟೇ ಅಲ್ಲದೆ ಕಳೆದ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಹರಾಜಿಗಾಗಿ ಹೆಸರು ನೋಂದಾಯಿಸಿಕೊಂಡಿದ್ದರು.

# ಭಾರತ ಆಡಲ್ಲಾಂದ್ರೆ ಮೊದಲೇ ಹೇಳಬೇಕಿತ್ತು



ಶಾಹಿದ್ ಅಫ್ರಿದಿ ಆಕ್ರೋಶ

ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಎಂಬುದು ಮಾಜಿ ಕ್ರಿಕೆಟಿಗರ ಟಿ20 ಟೂರ್ನಿ. ಈ ಟೂರ್ನಿಯಲ್ಲಿ ಇಂಡಿಯಾ ಚಾಂಪಿಯನ್ಸ್, ಪಾಕಿಸ್ತಾನ್ ಚಾಂಪಿಯನ್ಸ್, ಇಂಗ್ಲೆಂಡ್ ಚಾಂಪಿಯನ್ಸ್, ಆಸ್ಟ್ರೇಲಿಯಾ ಚಾಂಪಿಯನ್ಸ್, ವೆಸ್ಟ್ ಇಂಡೀಸ್ ಚಾಂಪಿಯನ್ಸ್ ಹಾಗೂ ಸೌತ್ ಆಫ್ರಿಕಾ ಚಾಂಪಿಯನ್ಸ್ ತಂಡಗಳು ಕಣಕ್ಕಿಳಿಯುತ್ತಿವೆ.

ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯಲ್ಲಿ ಭಾನುವಾರ ನಡೆಯಬೇಕಿದ್ದ ಇಂಡಿಯಾ ಚಾಂಪಿಯನ್ಸ್ ಹಾಗೂ ಪಾಕಿಸ್ತಾನ್ ಚಾಂಪಿಯನ್ಸ್ ತಂಡಗಳ ನಡುವಣ ಪಂದ್ಯವನ್ನು ರದ್ದುಗೊಳಿಸಲಾಗಿತ್ತು. ಪಾಕಿಸ್ತಾನ್ ವಿರುದ್ಧದ ಈ ಪಂದ್ಯದಿಂದ ಭಾರತೀಯ ಆಟಗಾರರು ಹಿಂದೆ ಸರಿದ ಹಿನ್ನಲೆಯಲ್ಲಿ ಮ್ಯಾಚ್ ಕ್ಯಾನ್ಸಲ್ ಮಾಡಲಾಗಿದೆ. ಇಂಡಿಯಾ ಚಾಂಪಿಯನ್ಸ್ ತಂಡದ ಆಟಗಾರರಾದ ಇರ್ಫಾನ್ ಪಠಾಣ್, ಹರ್ಭಜನ್ ಸಿಂಗ್, ಯೂಸುಫ್ ಪಠಾಣ್, ಸುರೇಶ್ ರೈನಾ ಹಾಗೂ ಶಿಖರ್ ಧವನ್ ಪಾಕ್ ವಿರುದ್ಧ ಕಣಕ್ಕಿಳಿಯುವುದಿಲ್ಲ ಎಂದು ತಿಳಿಸಿದ ಬೆನ್ನಲ್ಲೇ, ಪಂದ್ಯವನ್ನು ರದ್ದುಗೊಳಿಸಲು ನಿರ್ಧರಿಸಲಾಯಿತು. ಹೀಗೆ ದಿಢೀರ್ ಮ್ಯಾಚ್ ಕ್ಯಾನ್ಸಲ್ ಮಾಡಿರುವುದಕ್ಕೆ ಪಾಕಿಸ್ತಾನ್ ತಂಡದ ಮಾಜಿ ನಾಯಕ ಶಾಹಿದ್ ಅಫ್ರಿದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾಧ್ಯಮದೊಂದಿಗೆ ಮಾತನಾಡಿದ ಶಾಹಿದ್ ಅಫ್ರಿದಿ, ನಾವು ಕ್ರಿಕೆಟ್ ಆಡಲು ಇಲ್ಲಿದ್ದೇವೆ. ಅಲ್ಲದೆ ನಾನು ಯಾವಾಗಲೂ ಕ್ರಿಕೆಟ್ ಅನ್ನು ರಾಜಕೀಯದಿಂದ ದೂರವಿಡಲು ಬಯಸುತ್ತೇನೆ. ಏಕೆಂದರೆ ಒಬ್ಬ ಆಟಗಾರನು ಉತ್ತಮ ರಾಯಭಾರಿಯಾಗಿರಬೇಕು. ಆದರೆ ಈಗ ಭಾರತೀಯ ಆಟಗಾರರು ಮಾಡಿದ್ದೇನು ಭಾರತೀಯ ಆಟಗಾರರು ಪಾಕಿಸ್ತಾನ್ ವಿರುದ್ಧ ಕ್ರಿಕೆಟ್ ಆಡಲು ಬಯಸದಿದ್ದರೆ, ತಂಡ ಬರುವ ಮೊದಲೇ ಅವರು ಅದನ್ನು ನಿರಾಕರಿಸಬೇಕಿತ್ತು. ಆದರೆ ನೀವು ಇಲ್ಲಿಗೆ ಬಂದಿದ್ದೀರಿ, ಅಭ್ಯಾಸಗಳನ್ನು ಸಹ ನಡೆಸಿದ್ದೀರಿ. ನಂತರ ಇದ್ದಕ್ಕಿದ್ದಂತೆ ಒಂದೇ ದಿನದಲ್ಲಿ ಎಲ್ಲವನ್ನೂ ಬದಲಾಯಿಸಿದ್ದೀರಿ.

ನಿಮಗೆ ನಮ್ಮೊಂದಿಗೆ ಆಡಲು ಇಷ್ಟವಿಲ್ಲದಿದ್ದರೆ ಮೊದಲೇ ತಿಳಿಸಬಹುದಿತ್ತು. ಅದರ ಬದಲಾಗಿ ಅಭ್ಯಾಸಗಳನ್ನು ನಡೆಸಿ, ಎಲ್ಲಾ ತಯಾರಿಗಳನ್ನು ಮಾಡಿ ದಿಢೀರನೇ ಪಂದ್ಯದಿಂದ ಹಿಂದೆ ಸರಿದಿದ್ದೀರಿ. ಇದು ಸರಿಯಾದ ನಡೆಯಲ್ಲ ಎಂದು ಶಾಹಿದ್ ಅಫ್ರಿದಿ ಆಕ್ರೋಶ ಹೊರಹಾಕಿದ್ದಾರೆ.

# ಎದ್ದು ಬಿದ್ದು ಓಡಿದರೂ ರನೌಟ್ ಆದ ಫಖರ್



ಢಾಕಾದಲ್ಲಿ ನಡೆದ ಬಾಂಗ್ಲಾದೇಶ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಪಾಕಿಸ್ತಾನ್ ತಂಡವು ಹೀನಾಯ ಸೋಲನುಭವಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ಪರ ಅತೀ ಹೆಚ್ಚು ರನ್ ಕಲೆಹಾಕಿದ್ದು ಆರಂಭಿಕ ದಾಂಡಿಗ ಫಖರ್ ಝಮಾನ್. 34 ಎಸೆತಗಳನ್ನು ಎದುರಿಸಿ 44 ರನ್ ಬಾರಿಸಿ ಕ್ರೀಸ್ ಕಚ್ಚಿನಿಂತಿದ್ದ ಫಖರ್‌ನನ್ನು ರನೌಟ್ ಮಾಡಿದ್ದು ಖುಷ್ದಿಲ್ ಶಾ. ಪಂದ್ಯದ 12ನೇ ಓವರ್‌ನಲ್ಲಿ ಖುಷ್ದಿಲ್ ಶಾ ಥರ್ಡ್‌ಮ್ಯಾನ್‌ನತ್ತ ಬಾರಿಸಿ 2 ರನ್‌ಗಳಿಗೆ ಕರೆ ನೀಡಿದರು. ಅತ್ತ ಖುಷ್ದಿಲ್ ಮಾತು ಕೇಳಿ ಫಖರ್ ಝಮಾನ್ 2ನೇ ರನ್‌ಗಾಗಿ ಕ್ರೀಸ್ ಬಿಟ್ಟಿದ್ದಾರೆ. ಆದರೆ ಈ ವೇಳೆ ರನ್ ಓಡಲು ಖುಷ್ದಿಲ್ ನಿರಾಕರಿಸಿದರು. ಅತ್ತ ತಿರುಗಿ ಓಡುವಷ್ಟರಲ್ಲಿ ನೆಲಕ್ಕುರುಳಿದ ಫಖರ್ ಝಮಾನ್ ಸಂಭಾಳಿಸಿಕೊಂಡು ಕ್ರೀಸ್‌ಗೆ ತಲುಪುವಷ್ಟರಲ್ಲಿ ರನೌಟ್ ಆದರು. ಇದೀಗ ಈ ರನೌಟ್ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

# ಇಬ್ಬರು ಔಟ್ ಓರ್ವನ ಎಂಟ್ರಿ

ಮ್ಯಾಂಚೆಸ್ಟರ್ ಟೆಸ್ಟ್ ಪಂದ್ಯದಿಂದ ಟೀಮ್ ಇಂಡಿಯಾದ ಯುವ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಹಾಗೂ ಯುವ ವೇಗಿ ಅರ್ಷದೀಪ್ ಸಿಂಗ್ ಹೊರಗುಳಿದಿದ್ದಾರೆ. ಎಡ ಮೊಣಕಾಲಿನ ಗಾಯದಿಂದಾಗಿ ನಿತೀಶ್ ಕುಮಾರ್ ರೆಡ್ಡಿ ಉಳಿದ ಎರಡು ಟೆಸ್ಟ್‌ಗಳಿಗೆ ಅಲಭ್ಯರಾಗಿದ್ದಾರೆ. ಅಲ್ಲದೆ ಶೀಘ್ರದಲ್ಲೇ ತವರು ತವರಿಗೆ ಮರಳಲಿದ್ದಾರೆ ಎಂದು ಬಿಸಿಸಿಐ ತಿಳಿಸಿದೆ.

ಇನ್ನು ಬೆಕೆನ್‌ಹ್ಯಾಮ್‌ನಲ್ಲಿ ನಡೆದ ತರಬೇತಿ ವೇಳೆ ನೆಟ್‌ನಲ್ಲಿ ಬೌಲಿಂಗ್ ಮಾಡುವಾಗ ಅರ್ಷದೀಪ್ ಸಿಂಗ್ ಅವರ ಎಡಗೈ ಹೆಬ್ಬೆರಳಿಗೆ ಗಾಯವಾಗಿದ್ದು, ಹೀಗಾಗಿ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಿಂದ ಅವರು ಹೊರಗುಳಿಯಲಿದ್ದಾರೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ. ಇದರೊಂದಿಗೆ ಓಲ್ಡ್ ಟ್ರಾಫೋರ್ಡ್ ಮೈದಾನದಲ್ಲಿ ನಡೆಯಲಿರುವ ನಿರ್ಣಾಯಕ ಟೆಸ್ಟ್ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಕಾಣಿಸಿಕೊಳ್ಳುವುದಿಲ್ಲ ಎಂಬುದು ಖಚಿತವಾಗಿದೆ.

ಯುವ ವೇಗಿ ಎಂಟ್ರಿ



ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಪಂದ್ಯದ ವೇಳೆ ಟೀಮ್ ಇಂಡಿಯಾದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ತೋರು ಬೆರಳಿಗೆ ಗಾಯ ಮಾಡಿಕೊಂಡಿದ್ದರು. ಚೆಂಡು ಹಿಡಿಯುವ ಯತ್ನದಲ್ಲಿ ಪಂತ್ ಅವರ ಬೆರಳಿಗೆ ಗಾಯವಾಗಿದ್ದು, ಹೀಗಾಗಿ ಅವರು ಮುಂದಿನ ಪಂದ್ಯದಲ್ಲಿ ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಯಲಿದ್ದಾರೆ ಎಂದು ತಿಳಿದು ಬಂದಿದೆ. ಅಂದರೆ ಮ್ಯಾಂಚೆಸ್ಟರ್‌ನಲ್ಲಿ ಟೀಮ್ ಇಂಡಿಯಾ ಪರ ಧ್ರುವ್ ಜುರೇಲ್ ಅಥವಾ ಕೆಎಲ್ ರಾಹುಲ್ ವಿಕೆಟ್ ಕೀಪಿಂಗ್ ಜವಾಬ್ದಾರಿ ನಿರ್ವಹಿಸುವ ಸಾಧ್ಯತೆಯಿದೆ. ನಿತೀಶ್ ಕುಮಾರ್ ರೆಡ್ಡಿ, ಅರ್ಷದೀಪ್ ಸಿಂಗ್ ಗಾಯಗೊಳ್ಳುತ್ತಿದ್ದಂತೆ ಟೀಮ್ ಇಂಡಿಯಾ ಯುವ ವೇಗಿ ಅನ್ಶುಲ್ ಕಂಬೋಜ್ ಅವರನ್ನು ಇಂಗ್ಲೆಂಡ್‌ಗೆ ಕರೆಸಿಕೊಂಡಿದೆ. ಈ ಹಿಂದೆ ಭಾರತ ಎ ತಂಡವನ್ನು ಪ್ರತಿನಿಧಿಸಿದ್ದ ಕಂಬೋಜ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 41 ಇನಿಂಗ್ಸ್‌ಗಳಿಂದ ಒಟ್ಟು 79 ವಿಕೆಟ್ ಕಬಳಿಸಿದ್ದಾರೆ.



# 4ನೇ ಟೆಸ್ಟ್‌ನಲ್ಲಿ ಪಂತ್ ಕೇವಲ ಬ್ಯಾಟರ್

ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದಲ್ಲಿ ರಿಷಭ್ ಪಂತ್ ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಯಲಿದ್ದಾರೆ. ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫೋರ್ಡ್ ಮೈದಾನದಲ್ಲಿ 22ಕ್ಕೆ ನಡೆಯಲಿರುವ ಈ ಪಂದ್ಯದಲ್ಲಿ ಪಂತ್ ವಿಕೆಟ್ ಕೀಪಿಂಗ್ ಮಾಡುವ ಸಾಧ್ಯತೆಯಿಲ್ಲ.

ಅವರ ಬದಲಿಗೆ ಧ್ರುವ್ ಜುರೇಲ್ ಅವರನ್ನು ವಿಕೆಟ್ ಕೀಪರ್ ಬ್ಯಾಟರ್ ಆಗಿ ಕಣಕ್ಕಿಳಿಸಲು ಟೀಮ್ ಇಂಡಿಯಾ ಮ್ಯಾನೇಜ್ಮೆಂಟ್ ಚಿಂತಿಸಿದೆ. ಲಾರ್ಡ್ಸ್ ಮೈದಾನದಲ್ಲಿ ನಡೆದ 3ನೇ ಟೆಸ್ಟ್ ಪಂದ್ಯದ ವೇಳೆ ಕೀಪಿಂಗ್ ಮಾಡುವಾಗ ರಿಷಭ್ ಪಂತ್ ಅವರ ಬೆರಳಿಗೆ ಗಾಯವಾಗಿತ್ತು. ಡೈವ್ ಹೊಡೆದು ಚೆಂಡು ಹಿಡಿಯುವ ಯತ್ನದಲ್ಲಿ ಅವರ ಎಡಗೈನ ತೋರು ಬೆರಳಿಗೆ ಗಾಯವಾಗಿದ್ದು,

ಹೀಗಾಗಿ ಅವರು ಅರ್ಧದಲ್ಲೇ ಮೈದಾನ ತೊರೆದಿದ್ದರು. ಅಲ್ಲದೆ ಪಂತ್ ಬದಲಿಗೆ ಎರಡು ಇನಿಂಗ್ಸ್‌ಗಳಲ್ಲಿ ಧ್ರುವ್ ಜುರೇಲ್ ವಿಕೆಟ್ ಕೀಪಿಂಗ್ ಮಾಡಿದ್ದರು. ಇದಾಗ್ಯೂ ರಿಷಭ್ ಪಂತ್ ಮೂರನೇ ಟೆಸ್ಟ್ ಪಂದ್ಯದಲ್ಲಿ ಬ್ಯಾಟಿಂಗ್ ಮಾತ್ರ ಮಾಡಿದ್ದರು. ಅಂದರೆ ಇಲ್ಲಿ ಪಂತ್‌ಗೆ ಬ್ಯಾಟಿಂಗ್ ಮಾಡುವುದು ಕಷ್ಟಕರವಲ್ಲ. ಆದರೆ ಗಾಯದ ಕಾರಣ ವಿಕೆಟ್ ಕೀಪಿಂಗ್ ಮಾಡುವುದೇ ದೊಡ್ಡ ಸವಾಲಾಗಲಿದೆ. ಹೀಗಾಗಿ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ರಿಷಭ್ ಅವರನ್ನು ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಸಲು ಪ್ಲ್ಯಾನ್ ರೂಪಿಸಲಾಗಿದೆ. ಇತ್ತ ರಿಷಭ್ ಪಂತ್ ಕೇವಲ ಬ್ಯಾಟರ್ ಆಗಿ ಕಣಕ್ಕಿಳಿದರೆ, ವಿಕೆಟ್ ಕೀಪಿಂಗ್ ಜವಾಬ್ದಾರಿ ಧ್ರುವ್ ಜುರೇಲ್ ಅಥವಾ ಕೆಎಲ್ ರಾಹುಲ್ ಹೆಗಲೇರಲಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966